॥ ಶ್ರೀಬಸವೇಶ್ವರ ಪ್ರಸನ್ನ ॥

ಶ್ರೀಬಸವೇಶ್ವರನ ಚರಿತ್ರ.

— ಲೇಖಕ —

ಶೃಂಗಿಗೋತ್ರ, ವೃಷ್ಟಿಸೂತ್ರ,
ದ್ವಿವೆಕ್ಕಪ್ಪುವರಪ, ಬೆಸನಪ್ಪ ಪ್ರಪೌತ್ರ,
ಸಿದ್ಧಪ್ಪ ಪೌತ್ರ, ಮರಿಸಿದ್ಧಪ್ಪ ಪುತ್ರ,
ಸಿಂಬಿಗಿ ಸಿದ್ಧಪ್ಪ,
ಬಳ್ಳಾರಿ.

Q234 (Y;4;18)
33F7

ಪ್ರತಿ ೧೦೦೦ ಪ್ರತಿಗಳು.

HT REGISTERED.

ಂಕರ ವಿಲಾಸ ಮುದ್ರಾಲಯ, ಬಳ್ಳಾರಿ.

ಬೆಲೆ ರೂ. 1—0—0,

1927.

CC-0. Jangamwadi Math Collection. Digitized by eGangotri

Q234(Y:4:68) 4884
33F7
Sindigi Siddara,
Basveshwar Charitre

CC-0. Jangamwadi Math Collection. Digitized by eGangotri

33F7 ನಂ೨೨೪

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

❁❁❁❁❁

Please return this volume on or before the date last stamped
Overdue volume will be charged 1/- per day.

CC-0. Jangamwadi Math Collection. Digitized by eGangotri

Q234 (Y:4:68) 4884
33F7
Sindigi Siddara,
Baseshwar Charitre

CC-0. Jangamwadi Math Collection. Digitized by eGangotri

ಶ್ರೀ ಬಸವೇಶ್ವರನ ಚರಿತ್ರೆ.

— ಲೇಖಕ —

ಶೃಂಗಗೋತ್ರ, ಸೃಷ್ಟಿಸೂತ್ರ,

ವಿವಕ್ತಪುರವರ, ಬಸವಪ್ಪ ಪ್ರಪೌತ್ರ,

ಸಿದ್ಧಪ್ಪ ಪೌತ್ರ, ಪುರಸಿದ್ಧಪ್ಪ ಪುತ್ರ,

ಸಿಂದಿಗಿ ಸಿದ್ಧಪ್ಪ,

ಬಳ್ಳಾರಿ.

ಪ್ರಥಮ ಮುದ್ರಣ ೧೦೦೦ ಪ್ರತಿಗಳು.

COPY RIGHT REGISTERED.

ಶಂಕರ ವಿಲಾಸ ಮುದ್ರಾಲಯ, ಬಳ್ಳಾರಿ.

ಬೆಲೆ ರೂ. 1—0—0.

1927.

CC-0. Jangamwadi Math Collection. Digitized by eGangotri

ADGURU VISHWARADHYA
A SIMHASAN JNANAMANDIR
LIBRARY
gamawadi Math, Varanasi
c. No. 4884

CC-0. Jangamwadi Math Collection. Digitized by eGangotri

SRI JAGADGURU VISHWARADHYA
JNANA SIMHASAN JNANAMANDIR
LIBRARY,
Jangamwadi Math, VARANASI
Acc. No. 2591

CC-0. Jangamwadi Math Collection. Digitized by eGangotri

ಶ್ರೀಬಸವೇಶ್ವರನು ಲೋಕದಲ್ಲಿ ವೀರಶೈವ
ಮತವನ್ನು ದ್ಧಾರಮಾಡಿದುದಕ್ಕೆ
ಆತನ ಪ್ರಕಾಶವು ಬೀರಿ ಲೋಕಕಲ್ಯಾಣವಾಗಲೆಂದು
ಆತನ ಅಡಿದಾವರಿಗಳಿಗೆ ಈ ಪುಸ್ತಕವನ್ನು
ಸಮರ್ಪಿಸಿರುತ್ತೇನೆ.

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamwadi Math, Varanasi
Acc. No. 4868

ಸಿದ್ಧಪ್ಪ.

CC-0. Jangamwadi Math Collection. Digitized by eGangotri

C. 20.

ವಿಷಯ ಸೂಚಿಕೆ.

1-ನೆಯ	ಪ್ರಕರಣ	- ಮುಖ್ಯಜೀವಿತವು	1
2	ಡಿ ಡಿ	- ವಿದ್ಯೆಯು, ಪುಸ್ತ್ರ ಗುಣಾವಳಿಯು	24
3	ಡಿ ಡಿ	- ಬಸವೇಶ್ವರನ ಕಾಲದ ಸಂಘದ ಸ್ಥಿತಿ	31
4	ಡಿ ಡಿ	- ಶ್ರೀ ಬಸವೇಸ್ವರನ ಮುಖ್ಯ ವಚನಗಳು	42
5	ಡಿ ಡಿ	- ಬಿಜ್ಜಳನ ಚರಿತ್ರೆ	69
6	ಡಿ ಡಿ	1 ಬಾಗೇವಾಡಿ ಗ್ರಾಮವು	81
		2 ಕಲ್ಯಾಣಪಟ್ಟಣವು	84
		3 ಸಂಗಮಕ್ಷೇತ್ರ	90
		4 ವತ್ಸರಾನುಕ್ರಮಣಿಕೆ	93
		5 ಗ್ರಂಥಾವಳಿ	95
		6 ಇತರ ಸಮಕಾಲೀನರು	97
		7 ಸಾಂಕೇತಿಕ ಗ್ರಂಥವಿವರ	99
		8 ಪ್ರಮಾಣಗಳು	103

ಶ್ರೀ ಬಸವೇಶ್ವರನ ಚಿತ್ರಪಟವು ಕೇವಲ ಮಾನುಷಿಕ ಮಾನಸಿಕ ಕಲ್ಪನಾ ಭಾವಚಿತ್ರವಿರವೆ ತಂಜಾವೂರ ಅರಸರಿಂದ ಚಿತ್ರಿಸಲ್ಪಟ್ಟು ಇದ್ದಿತು. ಇತ್ತೀ ಚಿಗೆ ಮೇಲ್ಕಂಡ ಅರಸುಮನೆತನದವರು ಕಾಲನಪಾಶಕ್ಕೊಳಗಾಗಲು ಮೇ ಲ್ಕಾಣಿಸಿದವರ ಅನೇಕ ಪದಾರ್ಥಗಳು ಆಂಗ್ಲೀಯರಿಂದ ಪಣ್ಯಯೋಗ್ಯವಾಗಿ ಆಗಲು ಆತರುಣದಲ್ಲೀ ಮಧ್ಯರಾಷ್ಟ್ರದ ಉಮರಾವತಿಯ ನಾರಾಯಣರಾಮ ಲಿಂಗ ಬಾಮಣಗಾವಕರಕೆಂಬುವರು ಕ್ರಯಕ್ಕೆ ತೆಗೆದುಕೊಂಡರು. ಇವರು ಸೊಲ್ಲಾಪುರದ ಜೀರಿಗೆ ಗಂಗಪ್ಪನವರಿಗೆ ಮುದ್ರಿಸುವ ಹಕ್ಕನ್ನು ಕೊಟ್ಟರು. ಈ ಚಿತ್ರವನ್ನು ಬಲಪಡಿಸುವುದಕ್ಕೆ ಈಗಲೂ ತಂಜಾವೂರಿನಲ್ಲಿ ಬೃಹದೇಶ್ವರನ ಗುಡಿಯಲ್ಲಿಸ್ವಾಮಿಯ ಎದುರಿಗಿರುವ ದೊಡ್ಡ ಸುಂದರ ನಂದಿಯ ಮಂಟಪ ದಲ್ಲಿದೆಯೆಂದು ತಿಳಿಯುತ್ತದೆ. ಆದುದರಿಂದ ಈ ಚಿತ್ರವಿಷಯವನ್ನು ನಿಜಾಂಶ ವೆಂದು ನಂಬಬಹುದು. ತತ್ಕಾಲದಲ್ಲಿ ದ್ರವ್ಯಾಭಾವದಿಂದ ವಿಚಾರವನ್ನು ವಿರಮಿಸಿಕೊಂಡು ಮುಂದೆ ವಿಶದೀಕರಿಸುವೆನು. ಈ ಚಿತ್ರವನ್ನು ದೊರಕಿಸಿ ಕೊಟ್ಟುದಕ್ಕಾಗಿ ಬಾಮಣಗಾವಕರರಿಗೂ ಮತೀಯರಲ್ಲಿ ವಿಶೇಷ ಪ್ರಚಾರ ವನ್ನು ಮಾಡಿದುದಕ್ಕಾಗಿ ಜೀರಿಗೆಯವರಿಗೂ ಸಮಾಜವೇ ತುಂಬಾ ಋಣಿ ಯಾಗಿರುವುದು.

CC-0. Jangamwadi Math Collection. Digitized by eGangotri

ಕ ಲ ಚೂ ರಿ ವಂ ಶ ವೃ ಕ್ಷ.

ಚಂದ್ರು (ಪಾಂಡ್ಯ) ವಂಶದ ಶಾಂತನು (ಶಾಂತಮುಸಮು) ಹರಸೂರು - ಕಾಳಿಗಿಶಾಸನಗಳು (1173)

|

ಸಗರರಸ

|

ಕನ್ನಮು (ಕರ್ಣರಾಜ, ಗೋಹಿಲರಾಜ)

|

(ಬಿಜ್ಜರಾಜ 1, ವೀರಬಿಜ್ಜಳ 1) ಬಿಜ್ಜಳ 1 (ನಾರಣ, ಸಂದರಾಜ), ಹರಿಹರ - ಕೋಕಟನೂರುಶಾಸನಗಳು 1174.

|

(1) ಅಮ್ಮುಗಿ (2) ಸಂಕಮು1 (ಶಂಖವರ್ಮ) (3) ಕನ್ನರ (4)ಜೊಗಮು (ಚೋಳಪಾಂಡ್ಯ, ಹೆಮ್ಮಡಿರಾಯ 1)

|

(ಪಂಡಿತ ಪಾಂಡ್ಯ, ಪದ್ಮಬಿಜ್ಜಣ ವೀರಮಾರ್ದಿನ್, ನಿಜಭುಜಬಲಚಕ್ರವರ್ತಿ) ಪೆ (ಪೇ, ಹೆ) ರ್ಮ (ರ್ಮಾ, ಮ್ಮ) ಡಿ II, ಕ್ರೀ. ಶ. 1128-1155 | = ಹೆಂಡತಿ ರಾಗವತಿ (ಸಂಗೀತಚೂಡಾಮಣಿ)

(1) ಬಿ (ವಿ) ಜ್ಜ II, ಬಿ (ವಿ)ಜ್ಜಣ(ಳ) II (ಸುರ ಬಿಜ್ಜಣ, ಭುಜಬಲಚಕ್ರವರ್ತಿ, ತ್ರಿಭುವನಮಲ್ಲ, ನಿಶ್ಶಂಕಮಲ್ಲ) ಹೆಂಡತಿ ಏಚಲದೇವಿ 1156 1173

(2) ಕರ್ಣದೇವ (ಕನ್ನೈಶ) (ಸಿಂಹ(ಹಂಸ)ಧ್ವಜ, ವಜ್ರದೇವ)

(3) ಸೀ (ಶೀ) ತಾ (ಲಾ) ದೇವಿ (ಸಿರಿಯಾದೇವಿ) = ಎಲಬುರ್ಗೆಯ ಸಿಂದಚಾವುಂಡ II

|

(1) ಸೋಮ(ಮಿ,ಯಿ,ವಿ)ದೇವ, (ಈಶ್ವರ, ರಾಯಮುರಾರಿ, ಭುಜಬಲಮಲ್ಲ, ಭುವನೈಕಮಲ್ಲ, ವೀರ(ಚಿಕ್ಕ, ಶಿವ, ರಾಯ, ಅಳಿಯ)ಬಿಜ್ಜಣII ಯುವರಾಜ)= ಹೆಂಡತಿ ಸಾವಲದೇವಿ

(2) ಸಂಕಮುII (ನಿಶ್ಶಂಕಮಲ್ಲII)

ಬಿಜ್ಜಳ

(3) ವೀರನಾರಾಯಣ (ಆಹವಮಲ್ಲ, ಅಪ್ರತಿಮಲ್ಲ)

(4) ಸಿಂಘಣ.

|

(1) ಹೆಮ್ಮಲಿರಾಜ (ವೀರಹೆಮ್ಮಲಿರಾಯ, (ಕೂಡಲುಶಾಶನಿಕ ರಾಯನಾರಾಯಣ) (2) ಸುಲಕ್ಷಣೆ=ರೇಣುಕ (ರೇವಣ ಸಿದ್ಧ)

ಕುಕ್ಕನೂರು (1178) ಬ್ಯಾಹಟ್ಟಿ (1183) ಶಾಸನಗಳಲ್ಲಿ ಬಿಜ್ಜಳ I ನಿಗೂ ಪೇರ್ಮಾಡಿಗೂ ಮಧ್ಯದಲ್ಲಿ ರಾಜಳ, ಕೃಷ್ಣ (ಕರ್ಣ) ಎಂಬುವರನ್ನು ಸೇರಿಸಿದ್ದಾರೆ. ಕಾರಣವೇನೆಂದು.

CC-0. Jangamwadi Math Collection. Digitized by eGangotri



ಶ್ರೀರಸ್ತು.

ಶ್ರೀ ಬಸವೇಶ್ವರನ ಚರಿತ್ರೆ.

ಒಂದನೆಯ ಪ್ರಕರಣ.

ಇವನ ಮುಖ್ಯ ಜೀವಿತವು.

ಗಣೇಶಸಸ್ತ್ರಕಡ 1 ಕೊನೆಯ ಅವತಾರಿಕನಾದ ಜೇಷ್ಠ ಶುದ್ಧ ೧೫ ಮೂಲಾನಕ್ಷತ್ರದಲ್ಲಿ, 2 ಭರತಶಾಸ್ತ್ರವೇತ್ತನು, ಮೃದಂಗವಾದನಪ್ರಸಿದ್ಧನು ಒಂದುಸಾರಿ ಶಿವನವೇಷವನ್ನು ಧರಿಸಿದುದರಿಂದ ಪಾರ್ವತಿಯು ನಗಲು ಶಿವನಿಂದ ಶಾಪಗ್ರಸ್ತನಾದ ಪ್ರಮಥಗಣನಾಯಕನಾದ ನಂದೀಶ್ವರನಿಂದ 3 ಬೇಟೆಯಾದ, ಪರಶಿವನ ವಾಹನಮೂರ್ತಿಯೂ ಮೇಘಾಸುರನನ್ನು ಸಂಹರಿಸಿ ಲೋಕದಲ್ಲಿ ಮಳೆಬೆಳೆಗಳಿಂದ ಸಂತೋಷವನ್ನುಂಟುಮಾಡುವುದರಿಂದ ನಂದಿಯೆಂಬ ಸಾರ್ಥಕನಾಮವನ್ನು ಪಡೆದವನೂ ಧರ್ಮಮೂರ್ತಿಸ್ವರೂಪನೂ ಆದ ವೃಷಭೇಶ್ವರನು 4 ಕೈಲಾಸದಿಂದ ಭೂಲೋಕಕ್ಕೆ ಬಂದು ಬಾಗೆವಾಡಿ ಅಗ್ರಹಾರದ ಮುಂಡಿಗೆಪುರಭಾಗದ 5 ಶೈವಬ್ರಾಹ್ಮಣ ಗೌಡನಾದ ಸಾಂಖ್ಯಾಯನ ಗೋತ್ರದ 6 (ಕಾಶ್ಯಪ) ವಾಜಿಗಳಾದ ಗೋವರ್ಧನನ ಮಗ ಲಿಂಗಭಟ್ಟನ (ದೇವದಾಸ) ಮಗನಾದ ಮುಂಡ್ಯದ ಮಂಡಿಗೆಯ ಮಾದರಸ, (ಚಂದ್ರಮ) 7 ಹೆಂಡತಿಮಾದಲಾಂಬೆ ಇವರಿಗೆ ಪುತ್ರನಾಗಿ ಅವತರಿಸಿದನು. ಈ ಮಾದರಸನ ಪೂರ್ವಿಕರು ಮೈಸೂರು ಸೀಮೆಯ ಮುಂಡ್ಯಗ್ರಾಮದವರಿದ್ದು ಇಂಗಳೇಶ್ವರಗ್ರಾಮದಲ್ಲಿ ಬಂದು ಕೆಲಕಾಲ ಗೌಡಿಕೆಯಿಂದ ಜೀವಿಸಿದಂತೆ ನಂಬಬಹುದು. ಇವರು ಕೊಂಕಣ ಬ್ರಾಹ್ಮಣರೆಂಬುವುದು ಅಪೋಹವು. ಈ ಇಂಗಳೇಶ್ವರ ಗ್ರಾಮಕ್ಕೆ ಅತಿ ಪ್ರಾಚೀನಕಾಲದಲ್ಲಿ ತಿಂಗಳೇಶ್ವರವೆಂಬ ಹೆಸರಿತ್ತೆಂದೂ ತಿಳಿಯುತ್ತದೆ. 8 ಈ ಗ್ರಾಮವನ್ನು ಆಧುನಿಕವ್ಯಾಸನೂ (ವ್ಯಾಸರು ಅನೇಕರಿರುವರೆಂದು ಮುಂದೆ ವೀರಶೈವ ಚರಿತ್ರೆಯಲ್ಲಿ ತಿಳಿಸುವೆನು) ಬೆಂಗಳೂರು ಜೀರಿಗೆ ಬಸವಲಿಂಗಪ್ಪನೂ ಹಿಂಗುಳೀಪುರವೆಂದು ಕರೆದಿರುವರು. 9

CC-0. Jangamwadi Math Collection. Digitized by eGangotri

ಬಾಗೆವಾಡಿಯೆಂಬ ಪಟ್ಟಣವು ವಿಜಾಪುರದ ಆಗ್ನೇಯದಿಕ್ಕಿನಲ್ಲಿ 25 ಮೈಲಿನ ಮೇಲೆ ಅತಿ ಪ್ರಾಚೀನಕಾಲದಲ್ಲಿ ಭೋಗವತಿ 10 ಎಂಬ ಹೆಸರನ್ನು ಪಡೆದಿತ್ತು. ಇದನ್ನು ಬಸವೇಶ್ವರನ ಸಮಕಾಲೀನನಾದ ಸಿಂಗಿರಾಜನು ಸಮರ್ಥಿಸಿರುವನು. ಬಸವೇಶ್ವರನು ಇಂಗಳೇಶ್ವರದಲ್ಲಿ ಹುಟ್ಟಿದನೆಂದು ವ್ಯಾಸನು ಸಿ. ಹಯವದನ ರಾವು ಮುಂತಾದವರು ಬರೆದಿರುವುದಾಗಲಿ, 11 ಇಂಗಳೇಶ್ವರ ಪಾರ್ವತಿ ಅಗ್ರಹಾರದಲ್ಲಿ ಬಸವೇಶ್ವರನು ಹುಟ್ಟಿದನೆಂದು ವಿಲ್ಸನ್ ಫೋರೆಯು ಬರೆದಿರುವುದಾಗಲಿ 12 ಕೇವಲ ಕಲ್ಪನೆಯೆಂದು ತಿಳಿಯುತ್ತದೆ. ಆದರೆ ಕೆಲವೆಡೆಗಳಲ್ಲಿ ಇಂಗಳೇಶ್ವರ ಬಾಗೆವಾಡಿ 13 ಎಂಬ ಎರಡು ಗ್ರಾಮಗಳಲ್ಲಿ ಬಸವೇಶ್ವರನು ಹುಟ್ಟಿದನೆಂದು ಗುರುರಾಜನು ಸಿಂಗರಾಜನು ಭೀಮಕವಿಯು ಪಿಡುಪರ್ತಿ ಸೋಮನಾಥನು, ತೋಂಟದ ಸಿದ್ಧಲಿಂಗೇಯತಿಯು ಷಡಕ್ಷರದೇವನು ಮುಂತಾದವರು ಬರೆದಿರುವುದನ್ನು ಇಂಗಳೇಶ್ವರ ಸಮೀಪದ ಬಾಗೇವಾಡಿಯೇ 14 ಎಂದು ಮೇಲ್ಕಂಡವರೇ ಅನೇಕ ಕಡೆಗಳಲ್ಲಿ ನಿರ್ಧರಿಸಿರುವುದರಿಂದ ಯಾವ ಅನುಮಾನವಿಲ್ಲ. ಆದರೆ ವೀರಸಂಗಯ್ಯನು ನಂದಾವ್ಯಗಮದಲ್ಲಿ ನೀಲಗಿರಿ ಗ್ರಾಮದಲ್ಲಿ ಹುಟ್ಟಿದನೆಂತಲೂ ಪ್ರಥಮ ಶಾಖೆಯು ಶಿವತ್ಸ ಗೋತ್ರಜನೆಂತಲೂ 15 ಬರೆದಿರುವುದು ನೋಡಿದರೆ ಸಪೀದಾಶ್ಚರ್ಯ16 ಜನಕವಾಗುತ್ತಿದೆ. ಏಕಂದರೆ ಈ ಗ್ರಂಥವು ಅತ್ಯಂತ ಅರ್ವಾಚೀನ ಮಾಹಭಕ್ತಿ ಕಲ್ಪನಾಗ್ರಂಥವೆಂದು ಸ್ಪಷ್ಟವಾಗಿ ತೋರುತ್ತದೆಂದು ಹೇಳುವುದಕ್ಕೆ ಯಾವ ಸಂಶಯವಿಲ್ಲ. ಮತ್ತು ಬಾಗೆವಾಡಿಗೆ ನೀಲಗಿರಿಯೆಂಬ ಹೆಸರಿತ್ತೆಂಬ ಬಗೆಗೆ ಯಾವ ಶಾಸನಾಧಾರವೂ ಇಲ್ಲ. ಆದರೆ ಬಸವೇಶ್ವರನು ಹುಟ್ಟಿದ ನೆನ್ನುವ ಸ್ಮಾರಕಕ್ಕಾಗಿ ವಾರ್ಷಿಕೋತ್ಸವದಿಂದ ಕೋಭಿಸುತ್ತ ಬಿಲ್ಲದ ಬಾಗೇವಾಡಿಯಿಂದ ಬೇರೆಯಾದ ಬಸವನಬಾಗೇವಾಡಿಯೇ ಎಂದು ಈಗಲು ಸುಪ್ರಸಿದ್ಧವಾಗಿರುವುದು ನಿರ್ವಿವಾದಾಂಶವಾಗಿದೆ. ಇದನ್ನು ಗುಬ್ಬಿಯ ಮಲ್ಲಣಾರ್ಯನು, ಕೋಳೂರ ಶಂಕರ ಕವಿಯು, ಬೆಂಗಳೂರು ಮಹಂತಯ್ಯನು ಮುಂತಾದವರು ಅನುಮೋದಿಸಿರುವರು. 17 ಲಿಂಗಭಟ್ಟನ ಕಾಲದಲ್ಲಿ ಇಂಗಳೇಶ್ವರ ಗೌಡಿಕೆಯನ್ನು ಬಿಟ್ಟು, ಮಾದರಸನು ಬಾಗೇವಾಡಿಯ ಗೌಡಿಕೆಯನ್ನು ವಹಿಸಿದಂತೆ ತೋರುತ್ತದೆ. ಆದರೆ ಧರಣೇಂದ್ರ ಕವಿಯು ಬಿಜ್ಜಳರಾಜನಲ್ಲಿ ಮಾದರಸನು ಪುರೋಹಿತನಾಗಿದ್ದನೆಂದೂ 18 ಚನ್ನ ಮಹಾಂತಯ್ಯ ಕವಿಗಳು ರಾಜನಿದ್ದನೆಂದೂ ಬರೆದಿರುವುದು 19 ನಿಜವಿರಲಾರದೆಂದು ನಿಸ್ಸಂಶಯವಾಗಿ ಹೇಳಬಹುದು. ಏಕೆಂದರೆ ಈ ಪ್ರಾಂತ್ಯದಲ್ಲಿ (ಕ್ರೀ. ಶ. 1128) ಸುಮಾರಿನಲ್ಲಿ

CC-0. Jangamwadi Math Collection. Digitized by eGangotri

ನೀಲಕಂಠನಾಯಕನೆಂಬುವನು ಆಳುತ್ತಿದ್ದನೆಂದು ಧಾರಾಳವಾಗಿ ಹೇಳತಕ್ಕ ವ್ಯಾಗಿದೆ. 20 ಮತ್ತು ಪೂಜ್ಯ ಬಸವೇಶ್ವರನ ತಂದೆಯೆಂದುಯಾದರು ಭಕ್ತಿಯಿಂದ ಉತ್ಪ್ರೇಕ್ಷಿಸಿ ಹೇಳಿರಬಹುದಾಗಲಿ ಬೇರೆ ಇಲ್ಲ. ಈ ಮಾದರಸನಿಗೆ ಗುರುರಾಜ ಕವಿಯು ಮಾಧವಾರ್ಜುನೆಂತಲು 21 ವಿಲ್ಲನ್ ಧೊರೆಯು ಮಾದಲರಸನೆಂತಲು 22 ಮಸುಗುಳಿ ಶಾಸನದಲ್ಲಿ ದೇವದಾಸನೆಂತಲೂ 23 (ಚಂದ್ರಮ) ಬರೆದಿರುವರು. ವೆಂಕಟರಂಗೋ ಕಟ್ಟಯೂ ಅದೇ ವಿಲ್ಸನ್ ಡೊರೆಯೂ ಒಂದೆಡೆಯಲ್ಲಿ ಮಾದಿಗರಾಯನೆಂದು ಸಂಬೋಧಿಸಿರುವುದು ಮತವಿದ್ವೇಷ ಸೂಚಕವೆಂದು ದೃಢವಾಗಿ ಬಲಪಡಿಸುತ್ತದೆ.24 ಮಾದಲಾಂಬಿಗೆ ಚರಿತ್ರಶೋಧಕರೂ ಜೈನಕವಿಗಳೂಮಹಾದೇವಿ,ಮಹಾಂಬೆ,ಮಹದಾಂಬೆ, ವೇದವತಿ,ಚಂದ್ರಮಾ25 ಎಂಬ ಉಪನಾಮಗಳನ್ನು ಕೊಟ್ಟಿರುವರು. ಮಾದಲಾಂಬೆಯು ಮಕ್ಕಳಾಗುವುದಕ್ಕೆ ಪ್ರತಿ ತಿಂಗಳು ತಪ್ಪದೆ 36 ತಿಂಗಳುಗಳಲ್ಲಿ ವಿಧಿಪತ್ತಾಗಿ ನಂದಿವ್ರತವನ್ನು ಪ್ರತಿಸೋಮವಾರದಲ್ಲಿ ಆಚರಿಸಿದ್ದರಿಂದ ನಂದೀಶ್ವರನು ಪ್ರಸನ್ನನಾಗಲು, ಗರ್ಭವನ್ನು ಧರಿಸಿ, ನವಮಾಸದಲ್ಲಿ ಕ್ರೀ. ಶ. 1127 ಕ್ಕೆ ಸರಿಯಾಗುವ ಪ್ಲವಂಗಸಂವತ್ಸರ ಆಶ್ವೀಜ ಬಹುಳ ಚೌತಿ ಸೋಮವಾರ ಆರ್ದ್ರಾನಕ್ಷತ್ರ ಶಿವಯೋಗದಲ್ಲಿ ಹಸ್ತದಲ್ಲಿ ಅಂಕುಶರೇಖೆಯನ್ನೊಳಕೊಂಡ ವೃಷಭೇಶ್ವರನೆಂಬ ಮಗನನ್ನು ಹಡೆದಳು. 26 ಗಜಗರ್ಭದಂತೆ ಮೂರೊಂಬತ್ತು ತಿಂಗಳುಗಳಲ್ಲಿ ಹುಟ್ಟಿದ ಶಿಶುವುವಿಶೇಷಗುಣ ಯುಕ್ತವಾಗುವುದೆಂದು ಲೌಕಿಕ ವಿಶ್ವಾಸವಿರುವುದರಿಂದಲೂ, 36 ಮಾಸಗಳಲ್ಲಿ ನಂದಿವ್ರತವನ್ನು ತಪ್ಪದೆ ಆಚರಿಸಿದುದರಿಂದಲೂ ಭೀಮಕವಿಯು,ಸೋಮಕವಿಯು,ಷಡಕ್ಷರದೇವನು,ಕಂಚಿ ಶಂಕರ ಕವಿಯು ಮುಂತಾದವರು ಭಕ್ತಿಪರವಶರಾಗಿ ಉತ್ಪ್ರೇಕ್ಷಿಸಿ ಮೂರುವರ್ಷಗಳಿಗೆ ಹತ್ತೆಂದು ಬರೆದಿರುವುರಾಗಲಿ ಬೇರೊಂದಿಲ್ಲ. ಆದರೆ ವೀರಸಂಗಯ್ಯನು ನಂದ್ಯಾಗಮದಲ್ಲಿ.ಬಸವೇಶ್ವರನು ಜೋಳದ ಬಾಗಿದ ಒಡೆತನೆಯಲ್ಲಿ ಹುಟ್ಟಿ ಮಾದಲಾಂಬೆಗೆ ಸಿಕ್ಕಂತೆಯೂ.27 ಬಾಗೆವಾಡಿಗ್ರಾಮಕ್ಕೆ ವಿಶೇಷಾರ್ಥದಿಂದ ಕಲ್ಪಿಸಿಯೂ ಬರೆದಿರುವುದು ಮೂಢಭಕ್ತಿ ವಿಶೇಷವೆ. ಇದನ್ನು ಸಮಕಾಲೀನ ಸೀಗರಾಜನು ಖಂಡಿಸಿ ನಿಜಸ್ಥಿತಿಯನ್ನು ಪೂರ್ವದಲ್ಲಿಯೇ ಬರೆದಿರುವನು. ಇದನ್ನು ಶಂಕರಕವಿಯು ಅನುಮೋದಿಸಿರುವನು. 28 ಕ್ರೀ. ಶ. 1127 ಸಂವತ್ಸರದಲ್ಲಿ ಹುಟ್ಟಿದನೆಂಬ ಭಾವಾರ್ಥವನ್ನು ಕಾರ್ನಿಷ್ ಧೊರೆಗಳು ಮದ್ರಾಸ ಜನಪರಿಗಣನವರದಿ (ಖಾನೇಷುಮಾರಿ) ಯಲ್ಲಿ ಸೂಚಿಸಿರುವರು. 29 ಇದನ್ನು ಫಿನ್ನಿಸಿ ಯನ್ ಆರ್ ಕರಿಬಸವಶಾಸ್ತ್ರಿಗಳು ಕ್ರೀ. ಶ. 1132 ರಲ್ಲಿ ಹುಟ್ಟಿದ

CC-0. Jangamwadi Math Collection. Digitized by eGangotri

ನೆಂದು, 30 ವಿರುಪಾಕ್ಷಪ್ಪ ಚಿನ್ನಪ್ಪ ಹೂಲಿ ಯವರು ಕ್ರೀ. ಶ. 1160 ರಲ್ಲಿ ಹುಟ್ಟಿದನೆಂದು 31 ಆರ್. ಸಿ. ಸಿ. ಕಾರ್ಥೋಪೆಯು ಎಡ್ಗರ್ ಥರ್ಸ್ಟನ್ ಧೊರೆಗಳು ಕ್ರೀ. ಶ. 1106-ರಲ್ಲಿ ಹುಟ್ಟಿದನೆಂದು 32 ಬರೆದಿರುವದು ಕೋಚ ನೀಯವಾಗಿದೆ.

ವೃಷಭೇಶ್ವರನು ಜೇಷ್ಟಶುದ್ಧ 15-ರಲ್ಲಿ ಭೂಲೋಕದಲ್ಲಿ ಬಂದನೆಂಬು ವುದು ಮಳೆಬೆಳಯ ಸುಭಿಕ್ಷಸೂಚಕ ಕಾರಣುಣ್ಣೆಯೇ ಆಗಿ ಪ್ರಸಿದ್ಧವಾಗಿ ರುವುದು. ಆಮೇಲೆ ಆಶ್ವೀಜಪೂರ್ಣಿಮೆಯಲ್ಲಿ ಅವತರಿಸಿದನೆಂಬುವದು ಸಹಜ ವಾಗಿಯೇ ಸಿದ್ಧವಾಗುತ್ತದೆ. ಹೀಗಿದ್ದರೂ ಅಘುನಿಕವ್ಯಾಸನು ವೈಶಾಖ ಶುದ್ಧದಲ್ಲಿ ರೋಹಿಣಿನಕ್ಷತ್ರದಲ್ಲಿ 33 ಬಸವೇಶ್ವರನು ಹುಟ್ಟಿದನೆಂದು ಬರೆ ದಿರುವನು. ಇದನ್ನು ಅನುಸರಿಸಿಯೇ ಇತ್ತಲಾಗಿ ಜಯಂತಿಯನ್ನು ವೈಶಾಖ ದಲ್ಲಿ ಎಲ್ಲರೂ ಆಚರಿಸುತ್ತಾರೆ. ಆದರೆ ಇದನ್ನು ಛಿನ್ನಿಸಿ ಮಹಾಂತಯ್ಯನು ಮಾಘಬಹುಳಚತುರ್ದಶಿ ಸೋಮವಾರದಲ್ಲಿ ಹುಟ್ಟಿದನೆಂದು ಬರೆದಿರುವನು. 34 ಕಾಲಜ್ಞಾನವಚನದಲ್ಲಿ ವಿಕ್ರಮ ಸಂ॥ ಶ್ರಾವಣ ಶು॥೫ ಸೋಮವಾರ ಬೆಳಗಿ ನಲ್ಲಿ ಎಂದು, ಲಕ್ಕಣ್ಣದಂಬೇಶನ ಶಿವತತ್ವಚಿಂತಾಮಣಿಗ್ರಂಥದಲ್ಲಿ ಸಿದ್ಧಾರ್ತಿ ಕಾರ್ತ್ತೀಕ ಶು॥೧೫ ಸೋಮವಾರ ಮಧ್ಯರಾತ್ರಿಯಲ್ಲಿಯಂದು (ಕ್ರೀ.ಶ. 1139) ಮುಂತಾಗಿ ಬರೆದಿರುವುದು. 35 ಹರಪನಹಳ್ಳಿ R. ಶಾಂತಪ್ಪಾಜಿಯು ಕ್ರೀ. ಶ. 1115-ಕ್ಕೆ ಸರಿಯಾಗುವ ಮನ್ಮಥ ಸಂ॥ ವೈಶಾಖ ಶು॥೪ ಯಲ್ಲಿ ಜನಿಸಿದನೆಂದು ಬರೆದಿರುವರು. 36 G. J. ಸೋಮಯಾಜಿಗಳು B. A. L. T. ಹತ್ತುವರೆ ತಿಂಗಳಲ್ಲಿ ರಾತ್ರಿಯಲ್ಲಿ ಜನಿಸಿದರೆಂದು ಬರೆದಿರುವರು 37. ಮತ್ತು ಸಿಂಗಿರಾಜನು ಬಸವೇಶ್ವರನಸಮಕಾಲೀನನಾದರೂ ಆಶ್ವೀಜಶುದ್ಧ 14 ಆರ್ದ್ರಾ ನಕ್ಷತ್ರವೆಂದು, ತಪ್ಪುಬರೆದಿರುವನು. 38 ಏಕೆನಲು ಆ ಆ ಮಾಸಗಳಲ್ಲಿ ಆ ಆ ಹುಣ್ಣಿಮೆದಿನಗಳಲ್ಲಿ ಆ ಆ ಮಾಸಿಕನಾಮ ನಕ್ಷತ್ರಗಳೇ ಜ್ಯೋತಿಷಶಾಸ್ತ್ರ ರೀತಿಯಿಂದ ಪ್ರಸಿದ್ಧವಿರುವದರಿಂದ ಈ ಶುದ್ಧ 14 ದಿನದಲ್ಲಿ ರೇವತಿ ನಕ್ಷತ್ರ ವಿರಬೇಕಾಗುವುದು. ಆದುದರಿಂದ ಮೇಲಿನ ಎಲ್ಲ ತಿಥಿಗಳು ಅಸಿದ್ಧವಾಗಿ ನಂಬಲರ್ಹವಾಗುವದಿಲ್ಲ. ಆದರೆ ಆರ್ದ್ರಾನಕ್ಷತ್ರ ನಾಮಸ್ಫುಟೀಕರಣದಿಂದ ಲೋಪೋಪರಿಮೇಲೆ ಬಹುಳ ಳ ಎಂಬುವುದು ಸಯುಕ್ತಿಕವಾಗುತ್ತದೆ. ಆದ್ದರಿಂದ ಗುಣಜ್ಞರು ವಿಪರೀತಕಲ್ಪನಮತಿಗೀಡಾಗದೆ ಸೂಕ್ಷ್ಮವಾಗಿ ಗ್ರಹಿಸಿ

CC-0. Jangamwadi Math Collection. Digitized by eGangotri

ಸಂಡಿತರೂ ಚರಿತ್ರಶೋಧಕರೂ ಎಲ್ಲಾ ಅಂಶಗಳನ್ನು ಸಮಂಜಸಮಾಡಿಕೊಂಡು ಜಯಂತಿಯನ್ನು ಮಾರ್ಪಡಿಸಿ ಕೀರ್ತಿಭಾಜನಕ್ಕೊಳಗಾಗುತ್ತಾರೆಂದು ಸಂಪೂರ್ಣ ನಂಬಿರುವೆನು.

ಹುಟ್ಟಿದಾಗ ಶಿಶುವು ಅಳದೆ ಇರಲು ತಂದೆತಾಯಿಗಳು ಭಯಪಟ್ಟರಲು ಶ್ರೀ ಕೃಷ್ಣನಂತೆ ಪರಮಾತ್ಮಸ್ವರೂಪನಾದ ಗುರುಲಿಂಗಜಂಗಮ ಅಭೇದನಾದ ಕೂಡಲಿನ ಸಂಗಮೇಶ್ವರನು ಪಂಚಗಣಾಧೀಶ್ವರರನ್ನೊಡಗೊಂಡು ಬಂದು, 39 ವಿಚಾರಿಸಿ, ನಂದೀಶ್ವರನ ಅವತಾರವಾದರೂ ಲೋಕವ್ಯವಹಾರಿಕ ಭಿನ್ನಶರೀರಿಯಾದ್ದರಿಂದ ಪಾಪಪುಣ್ಯಾಧೀನನಾಗದ ಶಿಶುವಿಗೆ ವಿಭೂತಿಯು ಲೇಪನದ್ವಾರ ಅಪರ ಭಯವನ್ನು ಪರಿಹರಿಸಿ, ಶಾಸ್ತ್ರಗತ ಕೇವಲ ಶಬ್ದವಾದಾತ್ಮಕ ಗರ್ಭಾಷ್ಟಮಮಾಸದ ಲಿಂಗಧಾರಣ ವಿಧಿಯನ್ನು ಖಂಡಿಸಿ, ಭರ ಕಲಶಸ್ಥಲ ಸಂಕೇತ ಮಾಡದೆ ಪ್ರತ್ಯಕ್ಷ ಗುರುಸಂಕೇತಮಾಡಿ ಅಂತರಾತ್ಮನಲ್ಲಡಕವಾಗಿದ್ದ ಲಿಂಗವನ್ನು ಬಹಿರಂಗದಲ್ಲಿ ತಂದು ಕಟ್ಟಿ, ಮಾರ್ಗಾಚಾರಕ್ರಮವನ್ನು ತಿಳಿಸಿ ಹೋದನು. ಹುಟ್ಟಿದ ಮೂರನೆದಿನದಲ್ಲಿ ಲಿಂಗಕಟ್ಟಿದನೆಂದು ವೀರ ಸಂಗಯ್ಯನು, 40 ಏಳನೇದಿನದಲ್ಲಿ ಲಿಂಗಕಟ್ಟಿದನೆಂದು ಶಂಕರನು 41 ಬರೆದಿರುವುದು ಶಾಸ್ತ್ರ ವಿರೋಧವೂ, ಅಲೌಕಿಕವೂ ಇರುವುದರಿಂದ ನಂಬಲರ್ಹವಾಗುವುದಿಲ್ಲ. ಈ ಸಂಗಮಕ್ಷೇತ್ರವು ಕೃಷ್ಣಮಲಾಪಹರಿ ನದಿಗಳ ಸಂಗಮ ಸ್ಥಾನದಲ್ಲಿ ಪ್ರಸಿದ್ಧವಾಗಿರುವುದು. ಈ ಸಂಗಮೇಶ್ವರನಿಗೆ ಸಂಗಲಿಂಗಯ್ಯ, ಕುಂಡಲಸಂಗಮ, ಜಾತವೇದ, ಸೋಮಗುರು, ಸೋಮನಾಥ, ಹೀಗೆ ನಾಮಾಂತರಗಳುಂಟು. 42 ಮಹಾದಾನಿಯೆಂಬ ಬಿರುದಿತ್ತೆಂದು ಸಹಾ ತಿಳಿಯುತ್ತದೆ43. ಈತನ ನಾಮಾಂತರಗಳನ್ನೇ ಈತನು ವೇದಾಗಮೋಪನಿಷದಗಳನ್ನು ಬಲ್ಲವನಾಗಿದ್ದನೆಂದು ತಿಳಿಯತಕ್ಕದ್ದಾಗಿದೆ. ಇಂತಹ ಸಂಗಮೇಶನನ್ನು G. J. ಸೋಮಯಾಜಿಗಳು ಕೇವಲ ಆರ್ಚಕನಾಗಿದ್ದನೆಂದು ಹೇಳುವುದಂತೂ ಅವಿವೇಕವೇ44 ತರುವಾಯ 12-ನೇ ದಿನದಲ್ಲಿ ಮಾಡಲಾಂಬೆಯ ಶಿಶುವಿಗೆ ಸೀಮಂತಿಯರು ಕಾರೀರಿ (ಮಳೆಬರುವಯಜ್ಞ) ಯನ್ನೊಳಕೊಂಡ ವೃಷಭಯಾಗ ವಿಧಿಯನ್ನು ಪಿತೃತಾರಕ ವೃಷೋತ್ಸರ್ಜನ ವಿಧಿಯನ್ನು ಸ್ಮರಿಸಿ ಸಕಾಲದಲ್ಲಿ ಮಳೆಬೆಳೆಗಳಾಗಿ ಲೋಕವನ್ನುದ್ಧರಿಸಲೆಂದು ವೃಷಭನೆಂದು ಹೆಸರಿಟ್ಟರು. ಅತ್ಯಂತ ಆರ್ವಾಚೀನ ಮಹಾಂತಯ್ಯನು ಅಯೋನಿಜನೆಂದು 45 ಹೆಸರಿಟ್ಟರೆಂದು ಬರೆದಿರುವುದು ಸುಳಾಭಕ್ತಿ ವಿಶೇಷವೇ; ಮತ್ತು ನಂದ್ಯಾಗಮದಲ್ಲಿ 13-ನೆ

CC-0. Jangamwadi Math Collection. Digitized by eGangotri

ದಿನದಲ್ಲಿ ಹೆಸರಿಟ್ಟನೆಂದು ಹೇಳಿರುವುದು ಅಕ್ರಮವಾಗಿದ್ದರೂ ಈತನಿಗೆ ಅದರಲ್ಲಿ ನಂದಿನಾಮವು 46 ಸಾರ್ಥಕವಾಗಿ ಬಹುವಿಶೇಷವಾಗಿ ಪ್ರಸಿದ್ಧವಾಗಿ ಪ್ರಯೋಗಿಸಲ್ಪಟ್ಟಿರುವುದು. ಜೈನಧರಣೀಂದ್ರನಾದನೋ ಮಾವಬಸವ ನೆಂದು 47 ದ್ವೇಷಬುದ್ಧಿಯಿಂದ ಹೀಯಾಳಿಸಿರುವುದು ನೋಡಿದರೆ ಯಾರಿಗೆ ತಾನೆ ತುಂಬಾ ವಿಷಾದವಾಗಲಿಕ್ಕಿಲ್ಲ. ಆದರೆ ಜೈನಚಂದ್ರಸಾಗರವರ್ಣಿಯು ವೃಷಭನೆಂದೇ ಸಮರ್ಥಿಸಿರುವನು. 48 ಈತನ ಮುಖವು ಸ್ವಲ್ಪ ಮುಂದಾಗಿ ಉದ್ದವಾಗಿದ್ದುದರಿಂದ ಸರ್ವಸಾಮಾನ್ಯವಾಗಿ ಅನೇಕ ಲೌಕಿಕರು ವೃಷಭಾಂಕನೆಂದು, ಬಸವಾಂಕನೆಂದು, ಬಸವನೆಂದು, ಕರೆಯಹತ್ತಿದರೆಂದು ಸಹ ಅವನೇ ಹೇಳಿರುವನು. 49 ಏಕಂದರೆ ಬಸವ ಶಬ್ದವು ವೃಷಭ ಶಬ್ದದತದ್ಭವವಿರುತ್ತದೆ. ಆದರೆ ಬಲ್ಲವರು ಮಾತ್ರ ವೃಷಭನೆಂದೇ ಕರೆಯುತ್ತಿದ್ದರೆಂದು ಪರವಾದಿಯಾದ ಚಂದ್ರಸಾಗರನೇ ಸ್ಥಿರೀಕರಿಸಿರುವನು. ಇದನ್ನು ಸಾರ್ಥಕಪಡಿಸುವುದಕ್ಕಾಗಿಯೇ ಪಾಲುಕುರಿಕೆ ಸೋಮಕವಿಯು ಸಂಸ್ಕೃತದಲ್ಲಿ ವೃಷಭಾವತರಣವು, ವೃಷಭಾಷ್ಟಕವು, ಆಂಧ್ರದಲ್ಲಿ ವೃಷಾಧಿಪಶತಕವು, ಗುರುಬಸವನು (ಕ್ರೀ. ಶ. 1430) ಕನ್ನಡದಲ್ಲಿ ವೃಷಭಗೀತೆಯು, ಷಡಕ್ಷರದೇವನು ವೃಷಭೇಂದ್ರವಿಜಯವು, 50 ಮುಂತಾದ ಗ್ರಂಥಗಳನ್ನು ಅಂಕಿತವಾಗಿ ಬರೆದು ಪ್ರಸಿದ್ಧಮಾಡಿ ಸಾರ್ಥಕದೇಹಿಗಳಾದರು. ಮತ್ತು ಈತನಿಗೆ ಲಿಂಗಬಸವ, ಜಗದ್ಗುರುಬಸವಲಿಂಗ, ಶರಣಬಸವಲಿಂಗ, ಸಂಗಮಬಸವ ಗುರುಬಸವ, ಶಿವಬಸವ, ಪಂಡಿತಬಸವ, ನಂದೀಶ್ವರ, ನಂದೀಶಬಸವ, ಬಸವಸಂಗಯ್ಯ, ಬಸವಾಚಾರ್ಯ, ಲೋಕಾಚಾರ್ಯ, ಉಪದೇಶಕಲ್ಪದ್ರುಮ, ಸರ್ವಜ್ಞ, ದ್ವಿತೀಯಶಂಭು,ಭಕ್ತಿಪಂಡಿತ,ಭಕ್ತಿಭಂಡಾರಿ,ಅವಾರ್ಯವೀರ್ಯ 51 ಮುಂತಾದ ಉಪನಾಮಗಳು ಬಿರುದುಗಳು ಇದ್ದು ಈತನು ಉತ್ಕೃಷ್ಟ ಗುಣಕ್ರಿಯಾಸ್ವರೂಪಿಯಾಗಿ ಜಗದಾರಾಧ್ಯ ದೀಕ್ಷೆ ಶಿಕ್ಷೆ ಮೋಕ್ಷಗಳ ಜಗದ್ಗುರುವಾಗಿ ವಿದ್ಯಾಧಿಕ್ಯದಿಂದ ಜಗತ್ಪೂಜ್ಯ ಭಗತ್ಪಾದ ರಾಜದೇಶಿಕೇಂದ್ರನಾಗಿ ದಿಗಂತಯಶೋವಿಶ್ರುತನಾಗಿರುವುದು ಜಗತ್ಪ್ರಸಿದ್ಧವೇ ಇರುತ್ತದೆ. ಕಂಚಿಶಂಕರಕವಿಯು ನಂದೀಶ್ವರನೇ ಮಾದಲಾಂಬಿಗೆ ಸ್ವಪ್ನದಲ್ಲಿ ಬಸವನೆಂತ ಹೆಸರಿಡೆಂದು ಹೇಳಿರುವುದರಿಂದಲೂ 52 ಭಕ್ತಿ ಪ್ರಾಶಸ್ತ್ಯದಿಂದಲೂ ಜನಸಾಮಾನ್ಯಮಧ್ಯದಲ್ಲಿ ದಶಾವತಾರಗಳಲ್ಲಿ ವಿಷ್ಣುವೆಂದೇ ಪ್ರಸಿದ್ಧವಿರದಂತೆ ಲೋಕವ್ಯವಹಾರದಲ್ಲಿ, ಸಮಕಾಲೀನ ಶಿಲ್ಪಕಲಾಭಿಜ್ಞ ತೈಲಸವಂಶದ ಹಾರಿಕಗೋತ್ರ ಮಾಧವನ ಮಗನಾದ ಬಸವ (ಬಸವರಸೈಯ್ಯ) ನಿಂದ 53 ಬೇರೆಯಾದ ಬಸವನೆಂದೇ ಅದ್ವಿತೀಯವಾಗಿ

CC-0. Jangamwadi Math Collection. Digitized by eGangotri

ನಿಲ್ಲುವಂತಾಯಿತು. ಈ ಬಸವ ಶಬ್ದಕ್ಕೆ ಸಂಸ್ಕೃತಬಸವಪುರಾಣ, ಪ್ರಭು ಲಿಂಗಲೀಲೆ, ಸೋಮನಾಥ ಭಾಷ್ಯಾದಿಗಳಲ್ಲಿಯೂ ಆ ಆ ಗ್ರಂಥಕಾರರು ಭಕ್ತಿ ಪ್ರಾಶಸ್ತ್ಯದಿಂದ ಅಕ್ಷರಪದ ಸಾರ್ಥಕವಾಗಿ ಅರ್ಥವೈಚಿತ್ರ್ಯವನ್ನು ಕಲ್ಪಿಸಿ ದಿಗಂತಕೀರ್ತಿಯನ್ನು ಪಡೆದಿರುವರು. ಈತನ ನಂದಿನಾಮವನ್ನು ಸಾರ್ಥಕಪಡಿಸುವುದಕ್ಕಾಗಿಯೇ ವೀರಸಂಗಯ್ಯನು ಪೂಜ್ಯಬುದ್ಧಿಯಿಂದ ನಂದ್ಯಾಗಮವನ್ನು ರಚಿಸಿರುವನು. ಮತ್ತೂ ಶ್ರೀ ಬಸವನಾಮಾಕ್ಷರವನ್ನು ಸಾರ್ಥಕಪಡಿಸುವುದಕ್ಕಾಗಿಯೇ ದೇವಭಾಷೆಯಲ್ಲಿ ಬಸವರಾಜೀಯ ಅಷ್ಟೋತ್ತರಶತ ಚರಣಗಳಲ್ಲಿ ಜಪಮಾಲಾರೂಪ ಬಸವಯುಕ್ತಪದಗ್ರಸ್ತಸ್ತೋತ್ರ, ಬಸವಪಂಚರತ್ನ, ಬಸವಾಕ್ಷರಮಾಲಾಗದ್ಯ, ಬಸವೋದಾಹರಣಸ್ತೋತ್ರ ಮುಂತಾದಗ್ರಂಥಗಳನ್ನು ಸಮಕಾಲೀನ ಪಾಲ್ಕುರಿಕೆ ಸೋಮನೊಬ್ಬನೇ ಬರೆದಿರುವನು. ಕಂಚಿ ಶಂಕರಕವಿಯು ಸಹಾ ಸಂಸ್ಕೃತದಲ್ಲಿ ಬಸವೇಶವಿಜಯವೆಂಬ ಗ್ರಂಥವನ್ನು ಬರೆದಿರುವುದು ಸುಪ್ರಸಿದ್ಧವೆ.54 ಮತ್ತು ಆಪ ಪೂಜ್ಯಭಾಷೆಯಲ್ಲಿಯೇ ಬಸವ ಗದ್ಯ, ಬಸವನಾಮಾಕ್ಷರಸ್ತೋತ್ರ, ಬಸವಸ್ತುತಿ, ಬಸವಸ್ತೋತ್ರ. ಬಸವಾಷ್ಟಕ ಮುಂತಾದ ಗ್ರಂಥಗಳು 55 ಬರಿಯಲ್ಪಟ್ಟು ಮುದ್ರಾಸು ರಾಜಕೀಯ ಪ್ರಾಚ್ಯ ಕೋಶಾಲಯದಲ್ಲಿ ವಿರಾಜಮಾನವಾಗಿರುವುವು. ಜೈನರ ಆದಿತೀರ್ಥಂಕರನಾದ ವೃಷಭಜಿನನ ವರ್ಚಸ್ಸನ್ನ ಕಡಿಮೆಯಾಗುವುದೆಂದು ಬಗೆದು ಪರವಾದಿಗಳು ಬಸವನೆಂದೇ ಕರಿಯುವುದಕ್ಕೆ ಮೊದಲುಮಾಡಿರಬಹುದೆಂದು ಸಹಾ ಊಹಿಸಲವಕಾಶವಿದೆ. ರಾಮರಹಸ್ಯೋಪನಿಷದಂತರ್ಗತ ರಾಮತಾರಕಮಂತ್ರವು ಪ್ರಸಿದ್ಧವಿರುವಂತೆ ಈತನಿಗೆ ಸಂಬಂಧಿಸಿದ ಸಂಸ್ಕೃತದಲ್ಲಿನ ವೃಷಭಗಾಯತ್ರಿ ಮಂತ್ರವೂ ವೃಷಭ ಪ್ರತಕಲ್ಪವೂ ವೃಷಭಾಂಕಮಾಲೆಯಾ, ೧೪-ನೇ ಶತಮಾನದ ಬಿಜಯಾಚಾರ್ಯನಿಂದ ರಚಿಸಲ್ಪಟ್ಟ ಬಸವರುಪ್ರಮಂತ್ರವೂ, ೧೬ನೇ ಶತಮಾನದ ಬಸವಕವಚಮಂತ್ರವೂ ಪ್ರಸಿದ್ಧವಾಗಿರೇ ಇರುವುವು.56 ಬಸವ ಮಂತ್ರಜಪವು ಪುನೀತವಾದದ್ದೆಂದು ಬಸವಸ್ತುತಿಯೆಂಬ ಸಂಸ್ಕೃತಗ್ರಂಥದಿಂದ ಸಾಕ್ಷಾತ್ಕಾರವಾಗುತ್ತಿದೆ. ಕೇವಲ ಸಂಸ್ಕೃತದಲ್ಲಿದ್ದ ಮಾತ್ರಕ್ಕೇನೇ ಶೈಖಭಾವನ್ನಿನ ಅಥರ್ವವೇದಾಂತರ್ಗತ ಆಲ್ಲೋಪನಿಷತ್ತಾ 57 ದಿಗಳಿಂದ ಮುಕ್ತಿಪಡೆಯುವದಕ್ಕಿಂತಲೂ ವಿದ್ಯಾಧಿಕ್ಯ, ಅವಿಚಾರಮೂಢನಾಗುವದಕ್ಕಿಂತಲೂ ಮುಗ್ಧವಾಗಿ ದೇಶೀಯಮಂತ್ರಗಳದ್ವಾರಾ ಮುಕ್ತಿಪಡೆಯುವುದೇ ಸರ್ವೋತ್ಕೃಷ್ಟವೆಂದು ಘಂಟಾಘೋಷವಾಗಿ ಹೇಳತಕ್ಕದ್ದಾಗಿದೆ. ಹೀಗಿರುವುದರಿಂದಲೇ ಶ್ರೀ ಬಸವೇಶ್ವರನು ಆಗಾಗ ಪೂರ್ವಕುಂತಲದೇಶದ ರಾಜಧಾನಿಯಾದ ಈಗಿನ ಕುರುಗೋಡು, 58 ಕೊಟ್ಟೂರು, ಕೊಡೇಕಲ್ಲು, ಕಲಬುರ್ಗಿ

CC-0. Jangamwadi Math Collection. Digitized by eGangotri

ಮುಂತಾದ ಗ್ರಾಮಗಳಲ್ಲಿ ಪ್ರಕಟವಾಗಿ ಗುಪ್ತತೀರ್ಥಕಾಕ (ತಿರಿದುಣ್ಣುವ ಅಲ್ಪ ವಿದ್ಯಾರ್ಥಿ) ರನ್ನು ಶಿಕ್ಷಿಸಿ ಲೋಕೋದ್ಧಾರವನ್ನು ಮಾಡುತ್ತಿರುವನು. ಮತ್ತೂ ಸಹಸ್ರಾರು ಮೈಲುಗಳಮೇಲಿರುವ ಎಡ್ವಿನ್‌ಆರ್‌ನಾಲ್ಡ್, ವಿನ್ಸೆಂಟ್ ಎ. ಸ್ಮಿತ್ತುಮುಂತಾದ ಪಾಶ್ಚಾತ್ಯಪುಭೃತಿಗಳು ಈತನ ಕೀರ್ತಿಯನ್ನು ಕೊಂಡಾಡಿರುವುದು ಸಹಜವಲ್ಲದೆ ಆಶ್ಚರ್ಯವೇನುಯಿಲ್ಲ. 59 ಮತ್ತೂ ಈತನ ಹೆಸರಿನಮೇಲೆ ಎಷ್ಟೋ ವಾಚನಾಲಯಗಳು, ಪುಸ್ತಕಭಾಂಡಾಗಾರಗಳು ಮುಂತಾದುವು ನಿರ್ಮಿಸಿರುವುದು ಯೋಗ್ಯವೇ ಆಗಿದೆ. ಈತನಿಗೆ ಅಲ್ಲಮನೆಂದು ಹೆಸರಿತ್ತೆಂದೆನ್ನುವದು ಪೂರ್ಣಅಸಮಂಜಸವು. 60

ವೀರಸಂಗಯ್ಯನು ಬಸವೇಶ್ವರನಿಗೆ ಸತ್ಯಣ್ಣ. ಅಪ್ಪಣ್ಣರೆಂಬ ಇಬ್ಬರು ಅಣ್ಣಂದಿರಿದ್ದಂತೆಯೂ, ನಾಗಮ್ಮ (ಅಕ್ಕನಾಗಾಯಿ, (ಲೆ), ಸಾವಿತ್ರಿ) ಎಂಬ ಒಬ್ಬ ಅಕ್ಕನಿದ್ದಂತೆಯೂ ಭ್ರಮಿಸಿ ಬರೆದಿರುವನು 61. ಮಾದಲಾಂಬಿಕೆ ಗಂಡು ಹೆಣ್ಣುಮಕ್ಕಳಿದ್ದಮೇಲೆ ಪುನಃ ಮಕ್ಕಳಾಗುವುದಕ್ಕೆ ನಂದಿವ್ರತವನ್ನಾಚರಿಸುವುದು ಅಸಂಭವವಿರುವುದರಿಂದ ಅಕ್ಕನಾಗಲಿ, ಅಣ್ಣಂದಿರಾಗಲಿ ಇದ್ದಿಲ್ಲವೆಂದು ಧಾರಾಳವಾಗಿ ಹೇಳತಕ್ಕದ್ದಾಗಿದೆ ಆದರೆ ಅಕ್ಕನಿದ್ದಳೆಂಬ ವಿಷಯವನ್ನು ಅನೇಕರು ಬರೆದಿದ್ದರೂ, ಅದುಸಹಾ ಅಸಂಭವವೆಂದು ನನ್ನ ಮುಂದಿನ ಅಲ್ಲಮಚನ್ನಬಸವಾದಿಗಳ ಚರಿತ್ರೆಯಮೇಲಿಂದ ಸಂಪೂರ್ಣವಾಗಿ ತಿಳಿಯಬರುವುದು. ಇದೂ ಅಲ್ಲದೇ (ಪಾರ್ವತಿಯೆಂಬ ಇನ್ನೊಂದು ಹೆಸರು) ಪದ್ಮಾವತಿ (ಗುಣವತಿ) ಎಂಬ ಒಬ್ಬ ತಂಗಿಯೂ 62, ಸುಮಿತ್ರೆ ಎಂಬ ಇನ್ನೊಬ್ಬ ತಂಗಿಯೂ ಇದ್ದರೆಂದು 63 ಇವರನ್ನು ಬಿಜ್ಜಳನು ಮದುವೆಯಾದನೆಂದೂ ಜೈನಪಂಡಿತರೂ, ಚರಿತ್ರಶೋಧಕರೂ ಬರೆದಿರುವರು. ಚಂದ್ರಸಾಗರನುಮಾತ್ರ ಪದ್ಮಾವತಿಗೆ ಸಾವಿತ್ರಿಯೆಂದು ಸಂಭೋಧಿಸಿರುವನು 64. ಈ ಸಾವಿತ್ರಿಯೆಂಬ ಹೆಸರು ಸಾವಿತ್ರಿಯೆಂಬ ಅಕ್ಕನಾಗಮ್ಮನಿಗೆ ಏನು ಸಂಬಂಧವಿಲ್ಲ. ಇಲ್ಲದಿದ್ದರೆ ಪದ್ಮಾವತಿಯಾಗಲಿ ಸಾವಿತ್ರಿ ಎಂದನ್ನುಬಹುದಾದ ಸುಮಿತ್ರೆಯಾಗಲಿ ಒಬ್ಬಳೇ ಇರಬಹುದು. ಏಕಂದರೆ ಹಸ್ತಸಾಮುದ್ರಿಕಲಿತ್ಯಲೇಖನದೋಷವಿದ್ದಲ್ಲಿ ಒಬ್ಬಳೇ ಇರಬಹುದು. ಅಥವಾ ಬೇರೆಬೇರೆಯಾಗಿ ಇಬ್ಬರೂ ಇರಬಹುದು. ಆದರೆ ಒಬ್ಬಳಾಗಲಿ ಇಬ್ಬರಾಗಲಿ ಸಹೋದರಿಯರೇ ಇದ್ದಿಲ್ಲವೆಂದು ಧಾರಾಳವಾಗಿ ಹೇಳತಕ್ಕದ್ದಾಗಿದೆ. ಏಕಂದರೆ ಸುಮಿತ್ರೆಯೆಂಬುವಳು ಸಂಶಯಾಸ್ಪದವುಳ್ಳ ಕಕ್ಕಯ್ಯನಿರಬಹುದಾದ ಕಕ್ಕಗ (ಚಂಡ) ನೆಂಬುವನನ್ನು ಕೂಡಿದುದಕ್ಕೆ ಬಿಜ್ಜಳನು ತನ್ನನಾದಿನಿ ಎಂದು ಕೋಪಿಸಿ, ಅವಳನ್ನು ಸ್ತಂಭಕ್ಕೆಕಟ್ಟಿ, ಹೊಡೆದುಬಿಟ್ಟಂತೆ

CC-0. Jangamwadi Math Collection. Digitized by eGangotri

ಧರಣೇಂದ್ರನು ಬರೆದಿರುವುದು 85 ಸಖೇದಾಶ್ಚರ್ಯ ಜನಕವಾಗುವುದರಿಂದ ನಂಬಲರ್ಹವಾಗುವುದಿಲ್ಲ. ಮತ್ತೂ ಜೈನಕವಿಗಳಿಬ್ಬರೂ, ಪದ್ಮಾವತಿಗೆ ಒಬ್ಬಮಗನಾಗಿ ಅಳಿಯಬಿಜ್ಜಳನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದನೆಂದೂ, ರಾಜನಿಗೆ ಒಂದುಸಾರಿ ಬಸವೇಶ್ವರನು ಘೋರತೊಂದರೆಯನ್ನು ಕೊಡಲು ಆತನನ್ನು ಸಂಹರಿಸುವುದಕ್ಕೆ ಬಿಜ್ಜಳನೇ ಹನ್ನೆರಡುಗಾವುದ ದಕ್ಷಿಣ ಪಶ್ಚಿಮಕ್ಕೆ ಹೊರಡಲು ಈತಂಗಿಯೇ ತಮ್ಮಣ್ಣನನ್ನು ಕೊಲ್ಲುವುದಕ್ಕೆ ಬಾಣವನ್ನೆತ್ತಿ ಕೊಟ್ಟಳೆಂದೂ, ಅಂತ್ಯಕ್ಕೆ ಬಿಜ್ಜಳನು ಸತ್ತತರುವಾಯ ಈಮಗನೇ ಬಸವೇಶ್ವರನನ್ನು ಕೊಂದನೆಂದೂ 86 ಮುಂತಾಗಿ ಬರೆದಿರುವುದನ್ನು ನೋಡಿದರೆ ಯಾರಿಗೆ ತಾನೇ ತುಂಬಾ ವಿಷಾದದಿಂದ ನಿಷೇಧವಾಗಲಿಕ್ಕಿಲ್ಲಾ. ಸಾರಾಂಶ: ಆಧುನಿಕಜೈನಕವಿಗಳ ಮತ್ತು ಅಸಮಗ್ರವಿಚಾರಶೂನ್ಯಮತಿಯ ಚರಿತ್ರಶೋಧಕರ ದುರಭಿಮಾನ ಮೂಢವಿಶ್ವಾಸ ಕಲ್ಪನೆಗಳಿಗೆ ನಿಷ್ಪಕ್ಷಪಾತಮತಿಯು ತೊಂದರೆಗೀಡಾಗುವುದೇ ತಕ್ಕಫಲವಾಗಿರುವುದು.

ಬಾಲ್ಯಸ್ನೇಹಿತಕೃಷ್ಣನೆಂಬುವನೊಡನೆ ಕಾಲವನ್ನು ಕಳೆಯುತ್ತಿರಲು 8 ವರುಷಗಳಾಗಲು (ಕ್ರೀ.ಶ.1139) ತಂದೆಯು ಮಗನಿಗೆ ಉಪನಯನವಾಗಬೇಕೆಂದು ಹೇಳಲು, ಆತನನ್ನು ನಿರಾಕರಿಸಿ ಕೃಷ್ಣನೇ ವಿಷ್ಣುವಿನಂತೆ ಗುರುಜಂಗಮಾಭೇದನಾದ ಕೂಡಲುಸಂಗಮೇಶ್ವರನಲ್ಲಿಗೆಬಂದು, ಮಹೇಶ್ವರದೀಕ್ಷೆಯನ್ನು ಹೊಂದಿ(ದೀಕ್ಷೆಯು ಒಂದೇ, ಭೇದವಿಲ್ಲಾ)87 ತಂದೆಕರೆದರೂ ಹೋಗದೇ ಪಡಿಹಾರಿಮನೆಯಲ್ಲಿ, ತಂದೆಯಿಂದ ಬಿಡಲ್ಪಟ್ಟ ಅಕ್ಕನಾಗಮ್ಮನ ಸೇವೆಯದ್ವಾರಾ ಪೋಷಿತನಾಗಿ, ಗುರುಜಂಗಮಸೇವಾನಿರತನಾಗಿ ವೇದಾಗಮ ಶಾಸ್ತ್ರೋಪನಿಷದ್ಗಳನ್ನು ಅಭ್ಯಾಸಮಾಡುತಲಿದ್ದನು.88 ಈ ಸಂದರ್ಭದಲ್ಲಿ ಸಂಗಮೇಶ್ವರನು ಬಸವೇಶ್ವರನ ಚೈತ್ರಶು||೧೦ ಉದಯ ಮುಹೂರ್ತದ ಉಪನಯನಕೊಪ್ಪಿದನೆಂದು G. J. ಸೋಮಯಾಜಿಗಳು ಬರೆದಿರುವುದು ಕೇವಲವಿಷಾದವು.89 ಆತ್ತ ಶೈವರೊಳಗಣ ವೀರನಾದ ಬಲದೇವ ಮಂತ್ರಿಯು ತನ್ನ ಬಂಧುವಾದ ಬಸವೇಶ್ವರನು ಮೊದಲು ವೀರಶೈವನಾಡುದಕ್ಕೆ ಸಿಟ್ಟಾಗಿದ್ದರೂ ಆತನ ವಿದ್ಯಾಬುದ್ಧಿಸಾಮರ್ಥ್ಯಗಳನ್ನು ಕೇಳಿ ಮೆಚ್ಚಿ, ತನ್ನಬಂಧುವೆಂದು ಕರೆಯಿಸಲು, ಬಸವೇಶ್ವರನು ಪಂಚಗಣಾಧೀಶ್ವರರು ಅಕ್ಕನಾಗಮ್ಮ ಸಹಿತಬಂದು, ಸೊಡ್ಡಳ ಬಾಚಿರಾಜನಮನೆಯಲ್ಲಿ ಬಿಡದಿಮಾಡಿ, ಬಲದೇವನನುಗಳಾದ ಗಂಗಾಂಬೆಗೆ, ಪಂಚಗಣಾಧೀಶ್ವರರ ಸಮ್ಮುಖದಲ್ಲಿದೀಕ್ಷೆಮಾಡಿ ವಿವಾಹಮಾಡಿಕೊಂಡು ಸುಖ

CC-0. Jangamwadi Math Collection. Digitized by eGangotri

ವಾಗಿದ್ದನು. 70 ಹೀಗೆ ಬಸವೇಶ್ವರನು ಹೆಂಡತಿಗೆ ಅನುದಿನವೂ ಮಾವನಮನೆಯಲ್ಲಿರುವುದು ಅನುಚಿತವೆಂದು ನಿರ್ಮಲಮನಸ್ಸಿನಿಂದ ಹೇಳಿ, ಉದಾರದೃಷ್ಟಿಯಿಂದ ಬಿಜ್ಜಳನಲ್ಲಿ, ಅರ್ಜುನನಲ್ಲಿ ಪರಮಾತ್ಮನೆಂದೆನ್ನಿಸಿಕೊಳ್ಳುವ ಶ್ರೀಕೃಷ್ಣನು ಸಾರಥಿಯಾಗಿದ್ದಂತೆ, ಗಾಣಿಗನ ಆಳಾಗಿ ಸೂಳೆಯು ಮನೆಯಲ್ಲಿ ನೀರುತಂದ ರೇಣುಕನ (ರೇಣುಕರು ಆಧುನಿಕರಾಗಿ ಎಷ್ಟುಜನರು ಯಾವಕಾಲದಲ್ಲಿದ್ದರೆಂಬುದನ್ನು ಮುಂದಿನ ವೀರಶೈವಚರಿತ್ರೆಯಲ್ಲಿ ತಿಳಿಸುವೆನು) ಸೇವೆಗಿಂತಲೂ ಕನಿಷ್ಟಪಕ್ಷವಲ್ಲದ ವೀರಶೈವೋದ್ಧಾರ ಮಾನಸಿಕದಾಸನಾಗಿ ಉತ್ಕೃಷ್ಟನಾದ ಕರಣಿಕತ್ವಕ್ಕೆ ಸುಮಾರು ಕ್ರೀ.ಶ.1161ರಲ್ಲಿ ನಿಂತಂತೆ ತಿಳಿಯಬರುತ್ತದೆ.71 ಇದನ್ನು ಆತನ ವಚನವು ಸಾಕ್ಷಿಯಾಗಿಸಹಾ ಬಲಪಡಿಸುತ್ತದೆ. 72 ಗೆಂಗೇಶ್ವರನ ಕರಜಾತಳಾದ ಗೆಂಗಮ್ಮ 73 ನಿಂದ ಬೇರೆಯಾದ ಈ ಗೆಂಗಾಂಬಿಕೆಯಲ್ಲಿ ಬಾಲಸಂಗ (ಬಾಲಲಿಂಗ) ಯ್ಯ 74 ನೆಂಬ ಒಬ್ಬ ಜಂಗಮಸೇವಾನಿರತನಾದ ಮಗನಿದ್ದು ಆತನು ಚಿಕ್ಕಂದಿನಲ್ಲಿಯೇ ಐಕ್ಯನಾದನು. ಗುರುರಾಜನು ಹೇಳುವ ಚಿಕ್ಕಬಸವೇಶನು, ಮಲ್ಲಣಾರ್ಯನು ಹೇಳುವ ಚಿಕ್ಕಸಂಗಯ್ಯನು, ಮೇಲಿನ ಒಬ್ಬಮಗನೇ ಇರಬಹುದೆಂದು ತಿಳಿಯಬರುತ್ತಿದೆ 75 ಈ ಗೆಂಗಮ್ಮನು ಬಸವೇಶ್ವರನ ತರುವಾಯ ಬೆಳಗಾಂವಿಜಿಲ್ಲಾ ಸಂಪಗಾಂವಿ ತಾ|| ಮುಗಟಖಾನಹುಬ್ಬಳ್ಳಿಯ ಹತ್ತಿರದ ಮಲಪ್ರಭಾನದಿಯಲ್ಲಿ ಶಿವೈಕ್ಯಳಾದಳೆಂದು ಊಹಿಸಲವಕಾಶವಿದೆ. ಇದರ ಸ್ಮಾರಕಕ್ಕಾಗಿ ಒಂದು ಸಮಾಧಿಯು ಸಹಾ ಈಗಲೂ ಕಾಣಲ್ಪಡುತ್ತಿರುವುದು. ಈ ತಾಯಿಮಕ್ಕಳಿಬ್ಬರೂ ಪ್ರತ್ಯೇಕವಾಗಿ ಒಂದೊಂದು ವಚನಗ್ರಂಥವನ್ನು ಕನ್ನಡದಲ್ಲಿ ಬರೆದು ಕೀರ್ತಿಪಡೆದಿರುವರು 76. ಈ ಸಂದರ್ಭದಲ್ಲಿ ಬಿಜ್ಜಳನು ಬಲದೇವನಿಗೆ ವಿರಾಮಾಶನವನ್ನು ಕಲ್ಪಿಸಿ, ಬಸವೇಶ್ವರನಿಗೆ ಮಂತ್ರಿಯಾಗಿರೆಂದು ಹೇಳಿದನೆಂದು G. J. ಸೋಮಯಾಜಿಗಳು 77 ಬರೆದಿರುವುದು ಅಪೋಹವಿರುವುದರಿಂದ, ಕೆಲದಿನಗಳಮೇಲೆ ಬಲದೇವನು ಸತ್ತನಂತರ ಒಂದುದಿನ ರಾಜನಿಗೆ ಒಂದಪೂರ್ವಲಿಪಿಯು ಕಾಣಿಸಲು, ಅದನ್ನು ಯಾರೂ ಓದುವುದಕ್ಕೆ ಸಾಧ್ಯವಾಗದಿರಲು, ಶ್ರೀ ಬಸವೇಶ್ವರನು ಓದಿ ಅರ್ಥವನ್ನು ಹೇಳಿ, ಅರವತ್ತಾರುಕೋಟಿನಿಕ್ಷೇಪವನ್ನು ತೋರಿಸಲಾಗಿ, ಬಿಜ್ಜಳನು ಪರಮ ಸಂತೋಷದಿಂದ ಸಿದ್ಧರಸ - ಪದ್ಮಗಂಧಿಯರಸುಗಳಾದ ನೀಲಮ್ಮನಿಗೆ ಪಂಚಗಣಾಧೀಶ್ವರರ ಸಮ್ಮುಖದಲ್ಲಿ ದೀಕ್ಷೆಯನ್ನುಮಾಡಿಸಿ, ಬಸವೇಶ್ವರನಿಗೆ ವಿವಾಹವನ್ನು ಬೆಳೆಯಿಸಿ ಭದ್ರಕಾಯವೆಂಬ ಆನೆಯಮೇಲೆ ಮೆರವಣಿಗೆಯನ್ನುತೆಗೆದು, ಮುದ್ರಿಕೆಯ ದ್ವಾರಾ 1000 ವರಹಾ (ಹೊನ್ನು)ಮಾಸಾಶನದೆ

CC-0. Jangamwadi Math Collection. Digitized by eGangotri

ಮೇಲೆ ಕೋಶಾಧ್ಯಕ್ಷತೆಯನ್ನೂ ದಂಡನಾಯಕೋದ್ಯೋಗವನ್ನೂ, 18 ಮಂತ್ರಿಗಳಮೇಲೆ ಮುಖ್ಯಮಂತ್ರಿತ್ವದ ಸರ್ವಾಧಿಕಾರವನ್ನೂ ಕೊಟ್ಟು ವಿಲಾಸದಿಂದ ಕಾಲವನ್ನು ಕಳೆಯುತ್ತಿದ್ದನು. 78 ಈ ನೀಲಮ್ಮನ ತಂದೆತಾಯಿಗಳನ್ನು ಚಂದ್ರಸಾಗರನು ಶಿವಭೂತ—ಗೌರಿಯರೆಂದುಲ್ಲೇಖಿಸಿರುವುದು ಯಾವ ಆಧಾರದ ಮೇಲಿಂದ ಎಂಬುವುದು ತಿಳಿಯುವಂತಿಲ್ಲ. 79 ಇದರಂತೆಯೇ ಮಹಂತಯ್ಯನೂ ಫ್ರಾನ್ಸಿಸನೂ ಇವಳನ್ನು ಬಿಜ್ಜಳನ ಮಗಳೆಂದೂ, ಮುಂಬಯಿಯ ಕನ್ನಡ 6 ನೆಯ ಪುಸ್ತಕದಲ್ಲಿಯೂ, ಮತ್ತೂ ಹೂಲಿಯವರು ಬಲದೇವನ ಮಗಳೆಂದೂ, ಎಂಥೋವೆನ್‌ದೊರೆಯೂ ಫರ್‌ಸ್ಟನ್ ದೊರೆಯೂ ಹರೀಶ್ವರನು ಪ್ರಭುದೇವಚರಿತ್ರೆಯಲ್ಲಿಯೂ ಬಿಜ್ಜಳನ ತಂಗಿಯೆಂದೂ80 ಮುಂತಾಗಿ ಬರೆದಿರುವುದು ನಿರಾಧಾರವಾದುದಾಗಿದೆ. ಈ ನೀಲಮ್ಮನು ಹುಟ್ಟಿದುದಕ್ಕೆ ಧಾರವಾಡ ಜಿಲ್ಲಾ ಕೋಡ ತಾ|| ಮೇದೂರುಗ್ರಾಮದಲ್ಲಿ ಒಂದು ಗುಡಿಯು ಸ್ಮಾರಕಚಿನ್ಹವಾಗಿ ಈಗಲೂ ಕಾಣಬರುತ್ತಿರುವುದು. 81 ಈಕೆಗೆ ನೀಲಾಕ್ಷಿ, ನೀಲಾಂಬಿಕೆ, ನೀಲಲೋಚನೆ ಎಂಬ ಉಪನಾಮಗಳಿದ್ದುವು. ಈ ನೀಲಮ್ಮನನ್ನು, ಮಲ್ಲಣಾರ್ಯನೂ ಸಿದ್ಧಲಿಂಗಾರ್ಯನೂ ಕಾಲಜ್ಞಾನವನ್ನು ರಚಿಸಿದುದಕ್ಕೆ ಮಾಯೆಯನ್ನು ಜಯಿಸಿವ ಪರಮವಿಜ್ಞಾನಿಯೇ ಎಂದು ಬಗೆದು, ಮಾಯಾದೇವಿ ಎಂದು ಸಂಭೋಧಿಸಿರುವುದು ಸಾರ್ಥಕವೇಯಿರುವುದು. 83 ಈ ನೀಲಮ್ಮನು ಗಂಡನೊಡನೆ ಕರ್ಣಾಟಕ ಭಾಷಾಮಾತೆಯನ್ನುದ್ಧರಿಸಿ ಕೀರ್ತಿವಡೆದಳು. ಈಕೆಯು ತನ್ನ ಹೆಸರಿನ ಒಂದು ವಚನ ಗ್ರಂಥವನ್ನೂ ಪ್ರಸಾದ ಸಂಪಾದನೆ ಎಂಬ ಲೋಕಮುಗ್ಧವಾದ ವೀರಶೈವ ಸ್ತ್ರೀಯರ ಕರ್ತವ್ಯವನ್ನು ತಿಳಿಸುವ ಸುಬೋಧವಾಗಿರುವ ಗ್ರಂಥವನ್ನೂ ಬರೆದು ಕೀರ್ತಿಪಡೆದಿರುವುದು ಪಾಠಕವರ್ಗದವರಿಗೆ ಗೊತ್ತಿರುವ ಸಂಗತಿಯಾದಕಾರಣ ಇಲ್ಲಿ ಒತ್ತಿಹೇಳುವ ಕಾರಣವಿಲ್ಲ. 83 ಈ ನೀಲಮ್ಮನಿಗೇನೇ ಚಂದ್ರಸಾಗರನ ಅಭಿಪ್ರಾಯದಂತೆ ಮರಿನೀಲೆ ಎಂಬ ಒಬ್ಬ ಮಗಳಾಗಿ ಅವಳನ್ನು ಬಿಜ್ಜಳನ ಮಗನು ಲಗ್ನವಾದಂತೆ ಬರೆದಿರುವುದು ಕೇವಲ ನಿರಾಧಾರಕಲ್ಪನೆ ಎಂದು ನಾನು ಭಾವಿಸಿ, ಈಕೆಯು ಮಕ್ಕಳಿಲ್ಲದೇವ್ಯವನದಿಂದ ಬಸವೇಶ್ವರನಕ್ಕಿಂತಲೂ ಮೊದಲೇ ಬಿಜಾಪುರು ಜಿ||ಮುದ್ದೆಬಿಹಾಳ ತಾ|| ಕೃಷ್ಣಾತಟಿಯ ತಂಗಡಿಗಿಗ್ರಾಮದಲ್ಲಿ ಐಕ್ಯಳಾದಳೆಂದು ನಿರ್ಧರಿಸಬೇಕಾಗುತ್ತದೆ. 84 ಆದರೆ ಮಕ್ಕಳಿದ್ದರೆಂಬ ಭಾವವನ್ನು ಆಧುನಿಕಪಾಪಕವಿಯು ಎಷ್ಟು ವರ್ಣಿಸಿದರೂ ಸಮಕಾಲೀನ ಚರಿತ್ರಾಧಾರವು ಇಲ್ಲದಿರುವುದರಿಂದ ವಿಶ್ವಸನೀಯವಲ್ಲ. 85

CC-0. Jangamwadi Math Collection. Digitized by eGangotri

ಈ ಸಂದರ್ಭದಲ್ಲಿ ಸೋಮನಾಥದ್ವಯರೂ ಆಧುನಿಕವ್ಯಾಸರೂ ಒಬ್ಬ ಕೊಬ್ಬರನ್ನೆನುಸರಿಸಿ ಲಿಪಿಯಸಮಾಚಾರವನ್ನೆತ್ತದಲೇ ಮಂತ್ರಿಗಳೇ ಬಸವೇಶ್ವರನನ್ನು ಕರೆತಂದು ಪಟ್ಟಕಟ್ಟಿದರೆಂದೂ, ಶಂಕರ, ಚನ್ನಪ್ಪಕವಿಗಳು ಮಾತ್ರ ಮಂತ್ರಿಯಾದವೇಲೆ ಅಕಾರಣವಾಗಿ ಲಿಪಿಯನ್ನೋದಿದನೆಂದೂ, ಮಹಾತೆಯ್ಯನು ಈಕಾಲದಲ್ಲಿ ಬಿಜ್ಜಳನ ಹೆಂಡತಿಯು ಶೈವಳಾದಳೆಂದೂ ಮುಂತಾಗಿ ಬರೆದಿರುವುದು ನೋಡಿ ಸಖೇದಾಶ್ಚರ್ಯಜನಕವಾಗಿ ನಂಬಲರ್ಹವಾಗುವುದಿಲ್ಲ. ಇದು ಕ್ರೀ. ಶ. 1168-ರಲ್ಲಿ ಜರುಗಿದಂತೆ ತರ್ಕಿಸತಕ್ಕದ್ದಾಗಿದೆ.

ಮತ್ತು ಒಬ್ಬ ಆಧುನಿಕಪಾಪಿಯು ಅನಾರ್ಯಕರ್ಣಪ್ರವರಣರಹಾಗೆ ಬಡಬಡಿಸಿ, ಬಸವೇಶ್ವರನು ಬಿಜ್ಜಳನಿಗೆ ಮೊದಲೇ ವಿಶ್ವಾಸಘಾತಕತನದಿಂದ ಏನೇನೋಹೇಳಿ ಅಂತ್ಯಕ್ಕೆ ಮಂತ್ರಿಯಾಗಿ ದ್ರೋಹಬುದ್ಧಿಯಿಂದ ತನ್ನ ಸ್ವಾಮಿಯನ್ನೇ ಕೊಲ್ಲಿಸಿದನೆಂದು ಮುಂತಾಗಿ ಬರೆದಿರುವುದನ್ನು ನೋಡಿ ಯಾರುತಾನೇ ತುಂಬಾವಿಷಾದದಿಂದ ನಿಷೇಧಿಸಲಿಕ್ಕಿಲ್ಲಾ? ಹಾಗೆ ಚಕ್ರನೇಮಿನ್ಯಾಯೋದ್ದೇಶವಿದ್ದಲ್ಲಿ ಮೊದಲೇ ಬಹಿರಂಗವಾಗಿ ಅಪಾರನಿಧಿಯನ್ನು ತೋರಿಸಿ, ಆಮೇಲೆ ಹಿತೋಕ್ತಿಯನ್ನು ಹೇಳಿ ತಿಳಿಸುತ್ತಿದ್ದಿಲ್ಲ. ಒಂದುವೇಳೆ ಹಾಗೆ ತಿಳಿಸಿದನೆಂಬುವುದು ಸಹ ದೂರದರ್ಶಿಯಾಗಿ ಕವಿಯಾದುವವರ ಮಾತನ್ನು ಕೇಳಬೇಡವೆಂದು ಬೋಧಿಸಿದಂತೆ ತಿಳಿಯಬರುತ್ತಿದೆ. ಮತ್ತೂ ಬಸವೇಶ್ವರನ ಗುಣವನ್ನು ರಾಜನು ೮ ವರ್ಷಗಳ ಪರ್ಯಂತರವೂ ಕರಣಿಕನಾಗಿದ್ದಾಗ ಅನುಭವಿಕನಾಗಿದ್ದುದರಿಂದ, ಬಸವೇಶ್ವರನು ಸಹಜಪ್ರೀತಿಯಿಂದ ನಿರಾಕರಿಸಿದರೂ ಕೇಳದೇ. ಬಿಜ್ಜಳನೇ ಮುಸಲ ಟಪ್ಪುಸುಲ್ತಾನನು ಮಾಧ್ವಪೂರ್ಣಯ್ಯನಿಗೆ ದಿವಾನಗಿರಿಯನ್ನು ಕೊಟ್ಟಂತೆಯೇ ಥಾರಾಳಮನಸ್ಸಿನಿಂದ ಬಸವೇಶ್ವರನಿಗೆ ಅತ್ಯುನ್ನತ ಮಂತ್ರಿಪದವಿಯನ್ನು ಕೊಟ್ಟಂತೆ ತಿಳಿಯುವುದೇ ಸುಗುಣೈಕಪಕ್ಷಪಾತ ಸಯುಕ್ತಕಾರ್ಥವಾಗುವುದು. ಶಿವದ್ರೋಹಿಯನ್ನು ಕೊಲ್ಲುವದೆಂಬುವುದು ಗುಣಾಚಾರವಿದ್ದರೂ ಚಾಣಿಕ್ಯನು ನವನಂದರನ್ನು ಸಂಹರಿಸಿದಂತೆ ನ್ಯಾಯವಾದ ಮಂತ್ರಿಯು ದುಷ್ಟರಾಜನನ್ನು ಸಂಹರಿಸಿ ತಾನೇರಾಜ್ಯವನ್ನಾಳುವಕ್ರಮವಿದ್ದರೂ ಇಲ್ಲಿ ಆರೀತಿ ಜರುಗದೇ ಆಧುನಿಕ ಪ್ರಪಂಚದ ದೂರದರ್ಶಿತ್ವದ ನಾಗರಿಕರಿಗೆ ಮಾರ್ಗದರ್ಶಕನಾಗಿರುವುದರಿಂದಲೇ ಈಹೊತ್ತಿನವರೆಗೂ 35 ಲಕ್ಷ ವೀರಶೈವರ ತುದಿನಾಲಿಗೆಯಮೇಲೆ ಆ ಬಸವನಾಮಾಕ್ಷರಗಳು ಕುಣಿದಾಡುತ್ತಿರುವುದೇ ಸಾಕ್ಷಿಯಾಗಿರುವುದು. ಹಾಗಿಲ್ಲದಿದ್ದರೆ ಪೌರ್ವಮೌಢ್ಯಬದ್ಧ ಪ್ರಶ್ನಕರ್ತನು ಆಧುನಿಕ ಆಂಗ್ಲೇಯರ ಹೈಂದವಶಿಕ್ಷಾಸ್ಮೃತಿಯ 302 ವಿಧಿಯನ್ನು

CC-0. Jangamwadi Math Collection. Digitized by eGangotri

ಅನುಭವಿಸಲೇಬೇಕಾಗುತ್ತದೆಂಬುವುದನ್ನು ಸಂಪೂರ್ಣ ಲಕ್ಷ್ಯಕ್ಕೆ ತಂದು, ಇತಃ ಪರ ಹಾಗೆಮಾಡುವುದಿಲ್ಲೆಂಬ ಅಭಯವನ್ನು ಕೊಟ್ಟು ಶ್ರೀ ಬಸವೇಶ್ವರನ ಕ್ಷಮೆಯನ್ನು ಬೇಡಿ ಪುನೀತನಾಗಲಿ.

ಬಸವೇಶ್ವರನು ಹಡಪದಪ್ಪಣ್ಣನನ್ನು ದ್ವಾರಪಾಲಕನನ್ನಾಗಿಯೂ, ಪಾಕದ ಭೀಮಯ್ಯ ಅಂಬಿಗರ ಚೌಡಯ್ಯರನ್ನು ಅನ್ನದಾನದ ಶಾಪಿಯಮೇಲೆ ಪಾಕಾಧ್ಯಕ್ಷರನ್ನಾಗಿಯೂ ನಿಯಮಿಸಿದ್ದನು. ೫೫ ಇವರೊಳಗಣ ಚೌಡಯ್ಯನು ಧೀರವೀರನಾಗಿ ಶರಣರ ವಿಹಾರಾರ್ಥವಾಗಿ. ಆಗಾಗ ಊಟವಾದನಂತರ ಸಾಯಂಕಾಲದಲ್ಲಿ ತಿಪ್ಪೋತ್ಸವಗಳನ್ನು ನಡೆಸುತಿದ್ದನು. ಅಪ್ಪಣ್ಣನೂ ಚೌಡಯ್ಯನೂ ಇಬ್ಬರೂ ಹೇಯವಾದ ಬಿಕ್ಷೆಯನ್ನೂ, ಭಂಗಿ, ನಾಶಿ, ತಂಬಾಕು ಮುಂತಾದ ಪಂಚಬಾಬುಗಳನ್ನು (ಹೆಂಡ, ಸರಾಯಿ, ತಂಬಾಕು, ಗಂಜಾ, ವೀಳ್ಯದೆಲೆ) ತೀವ್ರತರವಾಗಿ ತಮ್ಮತಮ್ಮವಚನಗಳಲ್ಲಿ ಖಂಡಿಸಿ, ಸಹ ಪಂಕ್ತಿ ಭೋಜನವನ್ನು ಬೆಳೆಯಿಸಿ ತಮ್ಮವಚನಗಳದ್ವಾರಾ ಸಮಾಜವನ್ನುದ್ಧರಿಸಿರುವರು ೫೫ ಈ ಸುಪಂಥವನ್ನು ಈಗಿನಗುರುವರ್ಗದವರು ಆದರಿಸುವುದು ತಮ್ಮ ಉದರಂಭರಣಕ್ಕೆ ಸಹಜವೇಇದೆ. ಇದನ್ನು ಪೂರ್ಣಲಕ್ಷಕ್ಕೆ ತಂದು ಅಪಾತ್ರವಿನಿಯೋಗವನ್ನು ಸರ್ವಥಾಮಾಡಲಾಗದೆಂದು ನನ್ನ ಸವಿನಯಸೂಚನೆ.

ಪೌರೋಹಿತ್ಯಕ್ಕೆ ವೇದಮೂರ್ತಿ ಸಂಗಣ್ಣನೆಂಬುವನಿದ್ದನೆಂದು ತಿಳಿಯಬರುತ್ತಿದೆ.

ಬಸವೇಶ್ವರನು ಕೋಶಗಣತವಲ್ಲಿ ಅತಿಪ್ರವೀಣನಾಗಿದ್ದುದರಿಂದ ಒಂದು ಸಾರಿ ಎರಡುಲಕ್ಷಹೊನ್ನುಮೌಲ್ಯಬಟ್ಟು ಬೆಲೆಬಾಳುವ ರತ್ನಾಭರಣಗಳನ್ನು ಬಹುಮಾನವಾಗಿ ಪಡೆದನೆಂದು ತಿಳಿಯುತ್ತದೆ.೫೦ ಆಗಿನಕಾಲದಲ್ಲಿ ಈತನು (1)ಬಂಕದೆರೆ (2) ಸಿದ್ಧಾದಾಯ (ಸಿದ್ಧಾಯ) (3) ಬಿಟ್ಟಕೊಟ್ಟಣ (4) ಸುಂಕ (octroi & Toll) (5)ಅಂಕೆಯ ಸೊಲ್ಲಿಗೆ(ಮಲವದಿಕೆ)(6)ಕವಣ(ಕವಣೆ) (7) ಕಡ್ಡಾಯದಂಕೆ (8) ತಳವರಿಕೆ (9) ಕೋರಾಯ (equal produce) (10) ಗುತ್ತಿಗೆ (Rental lease) (11) ಅಪುತ್ರಿಕೆ (12) ದಂತ (ದಂಡ) (13) ಉಂಡಿಗೆ, ಈಪ್ರಕಾರ 13 ರಾಜಾದಾಯಗಳನ್ನು ಕಲ್ಪಿಸಿ ಈಗಿನವರಿಗೆ ಮಾರ್ಗದರ್ಶಕನಾಗಿಹೋದನು. ೫೧ ಇದರಲ್ಲಿ ಬಂಕದೆರೆ ಎಂಬುವುದು ಈಗಿನ

CC-0. Jangamwadi Math Collection. Digitized by eGangotri

ಇಂಗ್ಲೀಷರ ಪೂರ್‌ಲಾಸ್(Poor-laws)ಗೆ ಅನುಸರಿಸಿದ್ದಂತೆ ತೋರುತ್ತದೆ. ಅಂದರೆ ಭಿಕ್ಷೆಬೇಡುವ ಸೋಮಾರಿ ಕಾಯಕದವರನ್ನು ಕಾರಾಗೃಹವಾಸಯೋಗ್ಯರನ್ನಾಗಿ ಮಾಡುತ್ತಿದ್ದನು. ಮತ್ತೂ ಸೂಕ್ಷ್ಮವಾಗಿ ಶಿಕ್ಷಿಸಬೇಕೆಂದಿದ್ದಲ್ಲಿ ಪಟ್ಟವಾದ ಕಾಡುಗಿಡಗಳನ್ನು ಕಡಿಸಿ ಸುಡಿಸಿ ಕುಮರಿಗಳನ್ನೆರ್ಪಡಿಸಿ ಭೂಮಿಗಳನ್ನು ಸಾಗುಮಾಡಿಸಿ, ಬೆದ್ದಲು (ಜಣನೆಲ) ಬೆಳೆಯುವನಾಡಾಗುವಂತೆ ಏರ್ಪಡಿಸಿದ್ದನು. ಆಗಲೆ ರಾಜಮಾರ್ಗಗಳು ಸಹಾ ಏರ್ಪಟ್ಟವೆಂದು ಭಾಸವಾಗುತ್ತದೆ. ಇದರ ಮೇಲಿಂದ ವ್ಯವಸಾಯಾದಿ ಜೀವನೋಪಾಯಗಳು ದೊರೆತು, ಜನರು ಕುಳವಾಡಿಗಳಿಂದಲೂ, ಗಿಡಗಾವಲಿಗಳಿಂದಲೂ (Forest watch-men) ದೃಷ್ಟಮೃಗಗಳ ಭಯವಿಲ್ಲದೇ ಸುಖಿಗಳಾಗಿ ಜೀವಿಸುತ್ತಿದ್ದರು. ಪಶುಗಳಿಗೆ ಸಹಾ ಗೋಭೂಮಿ (Lands for grazing) ಯಿಂದ ಮೇವಿನ ಅಭಯವಿತ್ತು. ಈ ಬಂಕದೆರೆಗೆ ಸೀಮೋಲ್ಲಂಘನ (ಅತಿಕ್ರಮಣ ಅಥವಾ ಸ್ವಯಂಪ್ರವೇಶ ಅಂದರೆ ಮುಂದೊತ್ತಿಕೆ) ತೆರಿಗೆ (Tax on encroachment of land) ಎಂದು ನನ್ನಮಿತ್ರರೊಬ್ಬರು ಅರ್ಥವನ್ನು ವಿವರಿಸಿದರು. ಇದಾದರು ಇರಬಹುದು. ಸಿದ್ಧಾಯವೆಂಬುವುದು ಸಾಮಂತರಾಜರ ಬೀಡುಕಾಣಿಕೆ (Royalty) ಯಾಗಿತ್ತು. ಇದು ಉತ್ಪನ್ನದ ಅರ್ಧವಾಗಿತ್ತು. ಬಿಟ್ಟಿಕೊಟ್ಟಣವೆಂಬುವುದು ಮನುಷ್ಯರ ಉಚಿತಕಾಯಕಷ್ಟವಾಗಿತ್ತು (free labour). ಅಂಕೆಯಸೊಲ್ಲಿಗೆ (ಸಲ್ಲಿಗೆ Homage) ಎಂಬುವುದು ಯೋಗ್ಯತಾನುಸಾರ ಪಾದಕಾಣಿಕೆಯಾಗಿತ್ತು. ಕವಣವೆಂಬುವುದು ವಿದ್ಯಾಸಂಬಂಧತೆರಿಗೆ (Education cess) ಯಾಗಿತ್ತು. ಕಷ್ಠಾಯದಂಕೆಯು ಗೋವೃಷಭೇತರ ಪಶುಗಳಿಗೆ ಗುಡ್ಡಮೇವುಸುಂಕವಾಗಿತ್ತು. ಅಪುತ್ರಿಕೆ ಯೆಂಬುವುದು ಅಸ್ವಾಮ್ಯ ಸೊತ್ತಾಗಿತ್ತು (unclaimed property). ಬಂಜರುಭೂಮಿಗಳನ್ನು ಸಾಗುಮಾಡಿಸಿ ನೀರಾವರಿಯಾಗುವಂತೆ ಅನೇಕ ಸೌಲಭ್ಯಗಳನ್ನು ಕಲ್ಪಿಸಿದ್ದೇ ದಂತವೆಂದು ತಿಳಿಯುತ್ತದೆ. ಏಕಂದರೆ ಮೇಗಳೊಳಗಣ ಸಿದ್ಧಾಯವೆಂಬ ಬೀಡುಗಾಣಿಕೆಯು ಅನ್ನೋಪಭೋಜ್ಯಪದಾರ್ಥಗಳಿದ್ದುವು. ತೀ ಬಸವೇಶ್ವರನು ಅನ್ನಸೂಕ್ತಘನಪ್ರಪಾಠಿಯಾಗಿ (ಯಜುರ್ವೇದ ಬ್ರಾಹ್ಮಣ 2-ನೇಕಾಂಡ 8 ನೇ ಪ್ರಪಾಠಕ 8-ನೇ ಅನುವಾಕ) ದ್ದು, ಅನ್ನದಾನಿಯಾಗಿದ್ದುದರಿಂದಲೇ ಜನಾನುರಾಗಿಯಾಗಿ ಅಹರ್ನಿಶೆಯು ಇಂದಿನವರಿಗೂ ಮುಂದಕ್ಕೂ ಕೊಂಡಾಡಲ್ಪಡುತ್ತಿರುವನು. ಮತ್ತು ಈತನ ಕಾಲದಲ್ಲಿ ಬರಗಳೇ ಇದ್ದಿಲ್ಲವೆಂದು ಧಾರಾಳವಾಗಿ ಹೇಳಬಹುದು. ಕಾರಣವೇನು? ಈತನು ಧರ್ಮರೂಪದ ಅವತಾರಮೂರ್ತಿಯಾ

CC-0. Jangamwadi Math Collection. Digitized by eGangotri

ದುದರಿಂದ ಮಳೆಬೆಳೆಯ ತುಷ್ಟಿಯಿಂದ ಧನಧಾನ್ಯಪುಷ್ಟಿಯದ್ವಾರ ಆಟಪಾಟಿಗಳಿಂದ ಧರ್ಮಚ್ಯುತಿಯಿಲ್ಲದೇ ಸಾವಿಗೆಂಜದೇ ಜನರು ಸುಖೋಪಭೋಗಿಗಳಾಗಿದ್ದರು. ಉಂಡಿಗೆಯೆಂಬುವುದು ಆಧುನಿಕನಾಗರಿಕರ ಸೂಪರ್ ಟ್ಯಾಕ್ಸ್ (super tax on luxuries)ನಹಾಗೆ ಆಗಿನಕಾಲದಲ್ಲಿ ಸುಖಲಾಲಸೆಯ ಹಕ್ಕುಗಳ (ದುಂದುವೆಚ್ಚದ ಉತ್ಸವಗಳ) ಮೇಲೆ ಕೂಡ್ರಿಸುವ ಕರವಾಗಿತ್ತು. ಇತ್ತೀಚಿನ ಭಾರಮಾರ್ಗ;(transit duty)ಕರಗುಪಡಿ,(Duty ongoods consumed) ಸ್ಥಳಭರತಿ; ಏರುಕಾಣಿಕೆ (plough tax) ಗಾಣತೆರಿಗೆ ಮುಂತಾದುವು ಇದ್ದಿಲ್ಲ.

ಯಜುರ್ವೇದಸಂಹಿತೆಯ 1ನೇಕಾಂಡಪ ೨ನೆ ಪ್ರಪಾಠಕದ 1ನೇ ಅನುವಾಕದಲ್ಲಿ ಹೇಳಲ್ಪಟ್ಟ ರುದ್ರನೆಂಬ ಅಗ್ನಿಯು ಅಶ್ರುಜಲಸಾರವಾದ ಬೆಳ್ಳಿಯನ್ನು 92 ದಾನಯೋಗ್ಯವಲ್ಲವೆಂದು ತಿಳಿದು ಈಗಿನ ಸುಮಾರು ಐದುರೂಪಾಯಿಗಳ ಬೆಲೆಬಾಳುವ ಬಂಗಾರನಾಣ್ಯವಾದ ಬಸವನಮುದ್ರೆಯಪರಹ (ಸಂದಿಪಣ) ಎಂಬುವುದನ್ನು ಪ್ರಸಿದ್ಧಪಡಿಸಿದ್ದು ಲೋಕಕ್ಕೆ ತಿಳಿದೇ ಇರಬಹುದು. 93 ಈ ಸಂದಿನಮುದ್ರೆಯಮೇಲೆ ಗುರುತ್ವವನ್ನಿಟ್ಟು ಇತ್ತೀಚಿಗೆ ಅನೇಕ ಮಹಾರಾಷ್ಟ್ರರಾಜರು ತಮ್ಮರಾಜ್ಯದಲ್ಲಿ ನಾಣ್ಯಗಳಾಗಿ ಮುದ್ರಿಸಿರುವರು. ಬೇಕಾದಲ್ಲಿ ಇಂದೂರಸಂಸ್ಥಾನದ ಹೋಳಕರರಾಜತ ನಾಣ್ಯಗಳೇ ಸಾಕ್ಷಿಯಾಗಿರುವುವು ಬಸವನು, ಚಕ್ಕಿಮಾಜಯ್ಯ, ನುಲಿಯಚಂದಯ್ಯ, ವಚನಗ್ರಂಥಕರ್ತಳಾದರೆಮ್ಮವ್ವೆ ಇವರನ್ನು ಕದುರುಕಾಯಕದಲ್ಲಿ ಪ್ರೇರಿಸಿ ದೇಶೀಯವಸ್ತ್ರಗಳ ಪ್ರಸಾರಣೆಗೆ ಮಾರ್ಗದರ್ಶಕನಾದನು94 ಇದಕ್ಕೆ ಈಗಲೂ ವಸ್ತ್ರದವರೆಂಬುವರು ಸಮಾಜದಲ್ಲಿ ಪ್ರಸಿದ್ಧರಾಗಿ ಇರುವುದೇ ಮೇಲ್ಪಂಕ್ತಿಯಾಗಿದೆ. ಪಾಂಡ್ಯರಾಜ್ಯದಿಂದಬಂದು ದೇವರದಾಸಿಮಾರ್ಯಾನಯಾಜಮಾನ್ಯದಲ್ಲಿಪಟ್ಟುಸಾಲೆಗಳು,95 (ಇವರು ಮೊದಲು ಬ್ರಾಹ್ಮಣರಿದ್ದು ತರುವಾಯ ವೀರಶೈವರಾದರೆಂದು ತಿಳಿಯಬರುತ್ತದೆ) ಸಂಗಮೇಶ್ವರನ ಯಾಜಮಾನ್ಯದಲ್ಲಿ ಬಿಳಿಮಗ್ಗದವರೆಂಬುವರೂ (ಕುರುಹಿನ ಸೆಟ್ಟರು) ವಸ್ತ್ರವ್ಯಾಪಾರಿಗಳಾಗಿ ಮೊದಲಿನಿಂದಲೂ ಪ್ರಸಿದ್ಧರಾಗಿಯೇ ಇದ್ದರು. ಆದುದರಿಂದ ಆಹಾರವಸ್ತ್ರಗಳ ಕುಂದುಕೊರತೆಗಳಿಲ್ಲದೆ ಆಗಿನಕಾಲದಲ್ಲಿ ಧರ್ಮಸಾಮ್ರಾಜ್ಯವಾಗಿತ್ತು. ಹಾಗೆಯೇ ಬಾಚಿಕಾಯಕದ ಬಸವಪ್ಪ - ಹೆಂಡತಿಕಾಳವ್ವೆಯರನ್ನು ಪ್ರೇರಿಸಿ ಶಿಲ್ಪಕಲೆಯನ್ನು ಅಭಿವೃದ್ಧಿಪಡಿಸಿದನು. ಅವರಿಂದಲೇ ಕಲ್ಯಾಣವು ಶಿಲ್ಪಗಿರಿಯೆಂಬ ಸಾರ್ಥಕ

CC-0. Jangamwadi Math Collection. Digitized by eGangotri

ನಾಮಧೇಯವನ್ನು ಧಾರಣಮಾಡಿದ್ದುದು ಆಶ್ಚರ್ಯವೇನೂ ಇಲ್ಲ. 98

ಮತ್ತೂ ಅನೇಕ ಪಳ್ಳಿಕೂಟಗಳನ್ನೇರ್ಪಡಿಸಿದನು. (Educational institutions) ಹೀಗೆ ಅನೇಕ ಕಲಾಕೌಶಲ್ಯವ್ಯಾಪಾರಗಳನ್ನು ಹೆಚ್ಚಿಸಿ ಕೀರ್ತಿವಡೆದನು.

ಬಸವೇಶ್ವರನು ತನ್ನಕೈಕೆಳಗಿದ್ದ 60 ಕರಣಿಕರನ್ನು ಎರಡುವರ್ಗವಾಡಿ ಮಧುವರಸ, ಜಗದೇವರಸ, ಸುವಿಚಾರಿ ಬಲದೇವರಸ, ವಚನ ಗ್ರಂಥಕರ್ತನಾದ ಶಾಂತರಸ, ಸೊಡ್ಡಳ ಬಾಚಿದೇವರಸ, ಬೊಕ್ಕಸದ ಸಂಗಣ್ಣ ಇವರನ್ನು ಮೇಲ್ತರದವ (Upper house) ರನ್ನಾಗಿಮಾಡಿ ಇವರಿಗೆಲ್ಲ ತನ್ನ ಮಾವನಾದ ಸಿದ್ಧರಸನನ್ನು ಕೋಶಾಗಾರದ ಮುಖ್ಯಾಧಿಕಾರಿಯನ್ನಾಗಿ ಮಾಡಿದ್ದನು. 97 ಆಕಾಲದಲ್ಲಿನ ಈ ವಿಭಾಗವು ಯಾಗಿನ ಟ್ರೆಜರಿ ಡೆಪುಟಿಕಲೆಕ್ಟರ್, ಅಕೌಂಟೆಂಟು ಜನರಲ್ ಇವರಿಗೆಸರಿಹೋಲುವುದು. ಇವರೊಳಗಣ ಶೈವವೀರನೂ ಸೋಮಾಯಕ್ಕನ(ಸೋಮವ್ವೆ, ಪಾರ್ಶತಿ)ನ 98 ಮಗನೂ ಆದ ಜಗದೇವನನ್ನು ತಾನು ಆಂತರಂಗಿಕ ರಕ್ಷಕಸ್ನೇಹಿತನನ್ನಾಗಿ (aid-de-camp) ಮಾಡಿಕೊಂಡಿದ್ದನು. ಇವನಿಗೆ ಜಗದ್ದೇವ, ಜಗದೀಶ, ಜಗದೇಕ, ವಜದೇವನುಲ್ಲ ಎಂಬ ಉಪನಾಮಗಳಿದ್ದುವು.99 ಹಣದಾಸಿ ವೀರಣ್ಣನು ಬೊಕ್ಕಸದ ರಕ್ಷಣ ಭಟಾಗ್ರೇಸರ(Inspector General of Police) ನಾಗಿದ್ದನು. ರಾಜನ ಶ್ರೀಹಸ್ತ ಕೋದ್ಯೋಗವನ್ನು (Private Secretary-ship) ಗಣಿತವೇತ್ತನಾದ ಘೂಪದಮಂಚರಸನಿಗೆ ಕೊಡಿಸಿದ್ದನು. 100 ಈ ಕಾಲದಲ್ಲಿದ್ದಂತೆ ಆಗಲೂ ಕಾಗದ ಪತ್ರವ್ಯವಹಾರದ ಅಂಚೆಯ ಶಾಖೆಯೊಂದಿದ್ದಿತು. ಇದರ ಮೇಲಣ ಸರ್ವಾಧಿಕಾರಿಗೆ ಓಲೆಯವೆಗ್ಗಡಿ ಎಂದು ಕರೆಯುತ್ತಿದ್ದರು. 101 ಇವನು ರಾಜಶಾಸನಗಳ ವ್ಯವಸ್ಥೆಯನ್ನು ನೋಡುತಿದ್ದನು. ಇವನೇ ಈಗಿನ ಪೋಸ್ಟು ಮಾಸ್ತರ್ ಜನರಲ್ಲನು. ಈತನು ರಾಜನಿಗೆ ಅತ್ಯಂತ ವಿಶ್ವಾಸಪಾತ್ರನಾದಸೇವಕನಿದ್ದು, ಬಸವೇಶ್ವರನಮೇಲೆ ಆಗಾಗ ಪೃಷ್ಟಮಾಂಸ ಭಕ್ಷಣೆಯನ್ನು(ಚಾಡಿ) ಮಾಡುತ್ತಿದ್ದನು. ಇಕ್ಕದ ಮಾರಿಯೆಂಬ ಹಾಲಿಕಮಾರಯ್ಯನು-ಹೆಂಡತಿಕೊಡದ ಮಾರಿಯೊಡನೆ ಕೃಷಿಕರ್ಮಶಾಖಾಧ್ಯಕ್ಷ (Director of Agriculture) ನಾಗಿದ್ದನು. 102 ಇವನಕಾಲದಲ್ಲಿ ಅನೇಕದಶಬಂಧಗಳು, ಕೊಡಗಿದಾರರು (Holder of wet lands free for repairing tanks) ಏರ್ಪಟ್ಟರು. ವೈದ್ಯಸಂಗಣ್ಣನು ಆಯುರ್ವೇದ ಶಾಖಾಧಿಕಾರಿ (Surgeon—General)

CC-0. Jangamwadi Math Collection. Digitized by eGangotri

ಯಾಗಿದ್ದ ಮೇಲೆ ದೇಶವು ಎಷ್ಟರ ಮಟ್ಟಗೆ ಅಬಾಧಿತವಾಗಿತ್ತೆಂಬು ದನ್ನು ವಾಚಕರೇ ಊಹಿಸಲಿ. ರತ್ನದ ರಾಚಯ್ಯನು ಖನಿಜಶಾಖಾಧಿಕಾರಿ (Director of Mines) ಯಾಗಿದ್ದನು. ದಕ್ಷಿಣಾಪಥವು ಖನಿಜಗಳಿಗೆ ವಿಶೇಷ ಪ್ರಸಿದ್ಧವಾದದ್ದು ಈತನಕಾಲದಿಂದಲೇ. ಕೋಶಾಗಾರದ ನವರತ್ನ ಪರೀಕ್ಷಕನು ಮೌಕ್ತಿಕ ಸಂಗಯ್ಯನೆಂಬುವನಿದ್ದನು. ದುಷ್ಟ ಮೃಗಗಳ ವಿನೋದಪಾಲನಾಧ್ಯಕ್ಷನು ಶಾರ್ದೂಲ ಸಂಗಯ್ಯನೆಂಬುವನಿದ್ದನು.

700 ಆನೆಗಳೊಳಗೆ ಭದ್ರಕಾಯ, ಕಾಲಾಗ್ನಿರುದ್ರ, ರಾಯಕೋಲಾಹಲ, ಸಂಗರವಿಜಯ, ಮುಂಗಳಯಶ, ಜಗದೇಕವೀರ, ಅಪ್ರಮತ್ತ, ಅಂತಕಾಂತಕ, ತ್ರಿಪುರಾಂತಕವೆಂಬಿವು ವಚನಗ್ರಂಥಕರ್ತನಾದ ಗಜಸಾಹಣಿ (ಮಾವುತ) ಯಾದ ಗಜೇಶಮಸಣಯ್ಯನ ಅಂಕಿತದಲ್ಲಿ ಪ್ರಸಿದ್ಧವಾಗಿದ್ದುವು. 103 12000 ಕುದುರೆಗಳೊಳಗೆ ಸುಭಗೆ, ತತ್ವಜ್ಞವರದ, ಸುಪ್ರಸನ್ನ, ಚಿತ್ರಾಂಗದ ಚಂದ್ರಾತಪ, ವಾರಣಾಸಿ, ವಾಯುವೇಗ, ಈಶಾನವೆಂಬಿವು 104 ಪ್ರಸಿದ್ಧವಾಗಿದ್ದುವು. ವಿಶ್ವೇಶ್ವರಗುರು ಕರಜಾತರಾಮಣ್ಣನು ಗೋಪಾಲನಾಧ್ಯಕ್ಷನಾಗಿದ್ದನು. ಇದು ಅಲ್ಲದೇ 12000 ಪಲ್ಲಕಿ(ರಥ)ಗಳು, 150000 ಸೈನ್ಯವು, ಗಂಗಾಭವಾನಿಯಿಂಕೂಡಿದ 100 ದುರ್ಗಗಳು, 8000 ಬೆಳ್ಳಿಪಾತ್ರೆಗಳು ಇಂತಿಷ್ಟನ್ನೂ ಶೀ ಬಸವೇಶ್ವರನು ಸಂಗ್ರಹಿಸಿದ್ದನು. 105

ಪಾಪಕವಿಯು 9000 ನವಬಲರಿದ್ದರೆಂದು, ಧರಣಿಪಂಡಿತನು, 196000 ಕುದುರೆಗಳೂ, 900000 ಸೈನ್ಯ, 10000 ಆನೆಗಳೂ 5000 ರಾಜಕುಮಾರರೂ ಇದ್ದರೆಂದು, ಚಂದ್ರಸಾಗರನು 1200000 ಬಲ, 200000 ಆನೆಗಳೂ, 100000 ರಥಗಳೂ 800000 ಕುದುರೆಗಳಿದ್ದವೆಂದು ಆಂಧ್ರಸೋಮನಾಥದ್ವಯರು 1200000 ಪದಾತಿಯಿಂದು, ಸಿಂಗಿರಾಜನು 8000 ಮಕುಟವರ್ಧನರೂ, 8600000 ರಾಹುತರೂ, (ಕಾಲಾಳು) 3½ ಕೋಟಿ ಬೇಡರೂ, 80 ಲಕ್ಷಭಲ್ಲೆಯವರೂ, 30 ಲಕ್ಷ ರಥಗಳೂ, 16 ಲಕ್ಷ ನಾಯಕರೂ, 96 ಲಕ್ಷ ವೃಷಭಾಶ್ವಗಳು, 1½ ಕೋಟಿ ಬೇಟೆನಾಯಿಗಳೂ (ಇವುಗಳಿಗೆ ಅನ್ನಮಾಡಿ ನೀಡುವುದು ಕಷ್ಟ,) 18 ಲಕ್ಷ ದ್ರವ್ಯದಪೆಟ್ಟಿಗೆಗಳೂ 88 ಸಾವಿರ ರತ್ನಕಲಶಗಳಿದ್ದವೆಂದು ಇವರೆಲ್ಲರೂ ಹೇಳಿರುವುದು ಅಸಂಭವವೂ ಅತಿಶಯೋಕ್ತಿಯೂ ಇರುವುದರಿಂದ ನಂಬಲರ್ಹವಾಗುವುದಿಲ್ಲ. 106 ಅದರೊ

CC-0. Jangamwadi Math Collection. Digitized by eGangotri

ಳಗೆ ಸಿಂಗಿರಾಜನು ಒಂದುಕಡೆಯಲ್ಲಿ ಹೇಳುವ 1½ ಲಕ್ಷ ವೀರಭಟರನ್ನೇ ಸೈನಿಕರನ್ನಾಗಿ ಎಣಿಸುವುದೇ ಸಯುಕ್ತಿಕವಾಗಿ ಕಾಣುತ್ತಿದೆ. 107 ಕಾಶಿ ಗಯಗಳಂತೆ ಪಟ್ಟಣವು ಪಂಚಕಲ್ಯಾಣಗಳನ್ನೊಳಕೊಂಡು 12 ಯೋಜನ ಅಂದರೆ 30-35 ಮೈಲುಗಳ ಸುತ್ತಳತೆಯುಳ್ಳದ್ದಾಗಿ 100 ದ್ವಾರಗಳೊಳಗೆ ನೈರುತ್ಯನಾರಾಯಣನೆಂಬ ಹೆಬ್ಬಾಗಿಲು, 120 ಬೀದಿಗಳೊಳಗೆ ಚಂದ್ರ ಸೂರ್ಯ ವೀಧಿಗಳು ಪ್ರಸಿದ್ಧವಿದ್ದುವು. 108 ಹಾಗೆಯೇ ಒಳಗೂ ಹೊರಗೂ ಸುತ್ತಲೂ ಅನೇಕ ಸಣ್ಣ ದೊಡ್ಡ ಕೆರೆಗಳಿದ್ದವೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ದೇವಾದಾಯಗಳಲ್ಲಿ ಪ್ರಸಿದ್ಧಹೊಂದಿದ ತ್ರಿಪುರಾಂತಕೇಶ್ವರಾಲಯವು ಮುಖ್ಯವಾಗಿತ್ತೆಂದರೆ ತಪ್ಪಾಗಲಿಕ್ಕಿಲ್ಲ. ಇಂತಿಷ್ಟನ್ನೊಳಕೊಂಡಮೇಲೆ ಶುಭಪುರಾದಿ ನಾಮಗಳು ಸಾರ್ಥಕವಾಗಿರುವುದು ಆಶ್ಚರ್ಯವೇನುಇಲ್ಲ. 109

ಈತನಕಾಲದಲ್ಲಿಯೇ ಪ್ರಜಾಸತ್ತಾತ್ಮಕವು (Self-Government) ವಿಶೇಷವಾಗಿ ಬೆಳೆದು ಪ್ರತಿಗ್ರಾಮದಲ್ಲಿ ಸೆಟ್ಟಿಯೆಂಬ ಸಿವಿಲ್ ಅಧಿಕಾರಿಯೂ, ಗೌಡನೆಂಬ ಮೆಜಸ್ಟೀರಿಯಲ್ (ದಂಡ) ಅಧಿಕಾರಿಯೂ, ಹೆಗ್ಗಡೆಯೆಂಬ ಸೂಪರಿಂಟೆಂಡೆಂಟ್‌ಮುಂತಾದವರು ಚಿರಸ್ಥಾಯಿಯಾಗಿ ಆದರ್ಶಪ್ರಾಯರಾಗಿಇಂದಿನವರೆಗೂ ಉಳಿದಿರುವರು. ಹಾಗೆಯೇ ಧರ್ಮೋದ್ಧರಣಕಾರ್ಯದಲ್ಲಿ ಮಠವೃತ್ತಿಗಳದ್ವಾರಾ, ಮಠಾರ್ಯ, ಗಣಾರ್ಯ, ಮಠಪತ್ತಿಗಳನ್ನು ಪ್ರಕಟವಾಡಿ ಅಜರಾಮರ ಕೀರ್ತಿಭಾಜನಕ್ಕೊಳಗಾದನು. ಈ ಸಂದರ್ಭದಲ್ಲಿ ಪರಮತೀಯ ಘಾರ್ಮುಹಾರನು ಬ್ರಾಹ್ಮಣೇತರರನ್ನು ಆಚಾರ್ಯರನ್ನಾಗಿ ಬಸವನು ನಿಯಮಿಸದನೆಂದು ಬರೆದಿರುವುದು ಹಾಸ್ಯಾಸ್ಪದವು, ಮತ್ತು ಅವಿಶ್ವಸನೀಯವಾಗಿದೆ. 110

ಶ್ರೀ ಬಸವೇಶ್ವರನಮೇಲೆ ಪೃಷ್ಟಮಾಂಸಭುಂಜನ (ಕವಿಯುಮಾದುವವ) 36 ವಿರೋಧಿಗಳೊಳಗೆ ಪೋಚ(ತ)ರಸ, ಮೈಲಾರಯ್ಯ, ಕಾಳಿಮರು ಪ್ರಸಿದ್ಧ ವೀರಸಾಮಂತರಾಗಿದ್ದರು. ಅಣ್ಣಪ್ಪ ಪಾಧ್ಯಾಯರವಲ್ಲಭ, ಋಗ್ವೇದಿ ದಾಮೋದರ, ಸಾಮವೇದಿ ಅಪ್ಪಣ್ಣ, ಚತುರ್ವೇದಿ ಕೃಷ್ಣರಸ, ಜನ್ನಪಂಡಿತ, ಪಿರಿಯಸೋಮುಪಾಧ್ಯಾಯ, ರಸಕವಿರಾಮ, ಕೇಶವೋಪಾಧ್ಯಾಯರು ಪಂಡಿತರಾಗಿದ್ದರು. 111

ಒಂದುಸಾರಿ ವೀರಶೈವರಿಗೆ ಸೊಡ್ಡಳಬಾಚಿರಾಜನು ಸಹಾಯೋಪಕಾರಿ

CC-0. Jangamwadi Math Collection. Digitized by eGangotri

ಯಾದನೆಂದು ಬಿಜ್ಜಳನು ಆತನ ಕಣ್ಣುಗಳನ್ನು ಕೀಳಿಸಲು ಆವಿಪ್ಲವ (ದಂಗೆ) ದಲ್ಲಿ ಅಪ್ಪರಸ, ತಿಪ್ಪರಸ, ಅಜಕುಂಡಲ, ನೇಮಿ, ರಾಘವರು ಗಾಯಪಡೆದರು. ದಾಮೋದರ, ಕಾಳಿನು, ಕೇಶವ, ಪೋಚರಸ, ಕಾಮು, ಬೊಮ್ಮ, ಸೋಮು, ಮಲ್ಲ, ಸಿರಮ, ರಣಭೈರವ, ವಿರೂಪ, ಭೀಮು ಮುಂತಾದ ವೀರಭಟರು ಸತ್ತರು. 112

ಯಾದವ, ಹೊಯಸಲ, ಚಾಳುಕ್ಯ, ಕಾಕತೀಯರ ವಿಪ್ಲವವಾತಾವ ರಣದಲ್ಲಿ ಒಂದುಸಾರಿ ಸಿಂಗಿರಾಜನೆಂಬ ಶೀ ವೈಷ್ಣವ ಸಾಮಂತರಾಜನು ಬಂಡಾಯವನ್ನೆಬ್ಬಿಸಲು ಅದನ್ನು ಮುರಿದು ಅಸಾಧಾರಣರಣಕೌಶಲದಿಂದಲೂ ಪಂಚತಂತ್ರ ಚತುರೋಪಾಯಗಳಿಂದಲೂ ಬಸವೇಶ್ವರನು ಅವನನ್ನು ಸಜೀವಿ ಯಾಗುವಂತೆ ಸೆರೆಹಿಡಿದು ಲೋಕೈಕಮಾನ್ಯತೆಯನ್ನು ಪಡೆದನು. ಆದುದರಿಂ ದಲೇ ಈತನ ಚರಿತ್ರೆಗೆ ದ್ವಿಜರಾಜ ಮಲೆ ಬಸವರಾಜ ಚಾರಿತ್ರ (ಕೃತ್ರಿಮ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಶ್ರೇಷ್ಟರನ್ನು ಸತ್ಯ ಶೋಧಕ್ಕಾಗಿ ಎದುರಿಸುವ ಚರಿತ್ರನೆಂದರ್ಥ) ಎಂಬುವ ಹೆಸರನ್ನು, ಕೊಟ್ಟಿರುವುದು ಸಾರ್ಥಕವೇ ಸರಿ. 113 ಈ ಸಂದರ್ಭದಲ್ಲಿಯೇ ಅನೇಕ ರಕ್ತಕೊಡಿಗೆ (Free lands given to fallen in battle) ಗಳೇರ್ಪಟ್ಟವು. ಅವು ಈಗಿನ ದೇಸಾಯ ರಲ್ಲಿ ಸಿಕ್ಕಬಹುದು. ಆದುದರಿಂದ ಕರ್ನಾಟಕಪ್ರಾಂತದ ಶೀಮಂತ ದೇಶಾಯರು ಹೆಳವರೆಂಬ ಗ್ರಾಮಚರಿತ್ರಪಾಠಕರದ್ವಾರಾ ತಮ್ಮ ಪೂರ್ವಚರಿತ್ರೆಯನ್ನು ಸಂಗ್ರಹಿಸಿ ಕಳಿಸಿದಲ್ಲಿ ನಾನೂ ಮತ್ತೂ ಮುಂದೆ ಹೊರಡುವ ನನ್ನ ವೀರಶೈವ ಚರಿತ್ರವೂ ತುಂಬಾ ಉಪಕೃತಿಗೊಳಗಾಗುವೆವು.

ಶೀ ಬಸವೇಸ್ವರನ ಅನ್ನದಾನಮಹಿಮೆಗೆ ಕಿವಿಯಾದುವನವರು ಬಿಜ್ಜ ಳನಿಗೆ ಅಸಹ್ಯಪಟ್ಟು ದೂರಲು, ಬಿಜ್ಜಳನು ಕಲುಷಿತಮಾನಸದಾಸನಾಗಿ ಬಸ ವೇಶ್ವರನನ್ನು ನಿರಾಪರಾಧಿಯಾದ ಯತಾರ್ಥವಾದಿ ಎಂಬುವುದನ್ನು ಮರೆತು, ಲೋಕವಿರೋಧಿ ಎಂದು ಬಗೆದು, ಪದಚ್ಯುತನನ್ನಾಗಿಮಾಡಲು ಬಸವೇಶ್ವರನು ಮತ್ತಿಘಟ್ಟಕ್ಕೆ ಹೋಗಿ ಕಲ್ಯಾಣಪಟ್ಟಣದ ಸಿದ್ಧಸೆಟ್ಟಿಯ ಸೇವೆಯದ್ವಾರಾ ಶತದಿಂದ ಸಹಸ್ರವರೆಗೂ 1200 ಸ್ತಂಭಗಳ ಹಂದರವನ್ನು ಹಾಕಿ ಪ್ರತಿದಿನ ದಲ್ಲಿಯೂ ಗಣಾರಾಧನೆಯನ್ನು ನಾಗಿಸಿದ್ದನು. 114 (196 ಸಾವಿರ ಜಂಗಮ ರಿಗೆ ಉಣಬಡಿಸಿದನೆಂಬುವುದು ಸುಳ್ಳು) ಹೀಗೆ ಕಷ್ಟದೆಶೆಯಲ್ಲಿ ಸಹಾ ಅನ್ನ

CC-0. Jangamwadi Math Collection. Digitized by eGangotri

ದಾನಿಯಾದುದಕ್ಕೆ ಆತನ ಕೀರ್ತಿಯು ಸರ್ವತ್ರ ವ್ಯಾಪಿಸಿತು. ಇದನ್ನು ಮಲ್ಲಣಾರ್ಯನು ಸಿದ್ಧಲಿಂಗಾರ್ಯನು ಸಮರ್ಥಿಸಿರುವರು.115 ತರುವಾಯ ಬಿಜ್ಜಳನು ಅಂತಹ ರಾಜ್ಯಾಂತಃಕಲಹಸಮಯದಲ್ಲಿ ಇಂತಹ ಅಘಟಿತಘಟನಾಚಾತುರ್ಯ, ವಿದ್ಯಾಬುದ್ಧಿ ಸಾಮರ್ಥ್ಯಗಳುಳ್ಳ ಬಸವೇಶ್ವರನನ್ನು ಕಳೆದುಕೊಂಡುದುದಕ್ಕೆ ಪಶ್ಚಾತ್ತಾಪಪಟ್ಟು ಅಚಾತುರ್ಯ ಪಾಪಕ್ಕೆ ಶ್ರೀ ಬಸವೇಶ್ವರನನ್ನು ಪುನಃ ಕರೆಯಿಸಿ ಆತನ ಕ್ಷಮೆಯನ್ನು ಬೇಡಿ ತಾನೇ 36 ಸಾವಿರಜಂಗಮರಿಗೆ ಊಟ ಬಡಿಸಿ 5 ಲಕ್ಷ ಹೊನ್ನಿನಮೇಲ್ಪಟ್ಟು ದ್ರವ್ಯವನ್ನೂ ಅನೇಕ ವಸ್ತ್ರಗಳನ್ನೂ ದಾನಮಾಡಿ ದೋಷವನ್ನು ನಿವಾರಣೆಮಾಡಿಕೊಂಡು ಸಾಫ್ಟ್ರ್ಯಕದೇಹಿಯಾದನು. 116 ಈ ಸಂದರ್ಭದಲ್ಲಿ ಬಿಜ್ಜಳ ಬಸವರು ಒಬ್ಬರೊಬ್ಬರಿಗೆ ಸೋತಂಬುವುದಾಗಲಿ, ಬಸವೇಶ್ವರನು ವಿಪ್ಲವಕಾರಕನಾಗಿ ಬಲತ್ಕಾರದಿಂದ ಮಂತ್ರಿತ್ವವನ್ನು ಪುನಃಗ್ರಹಿಸಿದನೆಂಬುವುದಾಗಲಿ ಹೀಗೆಂದು ಚರಿತ್ರಶೋಧಕರು ಬರೆಯುವುದು ಅಪೋಹವು. 117 ಏಕಂದರೆ ಈತನ ಕಾಲದಲ್ಲಿ ದಂಗೆಗಳೇ ಏಳದುದಕ್ಕೆ ಈತನಿಗೆ ಕಾಂತಿರಾಜ್ಯಪ್ರಭುವೆಂದು ಪ್ರಯೋಗಿಸಿರುವರು. 118 ತರುವಾಯ ಅಂತ್ಯದಲ್ಲಿ ಶ್ರೀಬಸವೇಶ್ವರನಿಗೆ ಬಿಜ್ಜಳನೇ ತಾನೇ ವಿಶ್ರಾಂತಿಸುಖವನ್ನು ಕಲ್ಪಿಸಿ, ಬೇಡಿದ ಸುಖೋಪಭೋಗ್ಯವನ್ನು ಕೊಟ್ಟು, ಚೆನ್ನಬಸವೇಶ್ವರನಿಗೆ ಮಂತ್ರಿಪಟ್ಟವನ್ನು ಕಟ್ಟಲು, ಇತ್ತ ಬಸವೇಶ್ವರನು ಕೂಡಲುಸಂಗಮಕ್ಷೇತ್ರಕ್ಕೆ ಮಾದಿರಾಜ, ಕಿನ್ನರಿಬ್ರಹ್ಮ, ಕೇಶರಾಜ, ಮುಸಣಯ್ಯ, ಕೊಕಿಲಬೊಮ್ಮದೇವನೆಂಬ ಕಲಕೇತಬ್ರಹ್ಮ, ಚೌಡಾರ್ಯಾದಿಗಳೊಡನೆ ಬಂದು, ಆಸ್ತಿಕ್ಯವಾದದಿಂದ ಕ್ರೀ. ಶ. 1172-ಕ್ಕೆ ಸರಿಯಾಗುವ ನಂದನ ಸಂ॥ ಕಾರ್ತಿಕ ಬಹುಳ ಅಮಾವಾಸ್ಯ ಸೋಮವಾರದಲ್ಲಿ ತಾನೊಬ್ಬನೇ ಐಕ್ಯನಾದನೆಂದೂಹಿಸಬಹುದು. 119

ಆದರೆ ವಿರೂಪಾಕ್ಷ ಪಂಡಿತನ ಅಭಿಪ್ರಾಯದಂತೆ ಐಕ್ಯನಾದನೆಂದು ಹೇಳುವ ರಕ್ತಾಕ್ಷಿ ಸಂವತ್ಸರವು ಕ್ರೀ. ಶ. 1204 ಕ್ಕೆ ಸರಿಹೋಗುವುದರಿಂದ ಇಷ್ಟುದೀರ್ಘಕಾಲ ಜೀವಿಸಿದನೆಂಬುವುದಕ್ಕೆ ಯಾವಚರಿತ್ರಾಧಾರವು ಬಲಪಡಿಸುವದಿಲ್ಲವಾದುದರಿಂದ ನಂಬಲರ್ಹವಾಗುವುದಿಲ್ಲ. 120 ಮತ್ತು ಕಾಲಜ್ಞಾನವಚನದಲ್ಲಿ ರಾಕ್ಷಸ ಶ್ರಾವಣ ಶು॥೧ ಮಂಗಳವಾರ ಉದಯ 35 ಘಳಿಗೆಯಲ್ಲಿ ಎಂದೂ ಕಲ್ಯಾಣಿ ಕಾಲಜ್ಞಾನದಲ್ಲಿ ರಾಕ್ಷಸ ಆಷಾಢ ಶು॥೧ ಸೋಮವಾರ ಕ್ಷತ್ರಿಯಲ್ಲಿಯೆಂದೂ ಕುರುಹಿನಶಟ್ಟಿನಲ್ಲಿ ರಾಕ್ಷಸ ಫಾಲ್ಗುಣ ಶು॥೧ ಸೋಮು

CC-0. Jangamwadi Math Collection. Digitized by eGangotri

ನಾರರಾತ್ರಿ ೧ತಾಸಿನಲ್ಲಿಯೆಂದು ಹೇಳುವಐಕ್ಯದಿನಗಳು ಅಸಿದ್ಧವಾಗುವವ್. 121 ಇದರಂತೆ ಪಾಶ್ಚಾತ್ಯ, ಪೌರ್ವಾತ್ಯ ಘನವಿದ್ವಾಂಸರ ಅಭಿಪ್ರಾಯಗಳನ್ನು ಸಹ ಭಿನ್ನಿಸತಕ್ಕದ್ದಾಗಿದೆ. 122 ಮತ್ತು ಮೈಸೂರಿನ ಯನ್. ಆರ್. ಕರಿಬಸವಶಾಸ್ತ್ರಿಗಳು ಬಸವೇಶ್ವರನು 96 ವರ್ಷಗಳು ಜೀವಿಸಿದ್ದನೆಂದು ಬರೆದಿರುವುದು ಸಹಾ ಅಸಮಂಜಸವಾಗಿದೆ. ಇದಕ್ಕೆ ವೀರಸಂಗನ ಅಭಿಪ್ರಾಯವು ಕೊಂಚಮಾರ್ಪಡಿಸಿದಲ್ಲಿ ಮೇಗಳ ಸಿದ್ಧಾಂತವೇ ತೇಲುವುದು. ಈ ಸಂಗಮಕ್ಷೇತ್ರವು ಯಾವ ದೆನ್ನುವುದರಲ್ಲಿ ವಾದವಿವಾದಗಳನ್ನು ನಡಿಸತಕ್ಕದ್ದಾಗಿದೆ. ಕ್ರೀ. ಶ. 1168 ರ ಬಳ್ಳಿಗಾವಿಶಾಸನವು ಕೃಷ್ಣತುಂಗಭದ್ರೀ ಸಂಗಮವೆಂದು ಹೇಳುತ್ತದೆ. 123 ಇದು ಕೇವಲ ಅನೃತವು. ಮತ್ತು ಇದೇ ಕಾಲದ ಇನ್ನೊಬ್ಬ ಬಸವನ ಅಂತ್ಯಕಾಲವಾಗಬಹುದು (ಹಿಂದಕ್ಕೆನೋಡು). G. J. ಸೋಮಯಾಜಿಗಳು ಈ ಸಂಗಮವು ಬಾಗೆವಾಡಿಗೆ 6 ಹರದಾರಿ ದೂರದಲ್ಲಿದ್ದು ಘಟಪ್ರಭಾಮಲಪ್ರಭಾನದಿಗಳು ಕೂಡುವದಾಗಿದೆ ಎಂದು ಮತ್ತೋದ್ಧಾರಕುಡು ಎಂಬ ಗ್ರಂಥದಲ್ಲಿ ಬರೆದಿದ್ದಾರೆ 124 ಈ ಗ್ರಂಥಕ್ಕೆ ಆಂಧ್ರವಿಶ್ವವಿದ್ಯಾಲಯ ಪೀಠದ ಉಪಾಚಾರ್ಯಾಧ್ಯಕ್ಷರಾದ ಶ್ರೀಯುತ ಕಟ್ಟಮಂಚಿ ರಾಮಲಿಂಗಾರೆಡ್ಡಿ M.A. ಇವರು ಆಂಗ್ಲದಲ್ಲಿ ಅಭಿಪ್ರಾಯವನ್ನು ಬರೆದಿದ್ದಾರೆ ಇಂಥ ಪದವೀಧರರೇ ಹೀಗೆ ಭೂಗೋಲಜ್ಞಾನಶೂನ್ಯವಿಚಾರದರಾದಮೇಲೆ ಮತ್ತೇನಿದೆ. ಏಕಂದರೆ ಈವಾದವನ್ನು ಇದುವರೆಗೂ ಯಾವನೂ ಸಮರ್ಥನೆಮಾಡುವ ಸಾಮರ್ಥ್ಯವನ್ನು ತೋರಿಸಿಲ್ಲ ಮತ್ತು ಈನದಿಗಳು ಪ್ರತ್ಯೇಕವಾಗಿ ಕೃಷ್ಣಗೆಕೂಡುತ್ತವೆಂಬುದು ಈಗಲಾದರೂ ತಿಳಿದುತೊಳ್ಳಲಿ. ಇದು ಅಲ್ಲದೇ ಇತ್ತೀಚಿಗೆ ಭೀಮಾಪೀನಾನದಿಗಳ ಸಂಗಮವೆಂದು ತರ್ಕಿಸಹತ್ತಿದ್ದಾರೆ. ಇದು ಸಹಾ ಅಸಂಭವನೆಂದು ಅಲ್ಲಮಚನ್ನ ಬಸವಾದಿಗಳ ಚರಿತ್ರೆಯಲ್ಲಿ ಮುಂದೆ ತಿಳಿಸುವೆನು. ಹಾಗೆಯೇ ಕನ್ನಡಜಿಲ್ಲೆಯ ರತ್ನಗಿರಿಯ ಸಮೀಪಸ್ಥ ಸುಗಮೇಶ್ವರ (ಶಾಸ್ತ್ರಿ ವರುಣಾನದಿಗಳಸಂಗಮ) ಗ್ರಾಮವೆಂಬುದು ಸಹಾ ಅಪೋಹವು 125

ಕಡೆಗೆ ಬಿಜ್ಜಳನು ಯಮಭರಮುನಿಯಿಂದ ಭೋಧಿಸಲ್ಪಟ್ಟು ತತ್ಕಾಲಿಕ ವಿರಕ್ತನಾಗಿ ಮಗನಾದ ರಾಯಮುರಾರಿ ಸೋಮೇಶ್ವರನಿಗೆ ವಿವಾಹ ಮಾಡುವ ಸಮಯದಲ್ಲಿ ಪೂರ್ವ ಕೊಲ್ಹಾಪುರಪ್ರಾಂತದ ಸಾಮಂತರಾಜನಾದ (ಸೂರ್ಯದಂಡರಾಜನೆಂದು ಜೈನರು) ಶಿಲಾಹಾರ ವಿಜಯಾದಿತ್ಯ (ವಿಜಯಾರ್ಕ)ನನ್ನು

CC-0. Jangamwadi Math Collection. Digitized by eGangotri

ಕಪ್ಪಕಾಣಿಕೆಗಳನ್ನು ಕೊಡದೆಹೋದುದಕ್ಕೆ ತಾನೇ ಮುಕ್ಕಣ್ಣ, ಬಾಲಹನುಮ, ಭಲದಂಕ, (ಮೊದಲು ಜೈನನಿದ್ದು ತರುವಾಯ ವೀರಶೈವನಾದನು) ನಿಶ್ಶಂಕ ಸೇನಾನಾಯಕರೊಡನೆ ಹೋಗಿ ಎರಡನೆ ಸಾರಿ ಸೋಲಿಸಿ, ತಿರುಗಿ ಬರುವಕಾಲದಲ್ಲಿ ಭೀಮಾನದಿಯ ದಂಡೆಯಮೇಲೆ ಅಸಂಖ್ಯಸಂಹಾರದಿಂದ ಸಂಪೂರ್ಣ ವಿರಕ್ತಿಯನ್ನು ಹೊಂದಿ ಮಗನಿಗೆ ರಾಜ್ಯವನ್ನೊಪ್ಪಿಸಿ ಸಲ್ಲೇಖನ (ಜೈನಧಾರ್ಮಿಕ ಉಪವಾಸ) ದ್ವಾರಾ ಕ್ರೀ. ಶ. 1173 ರಲ್ಲಿ ಸೌಗರ್ಮಸಾಮ್ರಾಜ್ಯವನ್ನು ಜೈನರಕೈಲಾಸ) ಹೊಂದಿದನು. 126 ಈ ವಿಷಯದಲ್ಲಿ ಮೆಕಂಜಿ, ವಿಲ್‌ಸನ್ ಮುಂತಾದವರ ಅಭಿಪ್ರಾಯವನ್ನು ಮುಂದಿನ ಅಲ್ಲಮ ಚನ್ನಬಸವಾದಿಗಳ ಚರಿತ್ರೆಯಲ್ಲಿ ಸಂಪೂರ್ಣವಾಗಿ ಖಂಡಿಸುವೆನು. 127 ಮತ್ತು ಆದರಲ್ಲೇ ಬಸವೇಶ್ವರನಿಗೂ ಅಲ್ಲಮಚೆನ್ನಬಸವಾದಿಗಳಿಗೂ ಇದ್ದ ಸಂಬಂಧವನ್ನೂ ವಿಪುಲವಾಗಿ ತಿಳಿಸುವೆನು.

(1) ಜಿಜ್ಜಳನು ಬಸವೇಶ್ವರನಿಂದ ಕೊಲ್ಲಲ್ಪಟ್ಟನೆಂಬುವುದಾಗಲಿ 128 (2) ಬಿಜ್ಜಳನು ಅಲ್ಲಯ್ಯ ಮಘವಯ್ಯರ ಕಣ್ಣುಗಳನ್ನು ಕೀಳಿಸಿದುದಕ್ಕೆ ಬಸವೇಶ್ವರನಿಂದ ಶಿವದ್ರೋಹಪ್ರತೀಕಾರಕ್ಕಾಗಿ ಜಗದೇವ ಮಲ್ಲಯ್ಯ, ಬೊಮ್ಮಯ್ಯರು ಪ್ರೇರೇಪಿಸಲ್ಪಟ್ಟವರಾಗಿ ಬಿಜ್ಜಳನು ಕೊಲ್ಲಿಸಲ್ಪಟ್ಟನೆಂಬುವದಾಗಲಿ129 (3)ಶ್ರಾವಕ (ಜೈನಸನ್ಯಾಸಿ) ವೇಷದಲ್ಲಿದ್ದ ಬಸವೇಶ್ವರನಿಂದ ಕಳುಹಿಸಲ್ಪಟ್ಟ ವಿಷಮಾವಿನಹಣ್ಣನ್ನು ಮೂಸಿ ಬಿಜ್ಜಳನು ಸತ್ತನೆಂಬುವದಾಗಲಿ 130 (4) ಋಷಭಪುರ (ಶಬ್ದಸ್ವಾರಸ್ಯದಿಂದ ವಿಪರೀತಾರ್ಥವನ್ನು ಕಲ್ಪಿಸುವುದಕ್ಕಾಸ್ಪದವಿರುವ) ವೆಂಬ ಊಳವಿಯ (ಇದುಸಹಾ ಹಿಂದಿನಂತೆಯೇ ಊಳಿಯುತ್ತೇನೆಂಬರ್ಥದಲ್ಲಿ) ಮಾಮನೆಯಲ್ಲಾಗಲಿ, ಆಊರಿನ ಭಾನಿಯಲ್ಲಾಗಲಿ ಬಸವೇಶ್ವರನುಬಿದ್ದು ಸತ್ತನೆಂಬುವುದಾಗಲಿ 131 (5) ಬಸವೇಶ್ವರನು ಸಂಗಮೇಶ್ವರನ ಗವಿಯಲ್ಲಾಗಲಿ, ಎರಡುನದಿಗಳ ಸಂಗಮದಲ್ಲಾಗ್ಗಲಿ ಬಿದ್ದುಸತ್ತನೆಂಬುವುದಾಗಲಿ 132 (6)ಸುಬುದ್ಧಿಯೆಂಬ ಮಂತ್ರಿಯಿಂದ ಬಸವೇಶ್ವರನು ಕೊಲ್ಲಲ್ಪಟ್ಟನೆಂಬುವುದಾಗಲಿ 133 (7) ಬಿಜ್ಜಳನಮಗನು ಪರವಿದ್ಯಾಭೇದಿನಿ ಮಂತ್ರದಿಂದ ಬಸವೇಶ್ವರನನ್ನು ಪರಾಜಿತನನ್ನಾಗಿ ಮಾಡಿ ಕೊಲ್ಲಿದನೆಂಬುವುದಾಗಲಿ 134 (8) ಬಿಜ್ಜಳನು ಬಸವೇಶ್ವರನನ್ನು ದ್ರವ್ಯಹಾಳುಮಾಡಿಮದಕ್ಕೆ ಸೋಲಿಸಿ ಕೊಲ್ಲಿಸಿದನೆಂಬುವುದಾಗಲಿ 135 (9) ಹರಳಯ್ಯ ಮಘವಯ್ಯರ ಶರೀರ ಸಂಬಂಧ ಭಯದಿಂದ ಬಸವೇಶ್ವರನು ಸತ್ತನೆಂಬುವದಾಗಲಿ 136

CC-0. Jangamwadi Math Collection. Digitized by eGangotri

(10) ನೀಲಮ್ಮನು ವಿಷಪಾನಮಾಡಿ ಸತ್ತಳೆಂಬುವದಾಗಲಿ 137 (11) ಚೆನ್ನಬಸವೇಶ್ವರನು ಯುವರಾಜನ ಶರಣುಹೊಕ್ಕು ಬಸವೇಶ್ವರನ ಮನೆಯನ್ನು ಜಪ್ತಮಾಡಿದನೆಂಬುವದಾಗಲಿ 138 (12) ಬಿಜ್ಜಳನ ಮಕ್ಕಳೆಲ್ಲಾ ಶಾಪದಿಂದ ನಾಶಹೊಂದಿದರೆಂಬುವದಾಗಲಿ 139 ಇಂತಿವೆಲ್ಲವು ನಾಸ್ತಿಕ ವಾದಾತ್ಮಕ ಮತಪ್ರವಿಷ್ಟರಾದ ಧರ್ಮ ದುರಭಿಮಾನ ಕೃದ್ಧ, ಮೂಢ, ವಿಶ್ವಾಸ, ಕವಿತಾಕಲ್ಪನೆಯಾಗಲಿ ಬೇರೊಂದಿಲ್ಲವು. ಏಕಂದರೆ ಧರಣಿಪಂಡಿತನು ಜಗದೇವ ಮಲ್ಲ, ಬೊಮ್ಮರುಗಳನ್ನು ಮೊದಲೇ ಬಹಿರಂಗವಾಗಿ ಶೂಲ ಹಾಕಿಸಿದನೆಂದೂ, 140 ಬಿಜ್ಜಳನು ಬಸವೇಶ್ವರನ ವಿಷಯದಲ್ಲಿ ತಾನೇ ಅನುಮಾನಪಟ್ಟದ್ದಿಲ್ಲವೆಂದೂ ಬರೆದಿರುವದರಿಂದಲೂ, 143 ಚಂದ್ರಸಾಗರನು ಬಿಜ್ಜಳನು ತಾನೇ ಮಗನಿಗೆ ಯುವಪಟ್ಟವನ್ನುಕಟ್ಟಿ ಬಸವೇಶ್ವರನಿಗೆ ಮೇಲ್ವಿಚಾರಣೆ ಮಾಡಿಕೊಂಡಿರೆಂದು ಹೇಳಿರುವದರಿಂದಲೂ, 142 ಕಲ್ಯಾಣದಲ್ಲಿ ಬಿಜ್ಜಳನು ಯಾವಸ್ಥಳದಲ್ಲಿ ಕೊಲ್ಲಲ್ಪಟ್ಟನೆಂಬಬಗ್ಗೆ ವಾದವಿವಾದವಿರುವದರಿಂದಲೂ (ಕೆಲವರು ರಾಯವಾಡಿ ಎಂಬ ಹಳ್ಳಿಯಲ್ಲಿಯಂದೂ ರಾಜನ, ಅರಮನೆಯಾಗಿರುವ ಉಸುಬಿನ ದಿಬ್ಬಿಯಲ್ಲಿ ಎಂದೂ, ಕೋಟೆಯಲ್ಲಿ ಆಲದಮರದ ಕೆಳಗೆಂದೂ) ಮತ್ತು ಈ ಭಿನ್ನಾಭಿಪ್ರಾಯಕ್ಕೆ ಆಧುನಿಕ ಚರಿತ್ರಶೋಧಕರ ತರ್ಕವು ಬಲವತ್ತರವಾಗಿರುವದರಿಂದಲೂ 143 ಮೇಗಳವೆಲ್ಲವು ಯಾವೂ ನಂಬಲರ್ಹವಾಗುವುದಿಲ್ಲ. ಇದು ಅಲ್ಲದೇ 36 ಕೊಂಡೆಯರಲ್ಲಿ ವೀರಧೀರಶೂರ ಮಣಿಗಳಾದ ಅರಿಂಜಯ, ಬುದ್ಧಿಸಾಗರಾದಿಗಳು 146 ಸಾರ್ಥಕನಾಮಧೇಯರಾಗಿ ಬಿಜ್ಜಳನನ್ನು ಎಡೆಬಿಡದೆ ಕಾಪಾಡುತಿರಲಿಕ್ಕೆ ಒಂದುವೇಳೆ ರಾಜ್ಯಕಾಂಕ್ಷೆಯಿಂದ ಕೊಲ್ಲಿಸಿದನೆಂದು ಅನುಮಾನಿಸುವುದಕ್ಕೆ ಆಸ್ಪದವಿದ್ದರೂ ಆರೀತಿ ಇಲ್ಲಿ ಜರುಗದೇ ರಾಜಭೋಗವನ್ನು ತ್ಯಾಗಮಾಡಿ ವಿಷಯಲಂಪಟದೂರನಾದ, ಪರಮಸಾಧು ಶಿರೋಮಣಿಯಾದ, ಅನ್ನದಾತಪ್ರಜ್ಞೇಯನಾದ ಬಸವೇಶ್ವರನ ಆಟವು ಎಷ್ಟರಮಟ್ಟಿಗೆ ಸಾಗಿತ್ತೆಂದು ಊಹಿಸುವ ಸ್ವಪ್ನಪ್ರಾಯವನರಿಯದ ಅಲ್ಪಮತಿಯ ಕುತುರ್ಕವಾಗಿದೆ.

CC-0. Jangamwadi Math Collection. Digitized by eGangotri

ಎರಡನೇ ಪ್ರಕರಣ.

ವಿದ್ಯೆಯು ಮತ್ತು ಗುಣಾವಳಿಯು.

ಶೀ ಬಸವೇಶ್ವರನ ವಿದ್ಯೆಯು ಬಹಳ ಅಪಾರವಾದದ್ದು. ಶೈವ ಬ್ರಾಹ್ಮಣನಮಗನಾಗಿ ಆ ಮೇಲೆ ವೀರಶೈವನಾಗಿ ಸಾರ್ಥಕನಾಮಳಾದ ತಾಯಿ ಯಾದ ವೇದವತಿ (ಮಾದಲಾಂಬೆ) ಯಿಂದ ಬಾಲ್ಯದಲ್ಲಿಯೇ ವೇದವನ್ನು ಕಲಿತವನು, ಸಾರ್ಥಕನಾಮಧೇಯನಾದ ಜಾತವೇದಗುರುವಿನಿಂದ (ಸಂಗಮೇಶ್ವರ) 24 ವರುಷಗಳು ವೇದಾಭ್ಯಾಸಮಾಡಿದವನು, ಅಥವಾ ಸೋಮಗುರವಿನಿಂದ (ಸಂಗಮೇಶ್ವರ) ಸೋಮಸೂಕ್ತಾ (ರುದ್ರಸೂಕ್ತ) ಭ್ಯಾಸಮಾಡಿದವನು, ಆ ಮೇಲೆ ಕವಿಪಂಡಿತಗಾಯಕ ಚಕ್ರವರ್ತಿ1 ಬಿರುದಾಂಕಿತನಾದವನು, ಮಂತ್ರಿಯ ಅಳಿಯನಾಗಿ ಮೊದಲು ಕರಣಿಕನಾಗಿದ್ದು ತರುವಾಯ ಅತ್ಯುಚ್ಚ ಮಂತ್ರಿ ಪದವಿಯನ್ನು ಪಡೆದಾಗ ತನ್ನ ಸೇವಕರಾದ ಹಡಪದವನು, ಆಂಬಿಗನು, ಜಟ್ಟಿಯು, ಮಾವುತನು, ಮುಂತಾದವರು ಕವಿಗಳಾಗಿರುವಲ್ಲಿ ಇಂಥಾತನನ್ನು ಸಂಸ್ಕೃತವನ್ನರಿಯದ ಕೇವಲಕನ್ನಡಿಗನೆಂದು ಹೇಳುವ್ರದು ಕೂಪಮಂಡೂಕನ ಅವಿಚಾರಮತಿಯ ಕಾಕಮುಖಿಗಳ (ಇವರು ಒಂದುಆರಣ್ಯಕ ಅನಾರ್ಯಆದಿ ಮನಿವಾಸಿಗಳು) ತೀರ್ಥಕಾಕರ ಕಾಕದೃಷ್ಟಿಯಂತಿರುತ್ತದೆ. ಈತನ ಸಚ ನೋದಾಹರಣೆಗಳಮೇಲೆ ಯಜುಸ್ಸು, ಅಥರ್ವವೇದ, ಲಿಂಗಪುರಾಣ, ವಾಯ ವೀಯ ಸಂಹಿತಾ, ವಾಶಿಷ್ಟ ಶಿವಧರ್ಮರಹಸ್ಯ ಮುಂತಾದುವ್ರಗಳಲ್ಲಿ ಈತನು ಪ್ರವೀಣನಿದ್ದನೆಂದು ಹೇಳತಕ್ಕದ್ದಾಗಿದೆ. 2 ಈತನು ಬಾಲ್ಯದಲ್ಲೇ ವೇದಾಭ್ಯಾಸವನ್ನು ಮಾಡಿದ್ದನೆಂದು ಮಂತ್ರಸಿದ್ಧಕವಿಮನ್ವಂತರಗೌತಮಾದಿ 3 ಬಿರುದಾಂಕಿತ ಸಮಕಾಲೀನಸಿಂಗಿರಾಜಾದಿಗಳೇ ಸ್ಥಿರೀಕರಿಸಿರುವರು. ಇದಕ್ಕೆ ಆತನ **ಪಂಡಿತಬಸವ** 4 ಬಿರುದೇ ಸಾಕ್ಷಿಯಾಗಿದೆ.

ಶಂಕರಭಾಷ್ಯಟೀಕಾಕರನಾದ ಶ್ರೀಧರನಿಂದಲೂ ವೀರಮಹೇಶ್ವರಾಚಾರ ಸಂಗ್ರಹಟೀಕಾಕರ್ತನಾದ ಶ್ರೀಧರ ನಿಂದಲೂ 5 ಬೇರೆಯಾದ ತರ್ಕಾರ್ಕಷಡ್ದರ್ಶನಾಚಾರ್ಯ ಚಕ್ರವರ್ತಿ ಮಿಮಾಂಸಕಾಚಾರ್ಯನಾದ ಶ್ರೀಧರ 6 ನೆಂಬ

CC-0. Jangamwadi Math Collection. Digitized by eGangotri

ಪಂಡಿತನನ್ನು ಸೋಲಿಸಿದ್ದು ಕುಹಕಿಗಳ ಎದೆಯು ಬಿರಿಯುವಂತಿರುವುದಲ್ಲದೇ ಸಂಸ್ಕೃತದಲ್ಲಿ ಅದ್ವಿತೀಯ ಅನರ್ಘ್ಯ ಧಾರಾಪಾಂಡಿತ್ಯವಿತ್ತೆಂದು ಧಾರಾಳವಾಗಿ ಹೇಳತಕ್ಕದ್ದಾಗಿದೆ. ಇದನ್ನು ಗಣಭಾಷ್ಯರತ್ನಮಾಲಕರ್ತನಾದ ಗುಬ್ಬಿಯ ಮಲ್ಲಣಾರ್ಯರಿಂದ ಬೇರೆಯಾದ ಮಲ್ಲಣಾರ್ಯನೂ ಸಿದ್ಧಲಿಂಗಾರ್ಯನೂ ಸಮರ್ಥಿಸಿರುವರಲ್ಲದೆ ಪಾಪಕವಿಯು ಸಹಾ ಸಮರ್ಥಿಸುತ್ತಾ ಕವಿಚರಿತ್ರೆಕಾರನೀಂದಕೊಂಡಾಡಲ್ಪಟ್ಟ ನಂದಿಕೋಲಕಾಂತಯ್ಯನಿಂದ ಶ್ರೀಧರನನ್ನು ಸೋಲಿಸುವಕಾಲದಲ್ಲಿ ಬಸವೇಶ್ವರನು ಸಹಾಯಪಡೆದಂತೆ ತೋರುತ್ತಿದೆ. 7 ಈ ಪ್ರಕಾರ ಸೋತ ಶ್ರೀಧರನನ್ನು ಮೊದಲು ದಂಡನಾಯಕನನ್ನಾಗಿಮಾಡಿ ಆಮೇಲೆ ಆಂದರೆ ಕ್ರೀ. ಶ. 1162 ಸುಮಾರಿನಲ್ಲಿ ಅಣ್ಣಿಗೇರಿಯಲ್ಲಿದ್ದ ಚಾಳುಕ್ಯತೈಲಪನ ಪಾರುಪತ್ಯವನ್ನು ಮಾಡುವುದಕ್ಕೆ ನಿಯಮಿಸಿದ್ದಂತೆ ತಿಳಿಯುತ್ತದೆ. 8 ಹೀಗೆ ಸೋಲಿಸಿದ ತರುವಾಯ ತತ್ವತ್ರಯಗ್ರಂಥಕರ್ತನಾದ ಲೋಕಾಚಾರ್ಯ 9 ನಿಂದ ಬೇರೆಯಾದ ಈ ಲೋಕಾಚಾರ್ಯನೆಂಬ ಶ್ರೀಬಸವೇಶ್ವರನು ತನ್ನ ಸಿದ್ಧಾಂತವನ್ನು ಪ್ರಚಾರಗೊಳಿಸುವುದಕ್ಕೆ ಪಂಡಿತರಿಗೆ ಸಂಸ್ಕೃತದಲ್ಲಿ ವಚನ ಭೂಷಣವೆಂಬ ಗ್ರಂಥವನ್ನು ಬರೆದಿರುವಂತೆ ಭಾಸವಾಡದ್ದು. ಇತ್ತಲಾಗಿ ತಿಳಿಯಬಂದದ್ದರಿಂದ ಸಮಾಜಕ್ಕೆ ಆನಂದವಾಗದಿರದು.10 ಗೌತಮಬುದ್ಧನು ಮಾಗಧಿಭಾಷೆಯಲ್ಲಿ ಮಹಾವಗ್ಗವನ್ನುಬರೆದಂತೆ ಬಹುಶಃ ಇದರ ಸಾರವನ್ನೊಳಕೊಂಡ ಜನಸಾಮಾನ್ಯಮಧ್ಯದಲ್ಲಿ ಐಕಮತ್ಯಕ್ಕೂ ಮತಾಭಿವೃದ್ಧಿಗೂ ವೀರಶೈವವೇದಾಂತವಿಚಾರಪೂರಿತವಾಗಿ ಗುಣಪ್ರಧಾನಸೂಚಕವಾದ ತನ್ನ ಗುರು ಕೂಡಲಸಂಗಮೇಶ್ವರನ ಅಂಕಿತದಲ್ಲಿ ಮುಗಿಯುವಹಾಗೆ 960 ವಚನಗಳುಳ್ಳ ಷಟ್ಸ್ಥಲವಚನ, 64 ವಚನಗಳುಳ್ಳಕಾಲಜ್ಞಾನವಚನ,34 ವಚನಗಳುಳ್ಳ ಶಿಖಾರತ್ನವಚನ, ಮಂತ್ರಗೋಪ್ಯ ಎಂಬೀಗ್ರಂಥಗಳನ್ನು ರಚಿಸಿರುವನು.11 ಈಗ್ರಂಥಗಳನ್ನುಸುಲಭಶೈಲಿಯಲ್ಲಿ ಬರೆದುಅರ್ಥಗಾಂಭೀರ್ಯಯುಕ್ತವಾಗಿ ಅದ್ವಿತೀಯ ವೀರಶೈವಸಿದ್ಧಾಂತರಹಸ್ಯವನ್ನು ಚನ್ನಾಗಿ ಲೋಕವಿಖ್ಯಾತವಾಗುವಹಾಗೆ ಪ್ರಕಟಪಡಿಸಿರುವನು. (ಸಿದ್ಧಾಂತವು ಮುಂದೆಹೊರಡುವ ನನ್ನ ವೀರಶೈವಮತಚರಿತ್ರೆಯಲ್ಲಿ ನೋಡು.)

ಧರಣಿಪಂಡಿತನು ಬಸವನು ಪಂಡಿತೆಯೆಂಬುವಳ ಸಂಗಡವಾದಮಾಡಿದನೆಂದೂ,12 900 ಶಿಷ್ಯರಿಂದ ಬಂದ ಜ್ಞಾನಚಂದ್ರಮುನಿಯಿಂದ ಪರಾಜಿತನಾದನೆಂದೂ, 13 ಚಂದ್ರಸಾಗರ ವರ್ಣಿಯು, ಬಸವನು ಯಮುಧರಮುನಿಯಿಂದ ಬೋಧಿಸಲ್ಪಟ್ಟನೆಂದೂ 14 ಬರೆದಿರುವುದು ನಂಬಲರ್ಹವಾಗುವುದಿಲ್ಲ. ಏಕಂ

CC-0. Jangamwadi Math Collection. Digitized by eGangotri

ದರೆ ಬೇರೆ ಜೈನಕವಿಗಳ ಅಭಿಪ್ರಾಯದಂತೆ ಅತಿಪ್ರಾಚೀನಕಾಲದ ವಾಸವಚಂದ್ರ ಮುನಿಯು ಪ್ರಾಕೃತಭಾಷೆಯಲ್ಲಿ ಈ ಜ್ಞಾನಚಂದ್ರನು ಚಂದ್ರವಂಶದ ರಾಜನಿವ್ವನೆಂಬ ವಿಷಯವನ್ನು ಚರಿತ್ರೆಯಾಗಿ ಬರೆದಿರುವುದರಿಂದಲೂ, 15 ಇನ್ನೊಬ್ಬ ಜ್ಞಾನಚಂದ್ರನು ಕ್ರೀ. ಶ. 670 ರಲ್ಲಿ ಜೈನನಿಗದೆ ಬೌದ್ಧನಿದ್ದು 16 ಪಾಟಲೀಪುತ್ರಕ್ಕೆ (Patna) ದಕ್ಷಿಣಕ್ಕೆ ವಿಹಾರ (ಮತ) ಗಳಿಗೆ ಜಗತ್ಪ್ರಸಿದ್ಧವಾಗಿರುವ ನಲಂದ ವಿದ್ಯಾಪೀಠದಲ್ಲಿ ಬೋಧಕನಾಗಿದ್ದಂತೆ ತಿಳಿಯುವುದರಿಂದಲೂ ಬಸವೇಶ್ವರನ ಸಮಕಾಲದವನಲ್ಲವೆಂದು ಮೇಲೆಯೇ ಸಿದ್ಧವಾಗುವುದು. ಅಣ್ಣಪುಪಾಧ್ಯಾಯನವಲ್ಲಭ, ಪಿರಿಯಸೋಮುಪಾಧ್ಯಾಯ, ಕೇಶವೋಪಾಧ್ಯಾಯ, ಸಿಂಧೋಪಾಧ್ಯಾಯ, ಋಗ್ವೇದಿ ಡಾಮೋದರ, ಸಾಮವೇದಿ ಅಪ್ಪಣ್ಣ, ಚತುರ್ವೇದಿ ಕೃಷ್ಣರಸ, ಜನ್ನಪಂಡಿತ, ರಸಕವಿರಾಮ, ಬುದ್ಧಿಸಾಗರಾದಿಗಳು 17 ಸಾರ್ಥಕನಾಮಧೇಯರಾಗಿರಲಿಕ್ಕೆ ಶೀ ಬಸವೇಶ್ವರನು ಮೇಲ್ಕಂಡವರ ಪ್ರಸಂಗಾವಧಾನ ಚಾಣಕ್ಯ ಭಾಷಾಪ್ರಪಂಚ ಸುಧಾಸಮುದ್ರವಲ್ಲಿ ಹಂಸನಂತೆ ವಿಹರಿಸುತ್ತಿದ್ದನೆಂಬುವುದು ಭಾಷಾತೋಧರಸಜ್ಞರಿಗಲ್ಲದೇ ಸ್ವಪರಮತಜಾತಿಭ್ರನಿಷ್ಟರಾದ ಅರ್ಧನಿಮಿಲಿತನೇತ್ರ ಗ್ರಾಮದೇವಲು ಲಾಯ ಸದೃಶಗರ್ವಿತ-ಕೃದ್ಧ ಮೂಢ ವಿಶ್ವಾಸಿಗಳಿಗೆ ತಿಳಿಯುವಂತಿಲ್ಲ. ಇಂಥವರಿಗೆ ತೊರೆವಾಯಿಸುವಂಬಿಗರಗಂಡ (ತೊರೆವಾಯರಂಬಿಗರಗಂಡ)(ಮಾತೆಂಬಪ್ರವಾಹವಲ್ಲಿನ ಅಂಬಿಗರಮೇಟಿ) ನೆಂಬ ಬಿರುದನ್ನು ನಮ್ಮ ಶೀ ಬಸವೇಶ್ವರನುಪಡೆದಿದ್ದನು. 18

ಈತನು ಸಿಗರಸ (ಸಿಂಗರಸ), ಬಲ್ಲರಸರೆಂಬುವರಲ್ಲಿ ಅಥರ್ವವೇದಾಂತರ್ಗತ 64 ಕಲೆಗಳಲ್ಲೊಂದಾದ ಗಾರುಡವಿದ್ಯೆಯನ್ನು ಕಲಿತು ಶಕ್ತಿಪಾತದಿಂದ ಅನೇಕಮಂತ್ರಸಹತ್ವಗಳನ್ನುಂಟುಮಾಡಿದಂತೆ ತರ್ಕಿಸತಕ್ಕದ್ದಾಗಿದೆ.19ಇದಕ್ಕೆ ಈತನ 88ಪವಾಡಗಳೇ ಪ್ರಸಿದ್ಧವಾಗಿರುವುವು ಮತ್ತು ಮಂತ್ರಸಿದ್ಧನಾದ ಸಿಂಗಿರಾಜನನ್ನು ಸೋಲಿಸಿ ಸಿದ್ಧಬಸವಚಕ್ರವರ್ತಿ ಬಿರುದಾಂಕಿತನಾದದ್ದೇ ಸಾಕ್ಷಿಯಾಗಿದೆ. 20 ತನ್ನವಿರೋಧಿಗಳಾದ 36 ಪೃಷ್ಟಮಾಂಸಭಕ್ಷಕರಲ್ಲಿ ಈತನು ತನ್ನ ಸಹಜ ಚತುರೋಪಾಯ ಪಂಚತಂತ್ರ ರಾಜಕರಣ ನಿಪುಣತೆಯನ್ನು ತೋರಿಸಿದ್ದು ತನ್ನಸಹಜ ಕರ್ತವ್ಯದ ಅಸಮಾನತೆಯನ್ನೂ ವ್ಯಕ್ತಪಡಿಸುತ್ತಿದೆ. ಇದಕ್ಕೆ ಈತನ ಕಾಲಜ್ಞಾನವಚನವು ಸಾಕ್ಷಿಯಾಗಿ ಬಲಪಡಿಸುತ್ತಿದೆ. ಅಪೂರ್ವ ಲಿಪಿಯನ್ನೋದಿ ನಿಧಿಯನ್ನು ತೋರಿಸಿದ್ದು ಈತನ ಬಹುಭಾಷಾಶಾಸ್ತ್ರಜ್ಞಾನವನ್ನೂ (Linguist) ಭೂಗರ್ಭಶೋಧನ ಶಾಸ್ತ್ರಜ್ಞಾನವನ್ನೂ,(geology)

CC-0. Jangamwadi Math Collection. Digitized by eGangotri

ಚನ್ನಾಗಿ ಪ್ರಸಾರಗೊಳಿಸುತ್ತಿದೆ. ಮಹಾದಾನಿ ಎಂಬುವುದಕ್ಕೆ ಒಬ್ಬ ಹೆಂಡತಿಯು ಉಟ್ಟಸೀರೆಯನ್ನೂ ಮತ್ತೊಬ್ಬಳ ನೀಲರತ್ನದೋಲೆಯನ್ನೂ ಕೊಟ್ಟಿರುವುದೇ ಸಾಕ್ಷಿಯಾಗಿರುವುದು. 21 ಈತನ ಪ್ರಸಿದ್ಧ ಅನ್ನದಾನವು ಇಲ್ಲಿ ದ್ವಿರುಕ್ತಿಯನ್ನುಂಟುಮಾಡುವುದು. ಈತನು ಪರಮಸಹಸಶಕ್ತಿಯುಕ್ತ ಶಾಂತಪೂರ್ತಿಯೆಂಬುವುದು ಶರಣದಸರಯ್ಯನ ಶಾಂತಪ್ಪಕ್ಕ್ಷಾಶ್ರಯದ ಕೆಳಗಿದ್ದು ಅನೇಕ ಕಳ್ಳರನ್ನು ಸಾಧುಗಳನ್ನಾಗಿ ಮಾಡಿದ್ದೇ ಹೆಗ್ಗುರುತಾಗಿರುವುದು. ಪರಮೋದಾರಿ ಎಂಬುವುದು ಸೋತ ಶೀಧರಪಂಡಿತನನ್ನು ಅಣ್ಣಿಗೇರಿಯ ಸಾಮಂತ ಅಥವಾ ರಾಯಭಾರಿಯನ್ನಾಗಿ ಮಾಡಿಸಿದ್ದೇ ದ್ಯೋತಕವಾಗಿದೆ. ಘನ ವೈದ್ಯನೆಂಬುವುದಕ್ಕೆ ಸೊಡ್ಡಳಬಾಚರಾಜನ ಕಣ್ಣುಗಳನ್ನು ಚಿಕಿತ್ಸೆಮಾಡಿದ್ದು (occulist) ಮೋಟಗೆ ಅವಯವಗಳನ್ನು ಸರಿಪಡಿಸಿ ಬರಮಾಡಿದ್ದು, ಉದಾಹರಣಗಳಾಗಿರವುವು. 22 ಘನವಿಷಹರವೈದ್ಯನಿದ್ದುದರಿಂದಲೇ ವಿಷವನ್ನುಂಡು ದಕ್ಕಿಸಿಕೊಂಡನು. ಆಧುನಿಕಕಾಲದಲ್ಲಿ ಶಾಂಪೋ ದೊರೆಯಂಥವನು ಸಿಂಹವನ್ನು ಸಾಧುವನ್ನಾಗಿ ಮಾಡಿದನೆಂದು ನಂಬುವಲ್ಲಿ ಆಗಿನಕಾಲದಲ್ಲಿ ಬೇಟೆಯವಿನೋದದಲ್ಲಿ ಜಂಗಮನಿಗೆ ಹುಲಿಯ ಹಾಲನ್ನು ಕರೆದುಕೊಟ್ಟದ್ದು, ಕೋಣನ ಗರ್ವಾಪಹಾರಮಾಡಿದ್ದು, ಬರಡಹಸುವಿನಿಂದ ಹಾಲುಕರೆಸಿದ್ದು ಮುಂತಾದುವು ಆತನ ದುಷ್ಟಮೃಗಗಳ ಸಾಧುಪಾಲನಾವಿಧಾನವನ್ನು ಜನ್ಮಾಗಿ ವ್ಯಕ್ತಗೊಳಿಸುತ್ತಿರುವುದು ಆಶ್ಚರ್ಯವಲ್ಲ. ದಂಡಧರನಾದ ದಂಡನಾಯಕನಾಗಿ ಬರಸಿಡಿಲನ್ನು ಪಿಡಿದು ೧೨ ನೇ ಶತಮಾನದಲ್ಲಿಯೇ ಲೋಹಗಳು ವಿದ್ಯುತ್ತಿನ ಶೀಘ್ರವಾಹಕಗಳೆಂಬುವ ಪದಾರ್ಥವಿಜ್ಞಾನಶಾಸ್ತ್ರಭಾಗವನ್ನು ಪ್ರಕಟಗೊಳಿಸಿದವನು ಈತನೇ ಲೋಕದಲ್ಲಿ ಮೊದಲನೆಯವನಲ್ಲವೇ! ಈತನು ಜ್ಯೋತಿಷ್ಯಶಾಸ್ತ್ರವನ್ನು ಬಲ್ಲವನಾಗಿದ್ದನೆಂಬುವುದು ಈತನ ವಚನಗಳಿಂದಲೇ ಸಿದ್ಧವಾಗುತ್ತಿದೆ. 23 ಗೂಳಿಯನ್ನು ಬದುಕಿಸಿದ್ದು ಒಳ್ಳೆ ಪಶುಚಿಕಿತ್ಸಕ(Veterinary Doctor) ನಿದ್ದನೆಂದು ಸೂಚಿಸುತ್ತಿದೆ. ನೀರಿನಲ್ಲಿ ಮುಳುಗಿದ ಬಾಲ್ಯಸ್ನೇಹಿತ ಕೃಷ್ಣನನ್ನು (ಚನ್ನಪ್ಪಕವಿಯಪ್ರಕಾರ ಕೊಳದಲ್ಲಿ ಮುಳಗಿದ ಬೆನಕನನ್ನು) ಮೇಲಕ್ಕೆ ತೆಗೆದದ್ದು ಈತನು ಆಧುನಿಕ ಪಾಶ್ಚಾತ್ಯರಂತೆ ಒಳ್ಳೆ ಈಜುಗಾರನಿದ್ದನೆಂದು ತಿಳಿಯುತ್ತದೆ. 24 ಈತನ ಮೂರ್ತಿಪ್ರಭಾವಿಶೇಷದಿಂದಲೇ ನಾಮಸ್ಮರಣ ಮಾತ್ರದಿಂದ ಗೌಳಿಯಕ್ಷೀರಕುಂಭವು ಸಹಾ ಕೆಳಗೆ ಬೀಳುವುದುತಪ್ಪಿ ಮಾನಸಿಕ ಕೇಂದ್ರಸ್ಥಾನವಾದುದಕ್ಕೆ ಹಾಗೆಯೇ ನಿಂತಿತು. ಈತನು ಕಣಗಿಲೆಯಗಿಡದಲ್ಲಿ ಸಂಪಿಗೆಯ ಹೂವನ್ನುಂಟುಮಾಡಿದ್ದು ವೃಕ್ಷದೋಹದಶಾಸ್ತ್ರ (Botany)ದಲ್ಲಿ ಪಾರಂಗತನಿದ್ದನೆಂದು ಸ್ಪಷ್ಟೀಕರಿಸುತ್ತದೆ ಕೃಷಿಶಾಸ್ತ್ರಪಂಡಿತ

CC-0. Jangamwadi Math Collection. Digitized by eGangotri

ನಿದ್ದನೆಂದು ಸಹಾತಿಳಿಯುತ್ತದೆ. 25 ಈತನ ಕಾಲದಲ್ಲಿಯೇ ವೀರಸಂಗಯ್ಯನೆಂ
ಬುವನು ಜೋತಿಷಸಿದ್ಧಾಂತದಲ್ಲಿ ಬಹಳ ಹೆಸರಾದವನಿದ್ದನೆಂದು ತಿಳಿಯುತ್ತದೆ.

ಈತನುಗಣಿತಜ್ಞನೆಂಬುವುದಕ್ಕೆ ಮೂರುನಾಲ್ಕುಸಾರಿ ರಾಜನ ಸಂಶಯ
ವನ್ನು ಪರಿಹಾರಮಾಡಿ ಬಹುಮಾನಿತನಾದನು. ಆದರೆ ಇಂಥ ಶರಣಗುರು
ಭಕ್ತನಬೋಧಾಮೃತಪಾನಮಾಡಿ, ಸಾರ್ಥಕನಾಮಧೇಯನಾದ ಸತ್ಯಮಣಿಮಂ
ತ್ರಿಯ ಸಂಗಡಿಗನಾದ ಬಸವೇಶ್ವರನು ವಿತ್ತಶಾಲೆಯ (Treasury) ಲೆಕ್ಖುಗಳ
ಮೇಲೆ ಸುವಿಚಾರಿ ಬಲದೇವರಸನು ಸಾರ್ಥಕನಾಮನಾಗಿ ಮೇಲ್ವಿಚಾರಕನಾಗಿ
ಶೋಧಿಸುವಕಾಲದಲ್ಲಿ ಎಚ್ಚರಿಕೆಕಾಯಕದ ಮುಕ್ತಿನಾಥಯ್ಯನು ಸಾರ್ಥಕ
ನಾಮಧೇಯನಾಗಿ ಮುಕ್ತಿಪಥವನ್ನು ಎಚ್ಚರಿಸುವಾಗ, ಸ್ವಾಮಿಯು ವಿಶ್ವಾಸ
ಪಾತ್ರ ದ್ರವ್ಯರಕ್ಷಣದಾಸನಾದ ವೀರವರ ವೀರಣ್ಣನು, ಗುಪ್ತ ಮಂಚಿಹರಿ
ಭಟ್ಟರಸನು ಮುಂತಾದವರು ಅಹರ್ನಿಶೆಯಲ್ಲಿ ಜಾಗರೂಕರಾಗಿರಲು (ಕೊನೆಗೆ
ಭಂಡಾರಪರೀಕ್ಷೆಯಲ್ಲಿ ಹಣವು ಯಥಾಪ್ರಕಾರ ಎಲ್ಲವೂ ಸರಿಯಾಗಿತ್ತು) ಕೋ
ಶಾಗಾರದಲ್ಲಿ ಬಸವೇಶ್ವರನು ಕಳವನ್ನುಮಾಡಿ ಮಾಡಿಸಿದನೆಂದು ಆತನ ಬಂ
ಡಾರಿ ಪದವಿಗೆ ಕಲಂಕಹಚ್ಚುವುದಕ್ಕಾಗಿ ಹೇಳುವವರನ್ನು ದ್ವಿಪಾದಪಶು
ಗಳಿಂತಲೇ ಭಾವಿಸತಕ್ಕದ್ದಾಗಿದೆ. ಇದನ್ನು ಆತನ ವಚನವು ಸಹಾ
ಬಲಪಡಿಸುತ್ತದೆ. 26

ಈತನಕಾಲದಲ್ಲಿ ಅಂಗಸಾಧನವಿದ್ಯೆಯು ಪ್ರಬಲಿಸಿದ್ದಂತೆ ತಿಳಿಯುತ್ತದೆ.
ಇದಕ್ಕೆ ನಿದರ್ಶನವಾಗಿ ವೀರಶೈವರಲ್ಲಿ ಚನ್ನಮಲ್ಲನಿಂದ ವ್ಯಾಖ್ಯಾನವು ಬರೆಯ
ಲ್ಪಟ್ಟು ಗುರುಲಿಂಗಾಂಕಿತವಾಗಿ ಮುಗಿಯುವ 111 ಪದ್ಯಗಳುಳ್ಳ ಆತ್ಮಲಿಂ
ಗಪ್ರಣವಸಂಯೋಗಸ್ಥಲದ ತ್ರಿವಿಧಿಯೆಂಬ ಗ್ರಂಥಕರ್ತನಾದ ಶೀಲವಂತ
ಯ್ಯನು ಚಲದಂಕಬಾಚಣ್ಣನು, ಜೈನರಲ್ಲಿ ಮಲ್ಲರಪಂಥ, ಮುಕ್ಕಣ್ಣ, ಬಾಲಹಸು
ಮರೆಂಬುವರು ಮಲ್ಲಕಾಯಕದಲ್ಲಿ ಪ್ರಸಿದ್ಧರಾಗಿದ್ದರು.27 ಬಸವೇಶ್ವರನು ಸಹಾ
ಮಲ್ಲಕಲೆಯಲ್ಲಿ ಪ್ರೌಢನಿದ್ದನೆಂದು ತರ್ಕಿಸತಕ್ಕದ್ದಾಗಿದೆ. 28

ಕಲ್ಯಾಣಪಟ್ಟಣದಲ್ಲಿ 8000 ವಿದ್ವಾಂಸರು 7000 ವೇಶ್ಯೆಯರು ಇದ್ದ
ರೆಂದು ತಿಳಿಯುವುದರಿಂದ ಆಗಿನಕಾಲದಲ್ಲಿ ನಾಟಕಾಭಿರುಚಿಯು ಅತ್ಯುಚ್ಚವಿ
ಯಲ್ಲಿತ್ತೆಂದು ಧಾರಾಳವಾಗಿ ಹೇಳಬಹುದು.29 ಚಂದ್ರಮಂಡಲಪ್ರಸರವೆಂಬ
ನಾಟಕಶಾಲೆಯಲ್ಲಿ 36 ನಾಟಕಗಳು ರಾಣಿವಾಸದ 700 ಜನರೊಳಗೆ 100
ಮುಖ್ಯಜನರಲ್ಲಿ ಧನಕೋಟಿಯಾದಮಾಯಾದೇವಿಎಂಬ ನಿಂಬಕ್ಕ, ಕಮುಲಾಯಿ,
ಪ್ರೌಢಮತಿ, ವಿಚಾರನಾರಿ, ಪ್ರಮಥವ್ವೆ, ಸಕಲವ್ವೆ, ಗುಡ್ಡವ್ವೆ, ಶಿವದೇವಿ, ಸಂ
ಗುದಾಸು,(ಸಂಗದಾಸಿ) ಮಹೇಶ್ವರಿ ಮುಂತಾದ ಸ್ತ್ರೀಪಾತ್ರೆಗಳನ್ನೊಳಕೊಂಡು

CC-0. Jangamwadi Math Collection. Digitized by eGangotri

ಪ್ರಯೋಗಿಸಲ್ಪಡುತ್ತಿದ್ದವು. 30 ಇದನ್ನು ಆಂಧ್ರಪಿಡುಪರ್ತಿ ಸೋಮನಾಥನು ಸಹಾ ಅನುಮೋದಿಸಿರುವನು. ಆಸ್ಥಾನದ ಗಾಯಕನು ಕಿನ್ನರಿಬ್ರಹ್ಮಯ್ಯನಿದ್ದಂತೆ ತೋರುತ್ತದೆ.31 ಸಕಲೇಶ್ವರ ಮಾದಿರಾಜನು, ಬಸವೇಶ್ವರನು ಸಾಮವೇದಗಾಯಕನಿದ್ದುದರಿಂದಲೇ ಬ್ರಹ್ಮ, ಲಾವಣ್ಯ, ಕೈಲಾಸ, ಆಕಾಶ, ಪಿನಾಕ, ಗೌರಿ, ರಾವಣಹಸ್ತ, ಸ್ವರಮಂಜುಕೂರ್ಮ, ಕಿನ್ನರ, ಜನಕಾದಿವೈಣಿಕಪ್ರವೀಣನಿದ್ದನೆಂದೂ, ಅಕ್ಕನಾಗಸಹದೇವಿಯುಪ್ರೌಢಮೃದಂಗಿಯಾಗಿದ್ದಳೆಂದೂ ಬಾಲರುದ್ರಮೆಯು ಘನಮುರಲೀವಾದನಪ್ರಿಯಳೆಂದೂ ಆದೇ ಆಂಧ್ರಪುರಾಣಕಾರನ ಅಭಿಪ್ರಾಯವಿರುತ್ತದೆ. 32

ಮಡಿವಳಮಾಚಯ್ಯನು ಸಹಾ ಗಾಂಧರ್ವವಿದ್ಯಾವಿಶಾರದನಿದ್ದನೆಂದು ಗುರುರಾಜನು ತನ್ನಸಂಸ್ಕೃತ ಪಂಡಿತಾರಾಧ್ಯಚರಿತ್ರೆಯಲ್ಲಿ ವರ್ಣಿಸಿರುವನು.33 ಈ ಮಾಚಯ್ಯನು ಭಾಷಾಪಾಲಕನಿದ್ದು ಕಾಲಜ್ಞಾನ, ವಚನಗ್ರಂಥಗಳನ್ನು ಬರೆದನೆಂದು ತಿಳಿಯುತ್ತದೆ. ಮತ್ತೂ 464 ಸಾವಿರವಚನಗಳನ್ನು ಬರೆದನೆಂದು ಪಿಡುಪರ್ತಿ ಸೋಮನಾಥನು ಉತ್ಪ್ರೇಕ್ಷಿಸಿದ್ದು ಸಂಶಯವಾದಾಗ್ಯೂ ಗುರುರಾಜನು ಮಾತ್ರ ಸಾಹಿತ್ಯವಿತ್ಸೌಖ್ಯಸಭ್ಯಮುಖ್ಯನೆಂದೂ, ಪಾಲ್ಕುರಿಕೆ ಸೋಮನಾಥನು ಭಾಷಾಪ್ರಪಾಲನಶಾಲಿಯೆಂದೂ ಮುಂತಾಗಿ ಪ್ರಯೋಗಿಸಿರುವುದರಿಂದ ಕರ್ನಾಟಕಪರಿಷತ್ಪ್ರಥಾಚಾರ್ಯನೆಂದೂ(Chancellor of the university) ಹೇಳುವುದಕ್ಕೆ ತಿಲಾಂಶವೂ ಸಂಶಯವಿಲ್ಲ.34 ದೇವಗಿರಿ ಸಿಂಘಣರಾಜನ ಸಾಮಂತನಾದ ಬಾಚರಾಜನಿಂದ ಬೇರೆಯಾದ35 ಪಿಡುಪರ್ತಿ ಸೋಮನಾಥನಿಂದ ಘನತಾರ್ಕಿಕಪ್ರೌಢನೆಂದೂ, ಪಾಣಿನಿಶಬ್ದಶಾಸ್ತ್ರಸಾರಸೂರ್ತಿಯೆಂದೂ ಕೊಂಡಾಡಲ್ಪಟ್ಟ ಮಹಾದಾನಿ ಸೊಡ್ಡಳಬಾಚಿರಾಜನು, (ಭಾಸ್ಕರ)36 ತನ್ನಹಸರಿನ ಒಂದುವಚನ, ಕಾಲಜ್ಞಾನಗ್ರಂಥಗಳನ್ನು ಬರೆದು ವಿಶೇಷವಾಗಿ ಪೂಜಿತನಾಗಿದ್ದನೆಂದು ತಿಳಿಯುತ್ತದೆ.)

ಘಟ್ಟಿವಾಳಯ್ಯ, ಆಯ್ದಕ್ಕಿಯಮಾರ, ಬಾಚಿಕಾಯಕದ ಬಸವಪ್ಪ ಇವರು ತಮ್ಮಹೆಸರಿನ ಒಂದೊಂದು ವಚನಗ್ರಂಥವನ್ನೂ, ನಿಂಬಾಣಗಣೇಶ್ವರನು ಸಗುಣಲೀಲೆ, ನಿರ್ಗುಣಾನಂದಲೀಲೆ ಎಂಬಗ್ರಂಥಗಳನ್ನೂ, ಕೋಲಶಾಂತಯ್ಯನು ಒಂದು ವಚನಗ್ರಂಥವನ್ನೂ, ಕಳಿಂಗದೇಶದ ಮರುಳದೇವನೆಂಬ ಮರುಳಶಂಕರದೇವನು ಒಂದುವಚನ, 130ಪದ್ಯಗಳುಳ್ಳ ಕಂದಗ್ರಂಥಗಳನ್ನೂಬರೆದು ಲೋಕೋದ್ಧಾರವನ್ನುಮಾಡಿರುವರು.37 (ಹಾವಿನಹಾಳಕಲ್ಲಯ್ಯನದು, ವೀರಶೈವಚರಿತ್ರೆಯಲ್ಲಿ ನೋಡು)

ಆಕಾಲದಲ್ಲಿಯೇ ಸ್ತ್ರೀವಿದ್ಯೆಯು ಪ್ರಬಲಿಸಿ ಉಡುತಡಿಯ ಮಹಾದೇವಿಯಕ್ಕಗಳು

CC-0. Jangamwadi Math Collection. Digitized by eGangotri

ತಿಯರ ಮಗಳಾದ, ಅದೇಗ್ರಾಮದ ಕೌಶಿಕರಾಜನನ್ನು ಧೀಕರಿಸಿದ, ಜೀಮೂತ ಪರ್ವತ ಕದಳಿಕಾರಣ್ಯದಲ್ಲಿ ಬಯಲಾದ ಚನ್ನಮಲ್ಲಿಕಾರ್ಜುನ ದೇವಾಂಕಿತವಾಗಿ ಮುಗಿಯುವ ಅಕ್ಕಗಳಸೃಷ್ಟಿಯವಚನ ಅಕ್ಕಗಳಪೀಠಿಕೆ ಎಂಬಗ್ರಂಥಗಳನ್ನು ಬರೆದ ಅಕ್ಕಮಹಾದೇವಿಯೂ,38 ಬಿಜ್ಜಲದೇವಿಯೂ, ಕಗ್ಗಲ್ಲಿನಿಂದ ಹಾಲನ್ನು ಕರೆದ ಗೊಲ್ಲತಿಯಾದ ಕಾಳವಬೋಯಿ ಎಂಬ ಗುಡುಬೆಕಾಳವ್ವೆಯೂ 39 ಕೊಂಡೆಮಂಚಣ್ಣಗಳಪತ್ನಿಲಕ್ಷ್ಮಮ್ಮ, ರಾಯಸದಮಂಚಣ್ಣಗಳಸತ್ನಿರಾಯಮ್ಮ ದಸರಯ್ಯಗಳ ಪತ್ನಿ ವೀರಮ್ಮ, ಕನ್ನಡಿಕಾಯಕದ ದೇಮಮ್ಮ, ಮೋಳಿಗೆಮಾರಿಯ ಪತ್ನಿಮಹಾದೇವಿ, ಕದುರುಕಾಯಕದಕೆಮ್ಮವ್ವೆ, ಬಾಚಿಕಾಯಕಬಸವಪತ್ನಿ ಕಾಳವ್ವೆ 40 ಮುಂತಾದವರು ಒಂದೊಂದು ಗ್ರಂಥಗಳನ್ನು ಸುಲಭಶೈಲಿಯಲ್ಲಿ ಬರೆದು ಸ್ತ್ರೀಸಮಾಜವನ್ನುದ್ಧರಿಸಿ ಈಗಿನಕಾಲಕ್ಕೆ ಆದರ್ಶಪ್ರಾಯರಾಗಿ ಆಧುನಿಕಸ್ತ್ರೀಪ್ರಪಂಚವನ್ನು ನಾಚಿಸುವಂತಿರುವರು. ಭಾಗವತಪುರಾಣಸ್ಥ ಶ್ರೀ ಕೃಷ್ಣಗೋಪಿಕಾನಿದರ್ಶನದಂತೆ ತಾತ್ವಿಕಪೃಷ್ಟಿಯಿಂದ ಕ್ರೀ. ಶ. 10 ನೇ ಶತಮಾನದಿಂದ ಪ್ರಬಲಿಸಿಬಂದು ಕಿಟ್ಟುಹೋಗಿದ್ದ ಅನೇಕದೇವದಾಸಿಯರಾದ ರುದ್ರಗಣಿಕೆಯರು 41 ಸಹಾ ಸುವಿಚಾರಿಗಳಾಗಿ ಲೋಕೈಕ ಮಾನ್ಯತೆಯನ್ನು ಹೊಂದಿದರು, ಇಲ್ಲದಿದ್ದರೆ ಇವರು ಈಗಲೂ ಕಿಟ್ಟು ಕಳೆದುಳಿದು ಅಭಿಮಾನದಿಂದ ಬಸವಿಗಳೆಂಬ ಹೆಸರನ್ನು ಏಕೆ ಇಟ್ಟುಕೊಳ್ಳುತ್ತಿದ್ದರು? ಈ ಬಸವಿಗಳು ಯುದ್ಧಕಾಲದಲ್ಲಿ ಗಾಯಪಟ್ಟವರನ್ನು ಉಪಚರಿಸುವುದಕ್ಕೆ ದಾಯಿಗಳಾಗಿಯೂ, ಸೈನ್ಯೋಪಕರಣಗಳನ್ನು ಸಾಗಿಸುವುದಕ್ಕೆ ಸಹಾಯವಾಹಕರಾಗಿಯೂ ಇರುತಿದ್ದರು. ಮತ್ತೂ ನಿಕಟಯುದ್ಧದಲ್ಲಿ ಕಾಲಾಳುಗಳಾಗಿ ನೆರವಾಗಿ ಜಯಕಾರಿಗಳಾಗುತ್ತಿದ್ದರು. 42 ರುದ್ರಗಣಿಕೆಯಾದ ಘೌಷಮತಿಯು ಸಾರ್ಥಕನಾಮಧೇಯಳಾಗಿ ತನ್ನವೇದಾಂತಬೋಧೆಯಿಂದ ಲೋಕವನ್ನು ಮುಗ್ಧಮಾಡಿರುವುದನ್ನು ಉಭಯಕವಿತಾವಿಶಾರದನಾದ ಷಡಕ್ಷರದೇವನು ವರ್ಣಿಸಿರುವುದೇ ಬಲಪಡಿಸುತ್ತಿದೆ. ಮತ್ತೂ ಸಂಕವ್ವೆಯು(ಕೊಟ್ಟಣದ ಸೋಮವ್ವೆಯು)ವಿರಕ್ತಳಾಗಿ ಒಂದು ವಚನಗ್ರಂಥವನ್ನು ಬರೆದಿರುವ 43 ಮುಂತಾದ ಅನೇಕ ಉದಾಹರಣೆಗಳಿವೆ. ಈ ವಿಧವಾಗಿ ಆಗಿನಕಾಲದಲ್ಲಿ ಈಗಿನವರಿಗೆ ಮೆಲ್ಪಂಕ್ತಿಯಾಗಿರುವಹಾಗೆ ಅನಂತಲೌಕಿಕಪಾರಮಾರ್ಥಿಕಕಾಪಿಗಳನ್ನು ಉದ್ಧರಿಸಿ, ತನ್ನ ಅಸಾಧಾರಣಪ್ರಜ್ಞಾಪ್ರಭೆಯನ್ನು ಧಾರಾಳವಾಗಿ ತೋರಿಸಿದಾತನು ಬಸವನಲ್ಲವೆ? ಇಂಥಾತನನ್ನು ಬೆಂಗಳೂರು ಮಹಂತಯ್ಯನು ಅಷ್ಟಾವಧಾನಿಯೆಂದು ಉತ್ಪ್ರೇಕ್ಷಿಸಿದರೂ ಸಹಸ್ರಾವಧಾನಿ ಎಂದು ಕರೆಯುವುದು ಸಹಾ ಅಲ್ಪವೇ. 44

CC-0. Jangamwadi Math Collection. Digitized by eGangotri



ಮೂರನೆಯ ಪ್ರಕರಣ.

ಬಸವೇಶ್ವರನ ಕಾಲದ ಸಂಘದಸ್ಥಿತಿ.

ಪೂರ್ವದಲ್ಲಿದ್ದಂತೆಯೇ ಈತನಕಾಲದಲ್ಲಿ ಸಹಾ (ತ್ರಿಮತಸ್ಥರಲ್ಲಿದ್ದಂತೆ) ಭಕ್ತಮಾಹೇಶ್ವರರಲ್ಲಿ ವಿವಾಹಗಳಿದ್ದವೆಂದೂ, ಶಾಸ್ತ್ರವಿಧಿಯಂತೆ ಮತಾಂತರದವರನ್ನು ವೀರಶೈವರನ್ನಾಗಿ ಮಾಡುವರೂಢಿಯು ಇತ್ತೆಂದೂ ತಿಳಿಯುತ್ತದೆ. ಇದಕ್ಕೆ ಶ್ರೀ ಬಸವೇಶ್ವರನೇ, ತನಗಿಂತಪೂರ್ವದ ಶಂಕರದಂಡಿಮನು ಹೆಂಡತಿಗೆ ಲಿಂಗಕಟ್ಟಿದಂತೆ, ತನ್ನ ಇಬ್ಬರಹೆಂಡರಿಗೂ ದೀಕ್ಷೆಯನ್ನು ಮಾಡಿ, ವಿವಾಹವನ್ನುಮಾಡಿಕೊಂಡು, ಸಾಕ್ಷಿಯಾಗಿ ಪ್ರಸಿದ್ಧವಾಗಿರುವನು. ಶ್ರೀವೈಷ್ಣವದಾಮೋದರ ಮಾಯಾದೇವಿಯರಮಗನೆನೂ, ಶೈವಬ್ರಾಹ್ಮಣ ಕುಮಾರಿಯಪತಿಯೂ, ಗಣಿತವೇತ್ತನೂ ಆದ ಧೂಪದಮಂಚರಸನು ನೈಷ್ಟಿಕ ವೀರಶೈವನಿದ್ದನು. 1 ಶೈವವೀರನಾದ ಕೊಂಡಗುಳಿ ಕೇಶಿಯು ಮಂತ್ರಮಹತ್ವದ ಷಡಕ್ಷರಕಂದವೆಂಬ ಗ್ರಂಥವನ್ನು ಬರೆದುದಕ್ಕೆ ಶೀಲವಂತಾಗ್ರಗಣ್ಯನಾಗಿ ಮೆರೆದನು. 2 ವೀರವೈಷ್ಣವನಾದ ಸಿಂಗಿರಾಜನನ್ನು ದೇಮಿದೇವಯ್ಯಗಳು ದೀಕ್ಷೆ ಮಾಡಿದುದಕ್ಕೆ ಪಾಲ್ಕುರಿಕೆ ಸೋಮನ ಗಣಸಹಸ್ರದಲ್ಲಿನ ದಶಗಣರಲ್ಲಿಸೇರಿ ಪ್ರಸಿದ್ಧನಾಗಿರುವನು. 3 ಆಗಿನಕಾಲದಲ್ಲಿ ಇಷ್ಟಲಿಂಗಪೂಜೆಯೂ ಸ್ವಜನರಲ್ಲಿ ಪರಸ್ಪರ ಅನ್ನೋದಕವ್ಯವಹಾರವೂ ಬಹಿರಂಗವಾಗಿ ಆಗಾಗ ಜರುಗುತ್ತಿತ್ತೆಂದು ಧಾರಾಳವಾಗಿ ಹೇಳತಕ್ಕದ್ದಾಗಿದೆ. ಉದಾಹರಣೆಗೆ ನಿಂಬಕ್ಕನ ಕಥೆಯನ್ನು ಓದುವಿ. ಗುರುಸ್ಥಲದವರಿಗೆ ದೀಕ್ಷೆಶಿಕ್ಷೆಮೋಕ್ಷಾಧಿಕಾರಗಳನ್ನು ಕೊಡುವ ಅಧಿಕಾರವನ್ನು 4 (ಜಗದ್ಗುರು ಬಸವಲಿಂಗ, ಉಪದೇಶಕಲ್ಪದ್ರುಮ ಮುಂತಾದ ಉಪನಾಮಗಳನ್ನು ಹಿಂದೆನೋಡು) ಶ್ರೀ ಬಸವೇಶ್ವರನು ಪರಶಿವನಿಂದ ಪಡೆದಿದ್ದರೂ, ನೀಚನೀಚಜಾತಿಯವರಲ್ಲನೇಕರಿಗೆ ಲಿಂಗವನ್ನು ಕಟ್ಟಿದನೆಂದು ಹೇಳುವುದು ಕುಹಕಿಗಳ ಅಸೂಯಾಂಧತೆಯಾಗಿರುವುದು. ಏಕಂದರೆ ಬಸವೇಶ್ವರನಿಂದ ಮತಪ್ರವಿಷ್ಟರಾದವರ ಜಾತಿಯನ್ನು ಯಾವ ಕವಿಯೂ ಯಾವ ಗ್ರಂಥದಲ್ಲಿಯಾದರೂ ಒಬ್ಬರನ್ನಾದರೂ ಉದಾಹರಿಸಿಲ್ಲ. ಇದಕ್ಕೆ

CC-0. Jangamwadi Math Collection. Digitized by eGangotri

ಸಿಂಗಿರಾಜನು ಬ್ರಾಹ್ಮಣ್ಯವೇ ಹಾಳಾಯಿತೆಂದು ಹೇಳಿರುವುದರಿಂದ ಬ್ರಾಹ್ಮಣರು ಮಾತ್ರ ಲಿಂಗಾಂಗಿಗಳಾಗಿ ಹೋಗಿರುವರು. 5 ಮತ್ತು ಸಂಸ್ಕೃತದಲ್ಲಿನ ಬಸವಪಂಚಪ್ರಕಾರಗದ್ಯಗ್ರಂಥದ ಮೇಲಿಂದ ಬಸವೇಶ್ವರನು ವೀರಮಹೇಶ್ವರನಿದ್ದನೆಂದೂ ಪಾಲ್ಕುರಿಕೆ ಸೋಮನು ಸತ್ಯಮಹೇಶ್ವರತಿಲಕನಿದ್ದನೆಂದೂ ಹೇಳಿರುವುದರಿಂದ 6 ಸತ್ಯಗುಣಶೋಧನೆಯಮೇಲೆ ಬ್ರಾಹ್ಮಣರೇ ಅರ್ಹರೆಂದು, ಕೆಲವರನ್ನು ಮಾತ್ರ ಲಿಂಗಾಂಗಿಗಳನ್ನಾಗಿ ಮಾಡಿರಬಹುದೆಂದು ಊಹಿಸಲವಕಾಶವಿದೆ. ಆಗಿನ ಕಾಲದ ಇಂಥಾ ಸಾಂಕರ್ಯವು ಈಗಿನ ಶೂದ್ರಸದೃಶ ಜನರಿಗೆ ಗುರುವರ್ಗದವರಿಂದ ಮಾಡಲ್ಪಡುವ ಸಾಂಕರ್ಯಕ್ಕಿಂತಲೂ ಎಷ್ಟೋ ಶತಾಧಿಕಪೂಜ್ಯವಾಗಿರುವುದು. ಆಗ ಗುಣಕ್ರಿಯಗಳ ಸಂಪತ್ತಿನಮೇಲೆ ಗ್ರಹಿಸುತ್ತಿದ್ದರು. ಈಗ ದುಡ್ಡಿನ ಆಶೆಗಾಗಿ ನೀಚತನದಿಂದ ಕುಲಭ್ರಷ್ಟತೆಯನ್ನು ಮಾಡುವರು. ಆದುದರಿಂದ ಇಂಥಾ ಸಮ್ಮಿಶ್ರಣದ ಸಂಸರ್ಗವನ್ನು ದೂರೀಕರಿಸಿ ಗುರುವರ್ಗದವರಿಗೆ ಕಾಣಿಕೆಗಳನ್ನು ತಪ್ಪಿಸಿದಲ್ಲಿ ಇಂದೇ ಸಮಾಜವು ಉದ್ಧಾರವಾಗುವುದರಲ್ಲಿ ಏನೂ ಸಂದೇಹವಿಲ್ಲ. ಮಡಿವಳ ಹಡಪ ಶಬ್ದಗಳನ್ನು ಪಾತ್ರವರಿತು ಧೂಳಪಾವಡ ಶೀಲವಂತನೂ (ಈ ಒಳಭೇದದವರು ಎಂದಿಗೂ ಕೋಪಿಸಿಕೊಳ್ಳಬಾರದೆಂದು ಬೇಡಿಕೊಳ್ಳುವೆನು.) ಸಮಯಾನುಸಾರವಾಗಿ ಮರ್ಯಾದೆಯನ್ನು ಕೊಡುತಗದುಕೊಳ್ಳುವುದಕ್ಕೆ ಸಿದ್ಧನಿರುವ ತಾಂಬೂಲಧಾರಿಯು ಎಂದು ಗುಣಾಢ್ಯರು ವಿಚಾರಾರ್ಥಪಾಡುತ್ತಾರಾಗಲಿ ಅಪಾರ್ಥಗಳನ್ನು ಎಂದಿಗೂ ಕಲ್ಪಿಸುವುದಿಲ್ಲ. ಆದರಂತೆಯೇ ವಿಶಾಖಪಟ್ಟಣ ಜಿಲ್ಲೆಯ ವಿಾನಬಲೆಗಾರರಾದ ಭಕ್ತರನ್ನೂ ಕೇವಲ ಮದ್ಯಮಾಂಸಾಹಾರಿಗಳಾದ ಕೊಂಕಣಸ್ಥ ಪೂಜಾರಿ ಐಗಳನ್ನು ಮಹೇಶ್ವರರೆಂದೂ ಭಕ್ತರೆಂದೂ ಅನ್ನುವುದಕ್ಕೆ ಎಂದೂ ಬರುವುದಿಲ್ಲ. 7

ಮಲ್ಲಿನಾಥನಗುಡಿಗೆ ಪ್ರಸಿದ್ಧವಿರುವ ಹಿಪ್ಪಲಿಗೆ ಗ್ರಾಮದ ಮಡಿವಳ ಮಾಚಿದೇವನು ಲಿಂಗಣ್ಣಾರ್ಯನಲ್ಲಿ ದೀಕ್ಷೆಯನ್ನು ಹೊಂದಿ ಮಠಸ್ಥನಾಗಿ ಅಂತ್ಯದಲ್ಲಿ ಕಲ್ಲಿನಾಥನೇ ಶಿಕ್ಷೆ-ಮೋಕ್ಷೆಗಳ ಗುರುವಾಗಲು, ಆತನ ಅಂಕಿತದಮೇಲೆ ಒಂದುವಚನ ಗ್ರಂಥವನ್ನೂ ಕಾಲಜ್ಞಾನವನ್ನೂ ಬರೆದು ತಡಗೋಡಿನಲ್ಲಿ ಐಕ್ಯನಾದನು.8 ಈತನ ಪೂರ್ವಜರು ಕೋಲಾರುಜಿಲ್ಲೆಯ ಮಡಿವಳಗ್ರಾಮದಿಂದ ಬಂದು ಹಿಪ್ಪೆಲಿಗೆಯಲ್ಲಿ ನೆಲಸಿದ್ದುದನ್ನು9 ಮುರಿತು ಜನರು ಕೇವಲ ಮೂಢಭಕ್ತಿಯಿಂದ ಈತನನ್ನು ಸಾಮಾನ್ಯ ಅಗಸನೆಂದು ಭಾವಿಸಿರುವರು. ಈತನು ಕಲ್ಯಾಣನಗರ ಭಾಗದ ಶಿವಪುರಕ್ಕೆ ಬಂದು ಕೆಲದಿನಗಳು ವಾಸಮಾಡಿದ್ದನೆಂದು ತಿಳಿ

CC-0. Jangamwadi Math Collection. Digitized by eGangotri

ಯುತ್ತದೆ. 10 ಈತನಿಗೆ ಏಕಾಳಿ, ಮಹಾದೇವಲ ಮಾಚಯ್ಯ, ಮಡಿವೆಲ ಮಾಚಯ್ಯ, ಮಡಿವೇಲು ಮಾಚಯ್ಯ ಮುಂತಾದ ಉಪನಾಮಗಳಿದ್ದುವು. 11 ಈತನು ವೀರಶೈವರಲ್ಲಿ ಒಳಭೇದಗಳನ್ನೆಣಿಸದಂತೆ ಪರಸ್ಪರ ಶರೀರಬಾಂಧವ್ಯವನ್ನು ಬೆಳೆಯಿಸಿದಂತೆ ಈತನ ವಚನಗಳಮೇಲಿಂದ ಸ್ಪಷ್ಟವಾಗಿ ತಿಳಿಯಬರುತ್ತದೆ. 12 ಇಂಥಾ ಮಾಚಿದೇವನನ್ನು ವ್ಯಾಸನು ಷಟ್ಸ್ಥಲಜ್ಞಾನಕೋವಿದ, ಲಿಂಗನಿಷ್ಠ, ಲಿಂಗತತ್ವಪರಾಯಣನೆಂದೂ, ಪಿಡುಪರ್ತಿಸೋಮನು ಜಂಗಮಾರ್ಚನಾಸಕ್ತ ಚಿತ್ತ, ರಜಕವೇಷಾವೃತರುದ್ರ, ಮತಸ್ಥನಾದ ವೀರಾಚಾರ್ಯನೆಂದೂ, ಗುರುರಾಜನು ಸಂಸ್ಕೃತ ಪಂಡಿತಾರಾಧ್ಯ ಚರಿತ್ರೆಯಲ್ಲಿ ಶ್ರುತಿಮಾರ್ಗಪ್ರವರ್ತಕನೆಂದೂ, ಕಂಚಿಯ ಶಂಕರಾರ್ಯನು ಪ್ರಾಣಲಿಂಗೈಕ್ಯವಿಜ್ಞಾನ ಪ್ರತಿಷ್ಠಿತನೆಂದೂ, ವೀರಶೈವಾಗ್ರಗಣ್ಯನೆಂದೂ ಪಾಲ್ಕುರಿಕೆ ಸೋಮನು ಜಂಗಮನಿಷ್ಠ, ಲಿಂಗೈಕನಿಷ್ಠಾಪರ, ರಜಕಜಾತ್ಯಾವೃತ ಪ್ರತ್ಯಕ್ಷರುದ್ರ, ಶರಣಪದಾಂಭೋಜಷಟ್ಪದನೆಂದೂ, ಸಿಂಗಿರಾಜನು ಶರಣಪದಪಂಕಜಭ್ರಮರ, ಶರಣಗಣವಜ್ರಪಂಜರ, ಧೂರ್ತಪರವಾದಿ ಗೆಜಸಿಂಹನೆಂದೂ, ಷಡಕ್ಷರದೇವನು ಉರ್ವೀಪರಿಪಾಲನಾರ್ಥಮೊಗೆತಂದಮಹೇಶ್ವರ, ವೀರಶೈವೈಕ್ಯಮಾರ್ಗನಿರತ, ಲಿಂಗೇಂದ್ರಿಯೋನ್ನತಲಿಂಗಾನ್ವಿತ, ಅಪ್ರಮೇಯ ರಜಕತ್ವಛಿನ್ನರುಪ್ರನೆಂದೂ 13 ಈ ಪ್ರಕಾರವಾಗಿ ಪೂರ್ವಕವಿಗಳು ಪ್ರಯೋಗಿಸಿರುವುದನ್ನು ನೋಡಿದರೆ ಭೂತ ಅಥವಾ ಪ್ರೇತಲಿಂಗಧಾರಿಯಲ್ಲದ ಈ ಮಾಚಿದೇವನಿಗೆ ಬಸವೇಶ್ವರನು ಯಾವವಿಧವಾದ ಗುರುವು ಅಲ್ಲವೆಂದೂ, ಈ ಮಾಚಿದೇವನು ಕೇವಲ ವೇದಾಗಮೋಕ್ತಲಿಂಗಾಂಗಸಾಮರಸ್ಯಜ್ಞಾನಿಯಾಗಿದ್ದನೆಂದೂ ಸ್ಪಷ್ಟವಾಗಿ ತೋರುತ್ತದೆಂದು ಹೇಳುವುದಕ್ಕೆ ಯಾವ ಸಂಶಯವೂ ಇಲ್ಲ. ಮತ್ತು ಅಜ್ಞಾನಮಧುಮಾಂಸಾಹಾರಿಯಾದ ಕೇವಲ ಸಾಮಾನ್ಯ ಈಗಿನ ಮಡಿವಾಳನಂತಿದ್ದರೆ ಕಾಣ್ಣವಬ್ರಾಹ್ಮಣರ ಕುಲದೇವನಾದ ಮೈಲಾರ, ಬೀರ, ಭೈರವ, ಎಕ್ಕನಾದಿ, ಕೇತ, ಧೂಳಾದಿಗ್ರಾಮದೇವತೆಗಳನ್ನು ಭೂಷಿಸುತ್ತಿದ್ದನೇಹೊರತು ಎಂದೂ ಪೂಷಿಸುತ್ತಿದ್ದಿಲ್ಲ. 14 ಈತನು ವ್ಯಾಘ್ರಾಸನಾಸೀನನಾಗಿ ಧ್ಯಾನಪರನಾಗಿರುತ್ತಿದ್ದನೆಂದೂ, ಈತನ ಆಶ್ರಮದಲ್ಲಿ ಗೋಡೆಗಳಮೇಲೆ ಪ್ರಣವಾಕ್ಷರಗಳು ಬರೆಯಲ್ಪಟ್ಟಿದ್ದವೆಂದೂ ತಿಳಿಯುತ್ತದೆ. 15 ಈ ಮಾಚಿದೇವನು ಲಿಂಗತತ್ವವೇತ್ತನಿವ್ದನೆಂದೇ ಬಗೆದು ಆನಂದಬಸವ ಶಿವಲಿಂಗಯೋಗಿಯು ಈತನ ಅಂಕಿತವೇ ಚಿರಸ್ಥಾಯಿಯಾಗಿರುವಂತೆ ಮಾಚಿದೇವಮನೋವಿಲಾಸವೆಂಬ ಗ್ರಂಥವನ್ನು ಬರೆದಿರುವುದು. ಲೋಕವಿಖ್ಯಾತ್ಯವಾಗಿಯೇ ಇರುವುದು. ಸಾಮಾನ್ಯಜಾತಿ

CC-0. Jangamwadi Math Collection. Digitized by eGangotri

ಯವರಾದ ಈ ಜನಾಂಗದವರಿಗೆ ಬಸವೇಶ್ವರನು ಲಿಂಗವನ್ನು ಕಟ್ಟಿದನೆಂದು H. V. ನಂಜುಂಡಯ್ಯ M. A. ಯವರು ಬರೆದಿರುವುದು ಕೇವಲ ಮತವಿದ್ವೇಷವಾಗಿದೆ.16 ಈಮುಡಿನಳ ಮಾಚಿದೇವನ ಮೊಮ್ಮಗನಾದ, ಮೊದಲು ಪಶ್ಚಿಮ ಚಾಳುಕ್ಯ ಮುಮ್ಮಡಿ ಸೋಮೇಶ್ವರನ ಕೈಕೆಳಗೆ ಕ್ರೀ. ಶ. 1138-ರಲ್ಲಿ ದಂಡನಾಯಕನಾಗಿದ್ದ, ಆಮೇಲೆ ಸ್ವತಂತ್ರಿಸಿ ಆಳುವುದಕ್ಕೆ ಮೊದಲುಮಾಡಿದ, ಪೂರ್ವಭಾಗದ ಬಂದರುಸೀಮೆಯ (ಕೃಷ್ಣಜಿಲ್ಲ) ಮಾಂಡವ್ಯಪುರದ ಮಹದೇವರಾಜನು, ಹೆಂಡತಿ ಮಹದೇವಿ, ಮಗ ಲಿಂಗರತಿಯೊಡನೆ ನೈಷ್ಠಿಕವೀರಶೈವನಿದ್ದನು. 17 ಈತನೇ ಮೋಳಿಗ ಮಾರಯ್ಯನು. ಈತನ ಗುರುವು ನಿಷ್ಕಳಂಕಮಲ್ಲಿಕಾರ್ಜುನ ನಿದ್ದನು. ಈತನು ಅಂತ್ಯದಲ್ಲಿ ವಿರಕ್ತನಾಗಿ ಬಸವೇಶ್ವರನನ್ನು ಮರೆಹೊಕ್ಕು ಈ ಗುರುವಿನ ಮುದ್ರಿಕೆಯಮೇಲೆ ಒಂದು ವಚನಗ್ರಂಥವನ್ನು ಬರೆದು ಪ್ರಸಿದ್ಧನಾದನು. ಬೆಂಗಳೂರು ಮಹಂತಯ್ಯನು ಭಕ್ತಿಭ್ರಮಣೆಯಲ್ಲಿ ಈ ಮಾಚಯ್ಯನನ್ನು ಕಾಶಿಯ ಕಾಶ್ಮೀರರಾಜನೆಂದು ಉಲ್ಲೇಖಿಸಿರುವುದನ್ನು ನೋಡಿ ತುಂಬಾ ವಿಷಾದಿಸಬೇಕಾಗಿದೆ. 18

ಹಾಗೆಯೇ ಹಡಪದಪ್ಪಣ್ಣನು ಚನ್ನಸಂಗಮದೇವನ ಶಿಷ್ಯನಾಗಿದ್ದನು. ಇವನು ತನ್ನ ನವಚಕ್ರದ ವಚನಗ್ರಂಥದ ಮಧ್ಯದಲ್ಲಿ ಅನೇಕ ಉಪನಿಷದುದಾಹರಣೆಗಳನ್ನು ಕೊಟ್ಟಿರುವುದರಿಂದ ವೈದಿಕಮಾರ್ಗಲಿಂಗಾಂಗಸಾಮರಸ್ಯಜ್ಞಾನಿ ಎಂದು ಚನ್ನಾಗಿ ಬೋಧೆಯಾಗುತ್ತದೆ. ಅಪ್ಪಣ್ಣನನ್ನು ಸಮಕಾಲೀನ ಸಿಂಗಿರಾಜನು ಇಷ್ಟಲಿಂಗಿ ಎಂದು ಅನೇಕಪ್ರಕಾರವಾಗಿ ಹೇಳಿರುವನು. ಈ ಜನಾಂಗದವರನ್ನು ಚರಿತ್ರೆಯ ಶೋಧಕರು ಶೀಲವಂತರೆಂದು ಕರೆದಿರುವರು.19

ಮತ್ತು ಪೂಡೂರು ಗ್ರಾಮದ ಅಕ್ಕಸಾಲೆಯ ಮುಂತಾದ ಅನೇಕ ಕಾಯಕಗಳುಳ್ಳ ಕಿನ್ನರಿ ಬ್ರಹ್ಮಯ್ಯನು ಸಹಾ ವೀರಮಾಹೇಶ್ವರನಿದ್ದನು. 20

ಅನೇಕರು ಚನ್ನಯ್ಯಕಕ್ಕಯ್ಯರನ್ನು ಬಸವೇಶ್ವರನ ಸಮಕಾಲದವರೆಂದು ವಾದಿಸುವರು. ಆದರೆ ಬಸವೇಶ್ವರನು ಬಿಜ್ಜಳನಿಗೆ ತನ್ನಕಿಂತಲು ಪೂರ್ವದಲ್ಲಿದ್ದರೆಂದು ಸ್ಪಷ್ಟವಾಗಿ ತಾನೇ ಆಡಿ ತೋರಿಸಿದ್ದಾನೆ. ಬಸವೇಶ್ವರನು ತನ್ನ ವಚನಗ್ರಂಥದಲ್ಲಿ ಚನ್ನನಕುಲ ಚನ್ನಾಯಿತ್ತು, ದಾಸನಕುಲ ದೇಸಿವಡೆದಿತ್ತು, ಅಪ್ಪಕಕ್ಕಯ್ಯ, ಮುತ್ತಯ್ಯ, ಚನ್ನಯ್ಯ, ಮಹಾದಾನಿಚನ್ನನೆತ್ತ, ಚೋಳನೆತ್ತ

CC-0. Jangamwadi Math Collection. Digitized by eGangotri

ಎಂದು ಉಲ್ಲೇಖಿಸಿರುವುದನ್ನು ನೋಡಿದರೆ ಈ ಚನ್ನಯ್ಯನು ಶಂಕರದಾಸಿಮಾರ್ಯನಕಿಂತಲು (ಕ್ರಿ. ಶ. 1020—40) ಪೂರ್ವದ ಆವನೋ ಒಬ್ಬ ಚೋಳ ರಾಜನಕಿಂತಲೂ (ಇವನಾವೆಂಬುವುದನ್ನು ಮುಂದಿನ ವೀರಶೈವ ಚರಿತ್ರೆಯಲ್ಲಿ ವಿವರಿಸುತ್ತೇನೆ) ಪೂರ್ವಿಕನಿದ್ದನೆಂದು ಕಾಣುತ್ತಿದೆ. ಇದನ್ನು ಬಲಪಡಿಸುವುದಕ್ಕೆ ಚನ್ನಯ್ಯನನ್ನು ಬಸವೇಶ್ವರನು ಮುತ್ತಯ್ಯ ನಜ್ಜನಪ್ಪನಯ್ಯ, ಆಯ್ಯಗಳಯ್ಯನೆಂದು ಒಂದೆಡೆಯಲ್ಲಿ ಪ್ರಯೋಗಿಸಿರುವನು. ಇವನಿಗೆ ಚನ್ನಯರಾಯನೆಂದು ಪ್ರಯೋಗವಿರುವುದರಿಂದ ಇವನು ಸಾಮಂತರಾಜನಾಗಿದ್ದನೆಂದು ಸಹಾ ಊಹಿಸಲವಕಾಶವಿದೆ. 21 ನಿಜವಾಗಿ ಚನ್ನಯ್ಯನು ನೀಚಕುಲದವನಾಗಿದ್ದರೆ ಬಸವೇಶ್ವರನು ಎಂದೂ ಮರೆಮಾಜುತ್ತಿದ್ದಿಲ್ಲ. ಒಳ್ಳೇಕುಲದವನೆಂದೇ ಹೇಳಿರುವನು. ಈ ಚನ್ನಯ್ಯನನ್ನು ಹೆಂಡತಿ ಮಕ್ಕಳಿಲ್ಲದ ಮೋಕ್ಷವನ್ನಪೇಕ್ಷಿಸುವ ನಿರಾಭಾರಿಯಾಗಿದ್ದನೆಂದೇ ಸೂಕ್ಷ್ಮದೃಷ್ಟಿಯಿಂದ ಸ್ವಾಭಾವಿಕವಾಗಿ ಪ್ರಯೋಗಿಸಿರುವನು.

ಕಕ್ಕಯ್ಯನು ಶಂಕರದಾಸನಗಿಂತಲು ಸ್ವಲ್ಪ ಹಿಂದಾಗಲಿ ಮುಂದಾಗಲಿ ಇದ್ದಂತೆ ತೋರುತ್ತದೆ. ಈತನು ಅಭಿನವಮಲ್ಲಿಕಾರ್ಜುನನ ಶಿಷ್ಯನಾಗಿದ್ದಂತೆ ತೋರುತ್ತದೆ. ಮೊದಲುವೀರವೈಷ್ಣವನೂ ಸಮಕಾಲೀನನೂ ಆದಸಿಂಗಿರಾಜನು ಕಕ್ಕಯ್ಯನಿಗೆ ಶಿವದ್ವೇಷಿಶಿರಃಕಮಲಕುಂಜರನೆಂಬ ಬಿರುದನ್ನು ಕೊಟ್ಟಿದ್ದರೂ 22 ತರುವಾಯದ ಭೀಮಕವಿಯು ಭಕ್ತಿವೇಷದಲ್ಲಿ ಡೋಹರಪದವಿಶೇಷಣವನ್ನು ಪ್ರಯೋಗಿಸಲು ಹಾಗೆಯೇ ಇತರರು ಮೂಢಭಕ್ತಿಪರವಶರಾಗಿ ಅನುಸರಿಸಿರುವರಾಗಲಿ ಬೇರೊಂದಿಲ್ಲ. ಈ ಮೊದಾರ ಡೋಹರ ಪದಗಳು ಅನೇಕ ಪರವಾದಿಗಳ ಕುಯುಕ್ತಿಗೆ ಕವಿಯೊಡ್ಡಿ ಮುಗ್ಧಭಕ್ತಿಗೆ ಪರವಶವಾಗಿ ಕೆಲವಚನಗಳ ಮಧ್ಯದಲ್ಲಿ ಅಲ್ಲಲ್ಲಿ ಪ್ರಕ್ಷಿಪ್ತಮಾಡಿದ ಕಲ್ಪನೆಗಳೇ ಇರುತ್ತವೆಯಲ್ಲದೆ ಬೇರೆ ಇಲ್ಲ. ಹೀಗೆಯೇ ಎಷ್ಟು ಕೃದ್ಧ ವಿಶ್ವಾಸಿಗಳಾದರೂ ಅನೇಕ ಸಂಸ್ಕೃತಾಂಧ್ರಕರ್ನಾಟಕ ಕವಿಗಳು ನಿಜಸ್ಥಿತಿಯನ್ನು ಹೊರಗೆಡವಿ ಬರೇ ಕಕ್ಕಯ್ಯ, ಚನ್ನಯ್ಯನೆಂದೇ ಪ್ರಯೋಗಿಸಿರುವುದು ನೋಡಿ ವಿಶಾಲ ವಿಚಾರಮತಿಗಳಿಗೆ ಸಾಕಷ್ಟು ಸಂತೋಷವಾಗದಿರದು. ದೇವಭಾಷೆಯಲ್ಲಿ ಗುರುರಾಜನು ಚನ್ನಯ್ಯನನ್ನು ಗಣಾಧೀಶನೆಂದೂ ಕಕ್ಕಯ್ಯನನ್ನು ಈಶಸದ್ಭಕ್ತನೆಂದೂ (ವೀರಶೈವ ಪಾರಿಭಾಷಿಕ ಪ್ರಯೋಗಗಳು) ಮುಚ್ಚುಮರೆ ಇಲ್ಲದೇ ಪ್ರಯೋಗಿಸಿರುವುದು ನೋಡಿದಲ್ಲಿ ಪರಮ ಭಕ್ತರಿಗೆ ಮತ್ತು ಪರಮಸಂತೋಷವನ್ನುಂಟು

CC-0. Jangamwadi Math Collection. Digitized by eGangotri

ಮಾಡತಕ್ಕುದಾಗಿದೆ. 23 ಆದರೆ ಈ ಕಕ್ಕಯ್ಯನನ್ನು ಜೈನ ಧರಣಿಪಂಡಿತನು ಕಕ್ಕಗೆ ಮತ್ತು ಚಂಡನೆಂದು ಪ್ರಯೋಗಿಸಿರುವುದು ಮತದುರಭಿಮಾನ-ವಿದ್ವೇಷ ಸೂಚಕವೆಂದು ಭಾವಿಸಬೇಕಾಗಿದೆ. 24

ಶಿವನಾಗಮಯ್ಯನೂ ಹಾಲಿಕಮಾರಣ್ಣನೂ ಅಂಬಿಗರಚೌಡಯ್ಯನೂ ನೈಷ್ಟಿಕ ವೀರಶೈವರಿದ್ದರು. ಚನ್ನರಾಮನೆಂಬುವನು ಶಿವನಾಗಮಯ್ಯನಿಗೆ ಗುರುವಾಗಿದ್ದನು. 25

ಮೇದರಕೇತಯ್ಯನೆಂಬುವನಿಗೆ ಗೌರೀಶ್ವರನು ಗುರುವಾಗಿದ್ದನು. ಕೇತಯ್ಯನು ವೇದಾಗಮಕಥಿತನಿಯಮವಿಶೃತನೇ ಇದ್ದನೆಂದು ಘಂಟಾಘೋಷವಾಗಿ ಹೇಳತಕ್ಕುದಾಗಿದೆ. 26 ಈ ಜನಾಂಗದವರು ಈ ಮುಖಂಡಗುರುವಿನ ಸ್ಮಾರಕಕ್ಕಾಗಿ ಅಭಿಮಾನದಿಂದ ಗೌಂಗರೆಂದು ಕರೆದುಕೊಳ್ಳುತ್ತಾರೆ. 27 ಇಂಥ ಪೂಜ್ಯವೃತ್ತಿಸ್ಮರಣೆಗಾಗಿಯೇ ಅನೇಕ ತಮಿಳರಾದ ವಧಿಮ (ಮುಧಿಮ) ಬ್ರಾಹ್ಮಣ-ಸ್ತ್ರೀಯರು ಜಾತಿಗಳನ್ನು ಹೆಣೆದು ಈಗಲೂ ಜೀವಿಸುತ್ತಿರುವುದೇ ಉದಾಹರಣೆಯಾಗಿದೆ. 28

ಹರಳಯ್ಯ (ಅಲ್ಲಯ್ಯ) ಮಘುವರಸಇವರ ಮಿಶ್ರಬಾಂಧವ್ಯವಿವಾಹಚರಿತ್ರೆಯು ಪೂರ್ವಗ್ರಂಥಗಳಲ್ಲಿ ಇಲ್ಲವೇಇಲ್ಲ. ಜೈನರು ಹರಳಯ್ಯನನ್ನು ಹಳ್ಳಯ್ಯ-ಹಳುಗೆ, ಅಲ್ಲಮನೆಂದು ಮುಂತಾಗಿ ಮಾರ್ಪಡಿಸಿರುವರು 29. ಇವು ಹಸ್ತಲೇಖನಸ್ಖಾಲಿತ್ಯದೋಷಗಳು. ಇವರ ಕಥೆಯನ್ನು ಕೃದ್ಧಮಾಥಭಕ್ತಿಯಿಂದಲೂ ಮತವಿದ್ವೇಷದಿಂದಲೂ ಕಲ್ಪಿಸಿ, ಪ್ರಕ್ಷಿಪ್ತಮಾಡಲ್ಪಟ್ಟಂತೇ ತಿಳಿಯತಕ್ಕುದಾಗಿದೆ. ಇಂಥ ಅವಿಶ್ವಸನೀಯ ಕಲ್ಪನೆಗಳನ್ನು ಮನ್ನಿಸುವುದರಿಂದಲೇ ವೀರಶೈವರು ಅಪಹಾಸ್ಯಕ್ಕೆ ಗುರಿಯಾಗಿ ಅಪಾಂಕ್ತೇಯ ಪಾತ್ರರಾಗುತ್ತಾರೆ. ಕಥೆಯ ನಿಜಾಂಶವನ್ನು ವಿಚಾರಿಸಿದರೋ ಹರಳಯ್ಯನು ತನ್ನದೇಹವನ್ನು ಸುಲಿದುಕೊಂಡು ಕೆಲದಿನಗಳು ಜೀವಿಸಿದನಂತರ ಬಿಜ್ಜಳನಿಂದ ಕಣ್ಣುಗಳನ್ನು ಕೀಳಿಸಲ್ಪಟ್ಟನೆಂದು ಗ್ರಹಿಸುವುದಂತೂ ತುಂಬಾ ಅವಿವೇಕವೆ. ಆದುದರಿಂದ ಈವಿಚಿತ್ರಕಥೆಯನ್ನು ಮಾಥಭಕ್ತಿಕಲ್ಪನಾಪ್ರಕ್ಷಿಪ್ತವೆಂದು ಸ್ಪಷ್ಟವಾಗಿ ತೋರುತ್ತದೆಂದು ಹೇಳುವುದಕ್ಕೆ ಯಾವ ಸಂಶಯವಿಲ್ಲ. ಈತನು ಇದ್ದೇ ಇಲ್ಲೆನ್ನುವುದಕ್ಕೆ ಬಸವೇಶ್ವರನು ಸಚನಗ್ರಂಥವನ್ನು ಬರಲಂತೆಯೇ ಈ ಹರಳಯ್ಯನ ಜಂ

CC-0. Jangamwadi Math Collection. Digitized by eGangotri

ದಾದರೂ ವಚನಗ್ರಂಥವು ಶೋಧದಲ್ಲಿ ದೃಷ್ಟಿಪಥಕ್ಕೆ ಬೀಳುವುದೇ ಇಲ್ಲವೆಂಬಂ
ಶವನ್ನು ಪೂರ್ಣ ಲಕ್ಷ್ಯಕ್ಕೆ ತಂದಲ್ಲಿ ಸರ್ವವೂ ವೇದ್ಯವಾಗುವುದು. ಆದರೆ ಬಸ
ವೇಶನಕ್ಕಿಂತಲೂ ಎಷ್ಟೋ ಪೂರ್ವದಲ್ಲಿಯೇ ಚನ್ನಯ್ಯನ ವಚನಗ್ರಂಥವು ಕಾಣ
ಲ್ಪಡುತ್ತಿರುವುದು ತುಂಬಾ ಸಂತೋಷಕರವಾಗಿದೆ.

ಬಸವೇಶ್ವರನು ವೀರಶೈವ ಮತವನ್ನು ಉದ್ಧಾರಮಾಡಿದನೆಂದು ಪರ
ವಾದಿಗಳೇ ಸ್ವೀಕರಿಸಿರುವರು. 30 ಆದುದರಿಂದಲೇ ಈತನನ್ನು ವೀರಶೈವಾ
ಗಮಾಚಾರ್ಯನೆಂದು 31. ಸಿಂಗಿರಾಜನು ಕೊಂಡಾಡಿರುವುದು ಸಹಜವಾಗಿರು
ತ್ತದಾಗಲಿ ಆಶ್ಚರ್ಯವೇನೂ ಇಲ್ಲ. ಈತನು ಗುಣತತ್ವಪರ್ಣಾಶ್ರಮಗಳನ್ನು
ಮನ್ನಿಸುತ್ತ ವಿದ್ಯಾಗುಣೈಕಪಕ್ಷಪಾತನಾಗಿ ಸದಾಚಾರಿಯೇ ಸರ್ವೋತ್ಕೃಷ್ಟ
ನೆಂದುಭಾವಿಸಿ ಸರ್ವರನ್ನು ದೀಕ್ಷೆಗೆ ಅರ್ಹರಾಗುವಂತೆಮಾಡಿ ಅವರಲ್ಲಿ ಮಹೇ
ಶ್ವರತ್ವವನ್ನು ಅಂದರೆ ಈಗಿನ ಬ್ರಾಹ್ಮಣರ ಮಾನಸಿಕ ಅಂತರಂಗದ ಸಂಕೋಚ
ವನ್ನು ದೂರಮಾಡಿ, ಉದಾರಬುದ್ಧಿಯಿಂದ ಜನಾನುರಾಗವಾಗಿ ವಿಶ್ವವ್ಯಾಪಕ
ನಾಗುವಂತೆ ಈಶ್ವರ ಸೃಷ್ಟಿಯ ಬ್ರಹ್ಮಾಂಡದಲ್ಲಿ ಮನುಷ್ಯವರ್ಗವೆಲ್ಲ ಸರ್ವ
ಸಮಾನ ವಿಶ್ವಕುಟುಂಬಿ ಎಂಬುವುದನ್ನು ಪ್ರತಿಶಿವಭಕ್ತನು ತಿಳಿಯಬೇಕೆಂಬುವು
ದನ್ನು ಪ್ರತಟಮಾಡಿ ಅಜರಾಮರಕೀರ್ತಿಭಾಜನಕ್ಕೊಳಗಾದನು. ಆದುದರಿಂ
ದಲೇ ಪಂಡಿತಪಾಮರರು ಈವರೆಗೂ ಮನಪೂರ್ವಕವಾಗಿ ಕೊಂಡಾಡುತ್ತಿರುವುದು
ಆಶ್ಚರ್ಯವಲ್ಲ.

ತ್ವಷ್ಟಪಚನಾವಸಾಂಖ್ಯನೂ, ಬಲೆಗಾರನಾದ ಅಗಸ್ತ್ಯನೂ, ಮುಚ್ಚಿಗನಾದ
ದೂರ್ವಾಸನೂ, ಬಡಿಗನಾದ ದಧೀಚಿಯೂ, ಕಮ್ಮಾರನಾದ ಕಶ್ಯಪನೂ, ಕಂಚು
ಗಾರನಾದ ರೋಮಜನು, ಕ್ಷೌರಿಕನಾದ ಕೌಂಡಿಲ್ಯನೂ, ಬೇಡನಾದ ವಾಲ್ಮೀ
ಕಿಯೂ, ಬೆಸ್ತನಾದ ವ್ಯಾಸನೂ, ಮಾದಿಗನಾದ ಮಾರ್ಕಾಂಡೇಯನೂ ಮಾತಂ
ಗನೂ ಡೊಂಬಸೂಳೆಯಮಗನಾದ ವಶಿಷ್ಟನೂ32 ಮುಂತಾದವರು ಬ್ರಾಹ್ಮಣ
ರಾಗಿದ್ದಂತೆ, ಮತ್ತು ಅಂಥಾಬ್ರಾಹ್ಮಣ್ಯವು ಮಾಧ್ಯಂದಿನರು, ಗೋಳಕರು,
ಕಾಣ್ಣವರು, ಸಾರಸ್ವತರು, ಸಹವಾಸಿಗಳು, ವಿದುರರು, ಮಾರಕರು, ಮಹಾ
ಪಾತ್ರ ಗಂಗಾಪುತ್ರ ಮುಂತಾದ 1886ಉಪಜಾತಿಗಳನ್ನೊಳಕೊಂಡಿರುವಂತೆ33
ಅವರೊಳಗೆ ತ್ರಿಮತಸ್ಥರಲ್ಲಿ ಮಾತ್ರ 240 ಒಳಪೀಧಗಳಿರುವಂತೆ 34 ಈತನು
ವೀರಶೈವರಲ್ಲಿ ಪರಸ್ಪರಸಹಾಯದಿಂದ ಐಕಮತ್ಯವಿರುವುದಕ್ಕೆ ಮಾಧ್ವರಲ್ಲಿ

CC-0. Jangamwadi Math Collection. Digitized by eGangotri

ದಾಸಕೂಟ ವ್ಯಾಸಕೂಟಗಳಿರುವಂತೆ ಭಕ್ತಮಾಹೇಶ್ವರರೆಂಬ ಊಚ ನೀಚ ಭಾವನ್ನೆಣಿಸದೆ ಹೇಯಭಿಕ್ಷುಕಕಾಯಕದ ನಾಮಧಾರಕಬ್ರಾಹ್ಮಣರಿಗಿಂತಲೂ ಶ್ರೇಷ್ಟರಾದ 63 ಕಾಯಕಗಳಿಂದ ಉಪಜೀವಿಗಳಾದ ಬರೇನಾಮಮಾತ್ರ ಸಾಮಾನ್ಯಜಾತಿಯೆಂದು ಹೇಳಲವಕಾಶವಿಲ್ಲದ, ಪ್ರಾಚೀನಸಮಯಾನುವರ್ತಿಗಳಾದ ಆಷ್ಟಾವರಣಪಂಚಾಚಾರಷಟ್ಸ್ಥಲನಿಷ್ಟಾಗರಿಷ್ಟರಾದ ಮಠಸ್ಥರಾದಅಕ್ಕಸಾಲಿಗ,ಉಪ್ಪಾರ, ಕಮ್ಮಾರ, ದೇವಪೂಜಾರಿಗಳಾದ ಗುಂಡುಬ್ರಾಹ್ಮಣಕುಂಬಾರ,ಗಾಣಿಗ, ನೀಲಗಾರ, ನೇಕಾರ, ಬಡಿಗ, ಬಣಗಾರ, ಬಳೆಗಾರ, ಸಿಂಪಿಗ, ಹೂಗಾರ 35 ಮುಂತಾದ ವೃತ್ತಿಯವರಲ್ಲಿ ಮಹೇಶ್ವರತ್ವವನ್ನು ಪ್ರಕಟಮಾಡಿ ಶರ್ಮಣ್ಯ ಲೂಥರನಂತೆ (ಜರ್ಮನ್‌ಲೂಥರ್) ಸುಧಾರಕನೆನಿಸಿಕೊಂಡದ್ದು ವಿಪರೀತಾರ್ಥಕಲ್ಪನಾಮತದುರಭಿಮಾನ, ಕೃದ್ಧಮೂಢವಿಶ್ವಾಸಭ್ರಮಿಷ್ಟರಿಗೆ ತಪ್ಪಾಗಿ ಕಾಣುತ್ತದೆ. ಇದು ಅಲ್ಲದೇ ಧರ್ಮಶಿವಾಚಾರ ವೈಶ್ಯರಾದ ನಗರ್ತರು, ಗೋವೈಶ್ಯರಾದಗೊಲ್ಲರು (ಗೌಳಿಗರು,) ವ್ಯವಸಾಯಜೀವಿಗಳಾದ ಆದಿಬಣಜಿಗರು, ಮಲ್ಲಿವರು, ಸಾದರು, ನೊಣಬರು, ಮುಂತಾದವರು ಈ ವೀರಶೈವರಲ್ಲಿ ಬಸವೇಶ್ವರನಿಗಿಂತಲೂ ಅತಿಪೂರ್ವದಿಂದಲೂ ಇರುವರು. 36 ಮಧ್ಯದಲ್ಲಿ ಅಗಸಮೇದರರು ಬರಗಾಲದಲ್ಲಿ ಶೂದ್ರರಲ್ಲಿ ಉಂಡುದರಿಂದ ಭ್ರಷ್ಟರಾದರೆಂದು ತಿಳಿಯುವುದರಮೇಲೆ ಸನುಕಾಲೀನಮೇದರಕೇತಯ್ಯನು ಶುದ್ಧ ವೀರಶೈವನಿದ್ದನೆಂದು ಮೇಲೆಯೇ ಶಿದ್ಧವಾಗುತ್ತಿದೆ. ಅದಾವಕಾರಣದಿಂದಲೋ ಕ್ಷಾರಿಕರು ಮಾತ್ರ ಸುಧಾರಿಸದಲೇ ಮಧ್ಯದಲ್ಲಿನಿಂತಿರುವುದನ್ನುನೋಡಿತುಂಬಾ ವಿಷಾದವಾಗುತ್ತದೆ. ಮೊದಲು ಇವರನ್ನುಉದ್ಧರಿಸುವುದು ಸಮಾಜದ ಮುಖ್ಯ ಕರ್ತವ್ಯವೆಂದು ಒತ್ತಿಹೇಳುವೆನು. ರುದ್ರಗಣಕೆಯರೆನ್ನುವರು ಪೂರ್ವದ ಪರೋಪಕಾರದ ವೀರರಮಣೀತ್ವವನ್ನು ಕಳೆದುಕೊಂಡು 37 ಯಾವಾಗಲೂ ನೀಚರಾಗಿದ್ದಾರೆ. ಹೀಗಿದ್ದರೂ ಈ ಬಸವಿಗಳಲ್ಲಿ ಬರೇನಾಮಮಾತ್ರದಿಂದ ಶ್ರೇಷ್ಟರೆಂದಂದು ಕೊಳ್ಳುವ ಗುರುವರ್ಗದ ಜಂಗಮರು ದುಡ್ಡಿನಾಶೆಗೆ ಒಡನಾಡಿ ಸಮಾಜವನ್ನು ಹೀನಸ್ಥಿತಿಗೆ ತರುವುದರಿಂದ ಈ ಜಂಗಮರನ್ನೇ ಬಹಿಷ್ಕರಿಸಲೇಬೇಕಾಗಿದೆಂಬುವ ಅಂಶವನ್ನು ಜನಾಂಗವು ಲಕ್ಷಿಸಿದಲ್ಲಿ ಇಂದೇ ಸಮಾಜವು ಪುನೀತವಾಗುವುದು. ಏಕಂದರೆ ಈ ಜಂಗಮರು ಈಗಿನಸಿಂಪಿಗರ ಹೊಲಿಗೆಯ ಕೆಲಸವು ತಮ್ಮ ಕಾಯಕವೆಂಬುವುದನ್ನು ಮರೆತಿರುವರು. ಇದನ್ನು ಪರೀಕ್ಷಿಸಬೇಕಾದರೆ ವಿಶಾಖಪಟ್ಟಣಜಿಲ್ಲೆಯ ಮತ್ತು ಮುಂಬೈಯ ಜಂಗಮರೇ ಸಾಕ್ಷೀಭೂತರಾಗಿರುವರು. 38 ಆದುದರಿಂದ ಜಂಗಮರು ಹಸ್ತಕಾ

CC-0. Jangamwadi Math Collection. Digitized by eGangotri

ಯಕಜೀವಿಗಳೆಂಬುವುದೂ, ಶಿವಸಿಂಪಿಗರು ಜ್ಞಾನಮಾರ್ಗಿಗಳಾದ ಜಂಗಮರೆಂಬುವುದೂ ಗೃಹಸಿ (ಜಂಗಮರು ಭಕ್ತರೂ ಒಂದೇ) ಲೋಕವನ್ನು ಉದ್ಧರಿಸಲೆ. ಮೇಲ್ಕಂಡ ವೃತ್ತಿವಿಭೇದದ ಉದ್ಯೋಗಪರಿಶ್ರಮಗಳಿಂದಲೇ ಕಲಾಕೌಶಲ್ಯಗಳು ವಿಸ್ತರಿಸಲು ದೇಶದಲ್ಲಿ ವ್ಯಾಪಾರದಿಂದ ಐಶ್ವರ್ಯಾಭಿವೃದ್ಧಿಯಾದುದಕ್ಕೆ ಜನರು ಸುಖಿಗಳಾಗಿ ನಿರೋಗಕಾಯರಾದರು. ಈಕನ್ನಾಟಕವು ಆನಂದದಾಯಕವಾದುದಕ್ಕೆ ನಂದಿಮಂಡಲವೆಂಬ ಸಾರ್ಥಕನಾಮಧೇಯವನ್ನು ಪಡೆದಿತು.39 ಈ ಕಾಯಕವೃತ್ತಿಗಳೇ ಬರಬರುತ್ತ ಸಡಲಿ ಜಂಗಮರು ಭಿಕ್ಷೆಬೇಡಕೂಡದೆಂದು ಶರಣರಿಷ್ಟು ಸಾರಿದರೂ, ಲಕ್ಷ್ಯವಿಲ್ಲದೆ, ಈಗಿನ ಕ್ಷೀಣಗತಿಯ ಸೋಮಾರಿಯ ಭಿಕ್ಷೆಬೇಡುವ ತೀರ್ಥಕಾಕ, ಕೃದ್ಧಮೂಢವಿಶ್ವಾಸಕಲ್ಪನ ಗುರುವರ್ಗದವರೆಂದಂದುಕೊಳ್ಳುವ ಜಂಗಮರಿಗೆ ಉಳಿದ ಅನೇಕ ಸಭ್ಯಗೃಹಸ್ಥರು ಆಡಿಯಾಳಾಗಿರುವುದುನೋಡಿದಲ್ಲಿ ತುಂಬಾ ಶೋಚನೀಯವಾಗಿ ವಿಚಾರಣೀಯವಾಗಿ ಸಮಾಜವು ತಕ್ಷಣವೇ ಇವರಿಗೆ ಕಾಣಿಕೆಗಳನ್ನು ಕೊಡದೆ ಎಚ್ಚತ್ತುಕೊಳ್ಳಲೆಂದು ಸವಿನಯವಾಗಿ ಪ್ರಾರ್ಥಿಸುವೆನು. ಹೀಗೆ ಸಮಾಜವು ಎಚ್ಚರಿಯುದಿದ್ದಲ್ಲಿ ಜೈನರು ಕರೆದಂತೆ ಕುರುಬರ ಜಾತಿಗುರುವಾದ ಒಡೆಯರೆಂಬ ಪದವು ಸಾರ್ಥಕವಾಗುವುದು. (ಸಮಾಜವು ಕುರುಬರು, ಗುರುಜಂಗಮರು ಒಡೆಯರು) 40 ಆದುದರಿಂದ ಸ್ವಜಾತೀಯರಾದ ಭಕ್ತಮಹೇಶ್ವರರಲ್ಲಿ ಅಭೇದಬುದ್ಧಿಯಿಂದ ವಿಭೇದವನ್ನೆಣಿಸದೆ ಸರ್ವರು ಸಮಾನರೆಂಬ ನಿಜತತ್ವಬ್ರಹ್ಮಜ್ಞಾನವನ್ನು ಪಡೆದು, ಲೋಕೈಕಒಡೆಯರೆಂದೆನಿಸಿಕೊಳ್ಳುವ ಮಹಾಭಾಗ್ಯವು ವುಂಟಾಗಲಿ.

ಮಧ್ವಾಚಾರ್ಯರ ಕಾಲದಲ್ಲಿ ಬಂಟರ ಬಂಧುಗಳಾದ ಶಿವಳ್ಳಿಬ್ರಾಹ್ಮಣರು, ಬಿಲ್ಲವ ಬ್ರಾಹ್ಮಣರು, ಉಡುಪಿಸೋದೆ ಮಠದ ವಾದಿರಾಜ ಸ್ವಾಮಿಗಳ ಕಾಲದಲ್ಲಿ (ಕ್ರೀ. ಶ. 1570) ಮಟ್ಟರು (ಮೋಗೇರು, ಮತ್ಸ್ಯರು) ಬ್ರಾಹ್ಮಣರಾದಂತೆ, ಅತಿ ಪೂರ್ವದಲ್ಲಿ ದ್ರಾವಿಡದೇಶದಲ್ಲಿ ಭೂವೈಶ್ಯರಾದ ವೆಲ್ಲಾಳರೆಂಬ ಆದಿಶೈವರು ವೀರಶೈವರಾದಂತೆ ಈತನಕಾಲದಲ್ಲಿ ನಾಮಧಾರಕ ವರ್ಣಜಾತಿ ಭೇದಗಳನ್ನೆಣಿಸದೆ ಯಾವನಲ್ಲಿ ಸತ್ಕ್ರಿಯಾಚಾರವಿರುವುದೋ ಅವನೇ ದಿಕ್ಷೆಗೆ ಯೋಗ್ಯನೆಂಬ ಉದಾತ್ತತತ್ವವನ್ನು ಪ್ರಸಾರಮಾಡಿ ಮದ್ಯಮಾಂಸನಿಷೇಧಕರೂ ಅಹಿಂಸವೇ ವೀರವ್ರತವುಳ್ಳ ಅಗ್ರವರ್ಣಿಗಳಾದ ಜೈನರನ್ನೂ ಬ್ರಾಹ್ಮಣರನ್ನೂ, ಲಿಂಗಾಂಗಿಗಳನ್ನಾಗಿ ಮಾಡಿದಂತೆ ತಿಳಿಯುತ್ತ

CC-0. Jangamwadi Math Collection. Digitized by eGangotri

ದಾಗಲಿ, ಕೇವಲ ಪಶುಪ್ರಾಯರಾದ ಚಂಡಾಲರಿಗೆ ಬಸವೇಶ್ವರನು ಲಿಂಗವನ್ನು ಕಟ್ಟಿ ಉದ್ಧಾರಮಾಡಿದನೆಂದು ಒಂದುವಾಕ್ಯವನ್ನಾದರೂ ಯಾವ ಕವಿಯೂ ಉಲ್ಲೇಖಿಸಿಲ್ಲ.41 ಏಕಂದರೆಈಗಲು ಶ್ರೀಬಸವಜನ್ಮಸ್ಥಾನವಾದಮತ್ತು ಕಲ್ಯಾಣ ಪ್ರಾಂತಸವಿೂಪದ ಬಿಜಾಪೂರು ಜಿಲ್ಲೆಯಲ್ಲಿ ಬ್ರಾಹ್ಮಣರೇ ವೀರಶೈವರಾಗುತ್ತಾ ರೆಂಬುವುದೇಸಾಕ್ಷಿಯಾಗಿದೆ.42 ಮತ್ತೂ ಬಸವೇಶ್ವರಾದಿ ಸಾಂಪ್ರದಾಯಕರಾದ ಜೈನ ಬಣಜಿಗರೆಂಬವ್ಯಾಪಾರಿಗಳು ಲಿಂಗಾಂಗಿಗಳಾಗಿ ಈಗಲೂ ಗುರುಜಂಗಮ ಪ್ರೇಮಿಗಳಾಗಿರುವರು. ಬ್ರಾಹ್ಮಣರಲ್ಲಿ ಕೆಲವರು ಈಹೊಸಮತವನ್ನು ಅಭಿಮಾನಿಸಿದರೂ ಪೌರೋಹಿತ್ಯವನ್ನು ಪಾತ್ರ ಕಳೆದುಕೊಳ್ಳದೆ, ಯಜ್ಞೋಪವೀತರಾಗಿ, ಆರಾಧ್ಯರಾಗಿಸಿಯೋಗಿಬ್ರಾಹ್ಮಣಬಂಧುಗಳಾಗಿ ಹಾಗೆಯೇ ಉಳಿದಿರುವರು. ಈ ಆರಾಧ್ಯರೇ ಆಚಾರ್ಯರ ಸಂತತಿಯವರೆಂದೂವೀರಶೈವರೆಂದೂ ಗೊಂದಲವನ್ನೆಬ್ಬಿಸುತ್ತಿರುವರು. ಇವರ ನಿಜಚರಿತ್ರೆಯು ಮುಂದೆ ತಿಳಿಯುವದು. ಹೀಗೆ ಗೊಂದಲವನ್ನೆಬ್ಬಿಸುತ್ತಾ ಹೋದಲ್ಲಿ ಆಂಧ್ರಪ್ರಾಂತದ ವಿಪ್ರವಿನೋದಿಗಳೆಂಬ ಜಂಗಮರ 43 ಅವಸ್ಥೆಗೀಡಾದಾರೆಂಬ ಭಯವನ್ನು ಸ್ಮರಿಸಿ ನಾಚಿಕೆಯಿಂದ ಲಾದರೂ ಸುಧಾರಿಸಲಿ. ಬಸವೇಶ್ವರನು ತಾನೇ ಸ್ವತಃ ಅನೇಕರನ್ನು ಸಮಾಜಕ್ಕೆಸೇರಿಸಲಿಲ್ಲ. ಸೂಕ್ಷ್ಮವಾಗಿ ವಿಚಾರಿಸಿದರೆ ಪುರುಷೋತ್ತಮಭಟ್ಟ ಪದ್ಮಾಂಬಿಕೆಯರ ಮಗನೂ ಶ್ರೀವತ್ಸಗೋತ್ರಜನೂ ವೀರಭದ್ರಾವತಾರಮೂರ್ತಿಯೂ ಆದ ಬಿಜ್ಜಳನಿಂದ ಗೋಗಾವೆ ಗ್ರಾಮವನ್ನು ದಾನವಾಗಿಪಡೆದ ಏಕಾಂತರಾಮಯ್ಯ,ಸೊಡ್ಡಳಬಾಡರಸ,ಮುಸಿಡಿಕೌಡಯ್ಯ ಮುಂತಾದವರಿಂದಲೇಅವರವರ ಕಥೆಗಳಮೇಲಿಂದಲೇ ಇರಾಸ್ಮುಸ್ಸ Erasmus)ನು ಅಭಿವೃದ್ಧಿಮಾಡಿದಂತೆ ಸಮಾಜವುವೃದ್ಧಿಯಾದಂತೆ ತಿಳಿಯುತ್ತದೆ. 44 ಹೀಗಿದ್ದರೂ ಅಕ್ರಮವಾಗಿ ಅಪಚಾರಮತಿಯಿಂದ ಬಸವನಿಗೆ ಅಪಕೀರ್ತಿಕೊಡುವುದು ಸಂಕುಚಿತಮಾನಸಿಕ ಕೃದ್ಧ ದ್ರೋಹವೆಂದು ಖಂಡಿತವಾಗಿ ಹೇಳತಕ್ಕದ್ದಾಗಿದೆ.

ವ್ಯಭಿಚಾರವನ್ನು ದೂಷಿಸಿ, ಸ್ತ್ರೀಯರನ್ನು ಮನ್ನಿಸಿ, ಬಸವೇಶ್ವರನು ನಾಗರಿಕಪಾಶ್ಚಾತ್ಯರಿಗೆ ಮಾರ್ಗದರ್ಶಕನಾದನು. 45

ಈ ವಿಷಯದಲ್ಲಿ ರಾಜ್ಯಾಂಗವನ್ನೂ, ಜಾತಿನೀತಿಯನ್ನೂ, ಪಾಮರರಿಗೆ ದೇಶಭಾಷೆಯಲ್ಲಿ ಸಿದ್ಧಾಂತವನ್ನೂ, ಎಷ್ಟೋಬೋಧಿಸಿ ಸುಧಾರಿಸಿದ್ದರೂ, 196 ಸಾವಿರ ಪಿಂಡಪುಂಡಜಂಗಮರನ್ನು ಸಾಕಿದ್ದನೆಂದು ಅನೇಕರು ಹೇಳುವರು.

CC-0. Jangamwadi Math Collection. Digitized by eGangotri

ಇವರು ಮೂರ್ವಾಡದೇಶದಿಂದ ಬಂದರೆಂದು ಕ್ಯಾಂಬಿಲ್ ದೊರೆಯು ಬಲಪಡಿಸುವನು. 47 ಇವರು ಬಸವೇಶ್ವರನ ಗುಪ್ತಸೈನಿಕರಿದ್ದರೆಂದು ಈಗಿನವೇದತೀರ್ಥ ವಿರೂಪಾಕ್ಷ ಒಡೆಯರು ಸಹಾ ಹೇಳುವರು. 48 ಇವೆಲ್ಲವೂ ಕ್ಷುಲ್ಲಕಮತಿಯ ಆಪಾರ್ಥಕಲ್ಪನಾತರ್ಕಾಭಿಪ್ರಾಯವಿರುವದು. ಏಕಂದರೆ ಕೈಲಾಸದಲ್ಲಿ 60 ಸಾವಿರಗಣರಿದ್ದು ಅದರೊಳಗೆ 770 ಗಣರು ಭೂಲೋಕಕ್ಕೆ ಬಂದರೆಂಬುವ್ರದು ಪ್ರಸಿದ್ಧವಿರುವ್ರದರಿಂದ 196 ಸಾವಿರ ವೆಂಬುವ್ರದು ಅತಿಶಯೋಕ್ತಿಯಲ್ಲದೆ ಬೇರೊಂದಿಲ್ಲ. 49 ಪಾಲ್ಕುರಿಕೆಸೋಮನು 12 ಸಾವಿರವೆಂದೂ, 180 ಸಾವಿರವೆಂದೂ, ಪಿಡುಪರ್ತಿಸೋಮನು 2 ಸಾವಿರವೆಂದೂ, 180 ಸಾವಿರವೆಂದೂ, ಗುರುರಾಜನು 180 ಸಾವಿರವೆಂದೂ, ನಿಡುಗಲ್ ಜನ್ನಪ್ಪನು 285 ಸಾವಿರವೆಂದೂ, ಪಾಪಕವಿಯು 12 ಸಾವಿರವೆಂದೂ, ಧರಣೀಂದ್ರನು 4 ಸಾವಿರವೆಂದೂ, 1ಲಕ್ಷವೆಂದೂ, 130ಸಾವಿರವೆಂದೂ ಒಂದೊಂದುಕಡೆಯಲ್ಲಿ ಈ ಪ್ರಕಾರವಾಗಿ ಭಿನ್ನಿಸಿ ಬರೆದಿರುವ್ರದನ್ನುನೋಡಿದರೆ ಯಾವ್ರದೂ ನಂಬಲರ್ಹವಾಗುವುದಿಲ್ಲ. 50 ಆದರೆ ಜೈನವೈಷ್ಣವಾದಿಗಳಮೇಲೆ ಅಸೂಯೆಪಡದೆ ಧರ್ಮಯುದ್ಧವು ಮಾತ್ರ (ತಾತ್ವಿಕವಾಗ್ವಿಚಾರಯುದ್ಧವುಸಡೆದಿತು; ರಕ್ತಪಾತಯುದ್ಧವಾಗಲಿಲ್ಲ) ಆಗಾಗ ನಡೆದು ಜಯಶೀಲವಾಯಿತೆಂಬುವ್ರದನ್ನು ಸಂಪೂರ್ಣಲಕ್ಷದಲ್ಲಿಡತಕ್ಕದ್ದು. ಮತ್ತು ಮಿಂಡಪುಂಡಾಟಕೆಯೋ ಶ್ರೀಕೃಷ್ಣಗೋಪಿಕೆಯರ ಸಂಬಂಧದಂತೆ ಕಲ್ಪನೆಯಾಗಿದೆ. ಏಕಂದರೆ ಮಿಂಡನಾದವನು ಸೂಳೆಯನೆಗೆ ಹೋದಲ್ಲಿ ಎಂದೂ ಶಿವಪೂಜೆಯನ್ನು ಮಾಡುವ್ರದಿಲ್ಲವೆನ್ನುವ್ರದನ್ನು ಪೂರ್ಣಲಕ್ಷ್ಯಕ್ಕೆ ತಂದಲ್ಲಿ ಇದರ ಗೂಡಾರ್ಥದ ನಿಜತತ್ವವು ಕರತಲಾಮಲಕವಾಗುವ್ರದು. ಆದರೆ ಪೂಡೂರುನಿಂದ ಕಿನ್ನರಿಬ್ರಹ್ಮನು ಕಲ್ಯಾಣಕ್ಕೆ ಬರುವ ಕಾಲಕ್ಕೆ 5 ಸಾವಿರ ಜಂಗಮರಿದ್ದರೆಂದೂ, ತರುವಾಯ ಮಾಂಡವ್ಯಪುರದ 6 ಸಾವಿರ ಜಂಗಮರುಕೂಡಿ ಮೊರನ ವೇಮಯ್ಯನ ಕಾಲಕ್ಕೆ 12 ಸಾವಿರ ಜಂಗಮರಾದರೆಂದು, ಅಂತ್ಯಕ್ಕೆ 36 ಸಾವಿರ ಜಂಗಮರಿದ್ದರೆಂದೂ ಆಯಾ ಕಥೆಗಳ ಮೇಲಿಂದ ಧಾರಾಳವಾಗಿ ಊಹಿಸಿ ಹೇಳತಕದ್ದಾಗಿದೆ. 51 ಹೀಗೆಯೇ ಧರಣಿಪಂಡಿತನ 178 ಸಾವಿರಶ್ರಾವಕರು (ಜೈನಸನ್ಯಾಸಿಗಳು) ಇದ್ದರೆಂಬುವ್ರದು ಸಹ ಅಸಂಭಾವ್ಯವು. 52 ಈ 6 ಸಾವಿರ ಜಂಗಮರ ಚೋರಕಥೆಯು ಕೃಷ್ಣನಕಥೆಯಂತೆ (ನವನೀತಗೋಪಿಕಾದಿಚೋರ) ಉತ್ಪ್ರೇಕ್ಷೆಯಲ್ಲದೆ ಬೇರೆಯಲ್ಲ. ಇದರಂತೆಯೇ ಬಸವೇಶ್ವರನು ಹರಿಯ 1700 ಕುಮಾರಿಯರನ್ನು ತಂದದ್ದು ಸಹಾ ಅಸಂಬದ್ಧವೇ 53

CC-0. Jangamwadi Math Collection. Digitized by eGangotri

ನಾಲ್ಕನೆಯ ಪ್ರಕರಣ.

ಶ್ರೀ ಬಸವೇಶ್ವರನ ಮುಖ್ಯ ವಚನಗಳು.

1. ಶ್ರುತಿಗಗಮ್ಯ ದ್ವಾದಶಾದಿತ್ಯನಪ್ರತಿಮ ಮಹಿಮನುಂಗೆ ಪ್ರತಿಯುಂಟೆ "ಸೋಮಃಪವತೆ" ಯೆಂಬಶ್ರುತಿಯನರಿದು, ಶಿವಏಕೋದೇವರುದ್ರನ ದ್ವಿತೀಯನೆಂದು ನಂಬುವುದು, ಕಾಣಿರಣ್ಣಾ. ಕೂಡಲಸಂಗಮದೇವನಲ್ಲದೆ ಇಲ್ಲವೆಂದೆತ್ತಿದೆ ಬಿರಿದ ಜಗವೆಲ್ಲರಿಯಲು. ಮಹೇಶ್ವರ ಸ್ಥಲ. 2

2. ವೇದಸ್ವಯಂಭುವೆಂಬ ವಾದಿನೀ ಕೇಳೆಲವೋ. ಏಕೋದೇವರುದ್ರನದ್ವಿತೀಯನೆಂದು ನಂಬುವುದು ಕಾಣಿರಣ್ಣಾ. ಓಂ ದೇವಾಭೂಮಿಜಿನಯಂ ದೇವಾ, ಏಕೋದೇವರುದ್ರನದ್ವಿತೀಯನೆಂದು ನಂಬುವುದುಕಾಣಿರಣ್ಣಾ. ಚಕಿತಮಭಿಘತ್ತೇ ಎಂದು ಶ್ರುತಿಸಾರುತ್ತಿದ್ದಾವೆ. ಜಗದಕರ್ತಕೂಡಲಸಂಗಮದೇವ ನೊಬ್ಬನೇ ಕಾಣಿರಣ್ಣಾ. 4

3. ಶ್ರುತಿತತಿ ಶಿರದನೆಲೆ ಅತ್ಯತಿಷ್ಠದ್ದಶಾಂಗುಲನ ನಾನೇನೆಂಬೆನಯ್ಯ ಘನಕ್ಕೆ ಘನಮಹಿಮನ, ಮನಕ್ಕಗೋಚರನ ಅಣೋರಣೀಯಾನ್ ಮಹತೋಮಹಿಯಾನ್ ಮಹಾದಾನಿ ಕೂಡಲಸಂಗಮದೇವ. 5

4. ಸಕಲ ನಿಃಕಲ ಕೂಡಿಕೊಂಡಿಪ್ಪೆಯಾಗಿ, ಸಕಲನೀನೇ. ನಿಃಕಳನೀನೇ ಕಂಡಯ್ಯ. ವಿಶ್ವತೋಚಕ್ಷು ನೀನೇದೇವಾ, ವಿಶ್ವತೋಮುಖ ನೀನೇದೇವಾ. ವಿಶ್ವತೋಬಾಹು ನೀನೇದೇವಾ, ಕೂಡಲಸಂಗಮದೇವ. 6

5. ಎತ್ತೆತ್ತನೋಡಿದ ಡತ್ತತ್ತ ನೀನೆದೇವಾ. ಸಕಲ ವಿಸ್ತಾರದರೂಹು (ಅಕಾರ) ನೀನೇದೇವಾ, ವಿಶ್ವತೋಚಕ್ಷುನೀನೇದೇವಾ. ವಿಶ್ವತೋಬಾಹು ನೀನೇದೇವಾ, ವಿಶ್ವತೋಮುಖ ನೀನೇದೇವಾ. ವಿಶ್ವತೋಪಾದ ನೀನೇದೇವಾ, ಕೂಡಲಸಂಗಮದೇವ. 7

CC-0. Jangamwadi Math Collection. Digitized by eGangotri

6. ವಿಶ್ವಾಧಿಕೋರುದ್ರನಹೊಗಳುವ ಶ್ರುತಿಗಳು ವಿಶ್ವರೂಪಾಯವೈ ನಮಃ ಪರಮರೂಪಿನೇನಮಃ ಪರತತ್ವಾಯನಮಃ ಆದಿಯಾರೂಢ ಭಯಂಕರಾಯ ನಮೋ ಹರಿಯಹರಿಸಿದನೆಂದು ಶ್ರುತಿಯು ಸಾರುತಿರಲು ಸಂಹಾರಕಾರಣಾಯನಮೋ. ನಮ್ಮ ಕೂಡಲಸಂಗಮದೇವರ ಮಹನ್ಮಹದ್ಭ್ಯೋನಮಃ 10

7. ವಿಷ್ಣುಕರ್ಮಿ, ರುದ್ರನಿಷ್ಕರ್ಮಿ, ಕ್ರಮುವನರಿಯದೆನುಡಿವಿರಿ. ವೇದಶ್ರುತಿಗಳು ತಿಳಿಯಲರಿಯದೆ, ವಾದವಮಾಡುವರೆಲ್ಲಾ ಕೇಳಿ, ವಿಷ್ಣು ನಾನಾಯೋನಿಯಲ್ಲಿ, ಬಾರದ ಭವಂಗಳಲ್ಲಿ, ಬರುತಿಪ್ಪ. ರುದ್ರನಾವಯೋನಿಯಲ್ಲಿ ಬಂದನೆಂದು ನೀವ್ರಬಲ್ಲಿರಿ ಹೇಳಿರೋ. ಓಂ ವಿಷ್ಣು ಕರ್ಮಣಿಪಶ್ಯತಿಯತೋ ಶ್ರುಧಾನಿಷ್ಪಾತೇ ಇಂದ್ರಸ್ಯಯುಜಃ | ಸಂಭಾಸ್ತ್ರೀ ಣಿಪದಾವಿಚಕ್ರಮೇ | ವಿಷ್ಣೋರ್ಗೋಪಾಲದಾಭ್ಯಃ | ಆತೋಕರ್ಮಣಿಧಾರಣರ್ಯಾ ತದ್ವಿಪ್ರಾಪ್ತೋ ಸೋವಿಪನ್ಯಾವೊ ಜಾಗ್ರುವಾಸಸ್ಸಮಿಂಧತಿ ಅಷ್ಣೋರ್ಯತ್ಪರಮಂ ಪದಂ" ಎಂಬ ಶ್ರುತಿಯವಚನವಕೇಳಿ, ತಿಳಿಯಿಭೋ. ಧರ್ಮವನೆತ್ತಿನುಡಿದಲ್ಲದೆ, ನಿಲ್ಲರಿ. ನಿಮ್ಮ ಕರ್ಮವು ಅತ್ಯಕಿಷ್ಟದ್ದ ಶಾಂಗುಲದಿಂದತ್ತತ್ತಲೆ ಕೂಡಲಸಂಗಮದೇವಾ. 18

8. ಅಮೃತಮತಿ ಸೋಮ ಶಂಭುವಿಂಗೆ ಹುಟ್ಟದಾತ ಇಂದ್ರ. ಸತ್ಯ ಋಷಿ ಜೇಷ್ಠಾದೇವಿಗೆ ಹುಟ್ಟದಾತ ಬ್ರಹ್ಮ. ವಸುದೇವದೇವಕಿಗೆ ಹುಟ್ಟದಾತ ವಿಷ್ಣು. ನಾಭಿರಾಜ ಮರುತಾದೇವಿಗೆ ಹುಟ್ಟದಾತ ನರಸಿಂಹ. ಇವರೆಲ್ಲರೂ ಯೋನಿಜರೆಂಬುದು ತ್ರೈಜಗಬಲ್ಲುದು. ಉತ್ಪತ್ತಿಸ್ಥಿತಿ ಪ್ರಳಯಕ್ಕೆ ಹೊರಗಾದ ಕೂಡಲಸಂಗಮದೇವರಿಗೆ ಮಾತಾಪಿತೃಗಳುಂಟೆ ಹೇಳಿರೋ? 19

9. ಇಬ್ಬರು ಮುವ್ವರು ದೇವರೆಂದು ಉಬ್ಬುಬ್ಬಿ ಮಾತಾಡಬೇಡ. ದೇವನೊಬ್ಬನೇ ಕಾಣಿರೋ. ಇಬ್ಬರೆಂಬುದು ಹುಸಿನೋಡು, ಕೂಡಲಸಂಗಮದೇವನೊಬ್ಬನಲ್ಲದೆ, ಇಬ್ಬರಿಲ್ಲವೆಂದಿತ್ತು ದಾವೇದವು. 20

10. ವಿಷ್ಣು ಬಲ್ಲಿದನೆಂಬೆನೆ? ದಶಾವತಾರದಲ್ಲಿ ಭಂಗಬಟ್ಟುದಕ್ಕೆ ಕಡೆ ಇಲ್ಲ. ಬ್ರಹ್ಮ ಬಲ್ಲಿದನೆಂಬೆನೆ? ಶಿರಹೋಗಿನಾನಾವಿಧಿಗೊಳಗಾದ ವೇದಬಲ್ಲಿತ್ತೆಂಬೆನೆ? ನಾನಾಮುಖಗಳಲ್ಲಿಸ್ತುತಿಸಿತಲ್ಲದೆ, ಲಿಂಗದ ನಿಲುಕಡೆಯಕಾಣದು.

CC-0. Jangamwadi Math Collection. Digitized by eGangotri

ಶಾಸ್ತ್ರಬಲ್ಲಿತ್ತೆಂಬೆನೆ? ಶಬ್ದಕ್ರಿ. ಪುರಾಣಬಲ್ಲಿತ್ತೆಂಬೆನೆ? ಪೂರ್ವತ್ರಿ. ಆಗಮ ಬಲ್ಲಿತ್ತೆಂಬೆನೆ? ವಾಯುವಹೊಂದಿತ್ತು. ಇದುಕಾರಣ ನಮ್ಮ ಕೂಡಲಸಂಗ ಯ್ಯನೇನಿತ್ಯ, ಉಳಿದ ದೈವಂಗಳೆಲ್ಲ ಅನಿತ್ಯ ಕಾಣಿರೋ. 34

11. ಹಾಳುಮೊರಡಿಗಳಲ್ಲಿ, ಊರದಾರಿಗಳಲ್ಲಿ, ಕೆರೆಬಾವಿಹೊಗಿಡು ಮರಂಗಳಲ್ಲಿ, ಗ್ರಾಮದಮಧ್ಯದಲ್ಲಿ, ಜೌಪಥಪಟ್ಟಣಪ್ರದೇಶದಲ್ಲಿ, ಹಿರಿಯಾಲದ ಮರದಲ್ಲಿ, ಮನೆಮಾಡಿ ಕರವೆಮ್ಮೆಯಹಸಗೂಸು, ಬಸಿರಿ, ಬಾಣಂತಿ, ಕುಮಾ ರಿತಿ, ಕೊಡಗೂಸೆಂಬುವರ, ಹಿಡಿದುಂಬತಿರದುಂಬ ಮಾರಯ್ಯ, ಬೀರಯ್ಯ ಪೇಚರಗಾವಿಲ, ಅಂತರ ಜಿಂತರ, ಕಾಳಯ್ಯ, ಮಾಳಯ್ಯ, ಕೇತಯ್ಯಗಳೆಂಬ ನೂರು ಮಡಿಕೆಗೆ ನಮ್ಮಕೂಡಲ ಸಂಗಮದೇವರಿಗೆ ಶರಣೆಂಬುದೊಂದು ದೊಣ್ಣೆಸಾಲದೇ. 29

12. ಬ್ರಾಹ್ಮಣನೇ ದೈವವೆಂದು ನಂಬಿದಕಾರಣ ಗೌತಮಮುನಿಗೆ ಗೋವಧೆಯಾಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದಕಾರಣ ಬಲಿಗೆ ಬಂಧನವಾಯಿತ್ತು. ಬ್ರಾಹ್ಮಣನೇ ದೈವವೆಂದುದಕ್ಷಂಗೆ ಕುರಿದೆಲೆಯಾಯಿತ್ತು. ಬ್ರಾಹ್ಮಣನೇ ದೈವವೆಂದು ನಂಬಿದಕಾರಣ ಪರಶುರಾಮ ಸಮುದ್ರಕ್ಕೆ ಗುರಿ ಯಾದ. ಬ್ರಾಹ್ಮಣನೇ ದೈವವೆಂದು ನಂಬಿದಕಾರಣ ನಾಗಾರ್ಜುನನತಲೆ ಹೋ ಯಿತ್ತು ದೇವಭಕ್ತರೆಂದು ನಂಬಿದಕಾರಣ ನಮ್ಮ ಕೂಡಲ ಸಂಗನಶರಣರು ಕೈಲಾಸವಾಸಿಗಳಾದರು. 40

13. ಆದಿಪುರಾಣ ಅಸುರರಿಗೆಮಾರಿ. ವೇದಪುರಾರಣ ಹೋತಿಂಗೆಮಾರಿ ರಾಮಪುರಾಣ ರಕ್ಕಸರಿಗೆ ಮಾರಿ. ಭಾರತ ಪುರಾಣ ಗೋತ್ರಕ್ಕೆಮಾರಿ. ಇ ವೆಲ್ಲ ಪುರಾಣ ವ್ರತಕರ್ಮಕ್ಕೆ ಮೊದಲು ನಿಮ್ಮಪುರಾಣಕ್ಕೆ ಪ್ರತಿಯಿಲ್ಲ ಕೂಡಲ ಸಂಗಮದೇವಾ. 41

14. ನೀರುಕಂಡಲ್ಲಿ ಮುಳುಗುವರಯ್ಯ ಮರನಕಂಡಲ್ಲಿ ಸುತ್ತುವರಯ್ಯ. ಬತ್ತುವ ಜಲವ ಒಣುಗುವ ಮರನ ನೆಚ್ಚಿದವರು ನಿಮ್ಮನೆತ್ತಬಲ್ಲರೊ ಕೂಡಲ ಸಂಗಮದೇವಾ 49

15 ಎನಿಸನೋದಿದಡೇನು, ಎನಿಸಕೇಳಿದೊಡೇನು. ಚತುರ್ವೇದ ಸಾತತೀಪ್ರವಾದಡೇನು, ಲಿಂಗಾರ್ಚನೆ ಹೀನವಾದಡೆ ಶಿವ ಶಿವಾ ಬ್ರಾಹ್ಮಣನೆಂ

CC-0. Jangamwadi Math Collection. Digitized by eGangotri

ಪೆಂಬೆನೆ! ಎನ್ನಲಾಗದು. "ಜನ್ಮನಾಜಾಯತೇಶೂದ್ರಃ । ಕ್ರಿಯಯಾಂ ಜಾಯತೇದ್ವಿಜಃ ॥ ಬ್ರಹ್ಮಜಾನಾತೀತಿ ಬ್ರಾಹ್ಮಣಃ" ಎಂದುದಾಗಿ, ಕೂಡಲಸಂಗಮದೇವ ವೇದಭಾರ ಭರಾಕ್ರಾಂತಿಕೋ ಬ್ರಾಹ್ಮಣೋಗಾರ್ದಭನೆಂಬೆನು.56

16. ವ್ಯಾಸ ಜೋಯಿತಿಯಮಗ, ಮಾರ್ಕಂಡೇಯ ಮಾತಂಗಿಯಮಗ ಮುಂತೋದರಿ ಕಪ್ಪೆಯಮಗಳು, ಕುಲವನರಸದಿರಿ, ಭೋ. ಕುಲದಿಂದ ಮುನ್ನೇನಾದರಿ ಭೋ. ಸಾಕ್ಷಾತ್ ಅಗಸ್ತ್ಯ ಕಚ್ಚಿಲಿಗ, ದುರ್ವಾಸ ಮುಚ್ಚಿಗ, ಕಶ್ಯಪ ಕಮ್ಮಾರ, ಕೌಂಡಿಲ್ಯ ನೆಂಬ ಋಷಿ ಮೂರುಲೋಕವರಿಯಲು ನಾಯಿಪ ಕಾಣಿರೊ ಕೂಡಲಸಂಗನ ವಚನ ವಿಂತೆಂದುದು, ಶ್ವಪಚೋಪಿ ಮುನಿಶ್ರೇಷ್ಠೋ ಯಸ್ತುಲಿಂಗಾರ್ಚನೇರತಃ । ಲಿಂಗಾರ್ಚನವಿಹೀನಶ್ಚ ದ್ವಿಜೋಪಿಜಾಧಮಃ ॥ ಆದುಕಾರಣ ಶ್ವಪಚ ನಾದರೇನು ಶಿವಭಕ್ತನೇಕುಲಜ ಭೋ. 57

17. ಹೋತಿಗಂಡಲ್ಲದೆ ಪಿಂಡದನೆಲೆಗಾಶ್ರಯವೆಲ್ಲ. ಜಲಬಿಂದುವಿನ ವ್ಯವಹಾರ ಒಂದೇ. ಆಕೆಯಾಮಿಷಹರುಷವಿಷಯಾದಿಗಳೆಲ್ಲಾ ಒಂದೇ. ಏನನೋದಿ ಏನಕೇಳಿ ಏನುಫಲ? ಕುಲಜ ನೆಂಬುದಕ್ಕೆ ಆವುದುದೃಷ್ಟಾಂತ? "ಸಪ್ತಧಾತು ಸಮುಂಪಿಂಡಂ । ಸಮುಯೋನಿಸಮುದ್ಭವಂ ॥ ಆತ್ಮಜೀವಸಮಾಯುಕ್ತಂ ಪರ್ಣಾನಾಂ ಕಿಂಪ್ರಯೋಜನಂ" ಎಂದುದಾಗಿ ಕಾಸಿಕಮ್ಮಾರನಾಪ, ಬೀಸಿ ಮಡಿವಾಳನಾದ, ಹಾಸನಿಕ್ಕಿ ಸಾಲಿಗನಾದ, ವೇಡವನೋದಿ ಹಾರುವನಾದ, ಕರ್ಣದೊಳಗೆ ಜನಿಸಿದವರುಂಟೇ ಜಗದೊಳಗೆ? ಇದುಕಾರಣ ಕೂಡಲಸಂಗಮದೇವ ಲಿಂಗನರಿತವನೇ ಕುಲಜನು. 58

18. ಕೊಲ್ಲುವನೇ ಮಾದಿಗನು, ಹೊಲಸುತಿಂಬುವನೇ ಹೊಲೆಯ. ಕುಲವೇನೋ ಆವಂದಿರಕುಲವೇನೋ? ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲಸಂಗನ ಶರಣರೆಲ್ಲ ಕುಲಜರು 59

19. ವೇದವನೋದಿದರೇನು, ಶಾಸ್ತ್ರವಕೇಳಿದರೇನು, ಜಪವಮಾಡಿದರೇನಯ್ಯ? ತಪವಮಾಡಿದರೇನು? ಏನುಮಾಡಿದರೇನು? ನಮ್ಮ ಕೂಡಲಸಂಗಮದೇವನ ಮನಮುಟ್ಟ ನೆನೆಯ ದನ್ನಕ್ಕರ? 64

20. ನೀವು ಹಿರಿಯರೆಂಬಿರಿ, ನೀವು ಕರ್ಮಿಗಳು ಕೇಳಿರಿ. ನಿಮ್ಮ ವೇದ ಶಾಸ್ತ್ರಂಗಳು ಆರ ಹೊಗಳುತ್ತಿರುವವು? "ವಿವಾಭೂಮಿಜನಯಂದೇವ

CC-0. Jangamwadi Math Collection. Digitized by eGangotri

ಏಕೋದೇವ" ಎಂದು ಶ್ರುತಿಸ್ಮೃತಿಗಳು ಸಾರುತ್ತಿರುವವು. "ವರ್ಣಾನಾಂ ಬ್ರಾಹ್ಮಣೋಗುರುಃ" ಯೆಂಬುದು ಹುಸಿ. ವರ್ಣಾನಾಂಗುರು ನಮ್ಮ ಕೂಡಲಸಂಗನ ಶರಣರು. 65

21. ಭಕ್ತಿಹೀನನ ದಾಸೋಹವ ಸದ್ಭಕ್ತರು ಸವಿಯರು. ಬೇವಿನ ಹಣ್ಣು ಕಾಗೆಗೆ ಇನಿದಲ್ಲದೆ, ಕೋಗಿಲೆಮೆಲ್ಲಲು ಬಾರದು. ಲಿಂಗಸಂಬಂಧ ವಿಲ್ಲದವರನುಡಿ, ಕೂಡಲಸಂಗನ ಶರಣರಿಗೆ ಸಮನಿಸದು. 72

22. ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ ಗ್ರಹಣ. ಗ್ರಹಣದಿಂದ ಸಂಕ್ರಾಂತಿ ವೆಗ್ಗಳ. ಸಂಕ್ರಾಂತಿಯಿಂದ ವೆಗ್ಗಳ ಏಕಾದಶಿ. ವ್ಯತಿಪಾತದಿಂದ ವೆಗ್ಗಳ ಸೂಕ್ಷ್ಮ. ಶಿವಪಥವನರಿಯದವಗೆ ಹೋಮ, ನೇಮ, ಜಪ ತಪದಿಂದ ವೆಗ್ಗಳ ಕೂಡಲಸಂಗಮದೇವರ ನಾಣದೆನಮ್ಮಾಣದೆ ನೆನೆವಂಗೆ. 75

23. ದೇವನೊಬ್ಬ ನಾಮಹಲವು, ಪರಮಪತಿವ್ರತೆಗೆ ಗಂಡನೊಬ್ಬ, ಮತ್ತೊಂದಕ್ಕೆರಗಿದರೆ, ಕಿವಿಮೂಗ ಕೊಯ್ಯುವನು. ಹಲವು ದೈವದ ಎಂಜಲ ತಿಂಬುವರನೇನೆಂಬೆನಯ್ಯ ಕೂಡಲಸಂಗಮದೇವಾ ? 79

24. ದ್ವಿಜರಿಗೆಕೊಟ್ಟು ಹಲಬರು ಕೆಟ್ಟರು. ಉದ್ಧರಿಸುವನೊಬ್ಬ ಶಿವ ಶರಣನಾಲದೇ? ನಾರಾಯಣ ವೃದ್ಧಬ್ರಾಹ್ಮಣನಾಗಿಬಂದು ಬಲಿಯಭೂಮಿಯ ದಾನವ ಬೇಡಿದ. ಕೊಟ್ಟ ಬಲಿ. ಬಂಧನಕ್ಕೊಳಗಾದ. ಈಶಜಂಗಮವಾಗಿ ಬಂದು, ದಾಸನ ವಸ್ತ್ರವ ಬೇಡಿದ. ಕೊಟ್ಟ ದಾಸ, ತವನಿಧಿಯಪಡೆದ. ನಾರಾಯಣ ಹಾರುವನಾಗಿಬಂದು ಕರ್ಣನ ಕವಚವ ಬೇಡಿದ. ಕೊಟ್ಟ ಕರ್ಣ. ಕಾಳಗದಲ್ಲಿ ಮಡಿದ. ಕಾಮಾರಿ ಜಂಗಮನಾಗಿಬಂದು ಶಿರಿಯಾಳನ ಮಗನ ಬೇಡಿದ. ಕೊಟ್ಟ ಶಿರಿಯಾಳ. ಕಂಚಿಯಪುರವ ಕೈಲಾಸಕ್ಕೊಯ್ದ. ಇದುಕಾರಣ ಇಲ್ಲಿಯೂಲೇಸು, ಅಲ್ಲಿಯೂಲೇಸು. ಕೊಡಿರೇ ನಮ್ಮ ಕೂಡಲಸಂಗನ ಶರಣರಿಗೆ. 87

25. ಉಂಬಲ್ಲಿ ಉಡುವಲ್ಲಿ ಕುಲವಳಿಯಿತೆಂಬರು, ಕೊಂಬಲ್ಲಿ ಕೊಡುವಲ್ಲಿ ಕುಲವನರಸುವ ಮಾದಿಗರ ನೇನೆಂಬೆನಯ್ಯ ? ಇವರೆಂತು ಭಕ್ತರೆಂಬೆ

CC-0. Jangamwadi Math Collection. Digitized by eGangotri

ನಯ್ಯ? ಇವರೆಂತು ಯುಕ್ತರೆಂಬೆನಯ್ಯ? ಇವರು ವಚ್ಚೊಚ್ಚಿ ಭಕ್ತರು. ಇವರು ವಚ್ಚೊಚ್ಚಿ ಭವಿಗಳು. ಅದೆಂತೆಂದೊಡೆ ಲೈಂಗ್ಯೇಃ—"ಸ್ತ್ರೀವಾ ಪುರು ಷಷ್ಷಂಡ ಶ್ಚಂಡಾಲ ದ್ವಿಜವಂಶಜಃ, ನಜಾತಿಭೇದೋ ಲಿಂಗಾರ್ಚನೆ ಸರ್ವೆ ರುದ್ರಗಣಾಃ ಸ್ಮೃತಾಃ" ಎಂದುದಾಗಿ ಇಂತೆಂಬ ಪುರಾಣವಾಕ್ಯನತಿಳಿದು ನೋಡಿರೆ. ಸರ್ವರೂ ರುದ್ರಗಣಂಗಳೆಂಬೆ. ಸರ್ವರೂ ಸದ್ಭಕ್ತರೆಂಬೆ. ಅವರಲ್ಲಿ ಕುಲವನೋಡದೆ ಆಚಾರವನೋಡಿ. ಅವರಿಗೆ ಬೇಕಾದ ಹಣ್ಣು ಕೊಟ್ಟು ತನಗೆ ಬೇಕಾದುದು ತೆಗೆದುಕೊಂಬುವದು. ಈ ಕ್ರಮವನರಿಯದವನಭಕ್ತಿ ಹೊಲತಿ ಶುದ್ಧನೀರ ಮಿಂದಂತಾಯಿತ್ತು ಕೂಡಲಸಂಗಮದೇವ. 93

26. ಮಾರಿ ಮಸಣಿ ಎಂಬಿವು ಬೇರಿಲ್ಲ ಕಾಣಿರೋ, ಮಾರಿಯಂಬು ದೇನೋ? ಕಂಗಳತಪ್ಪಿ ನೋಡಿದರೆ, ಮಾರಿ. ನಾಲಿಗೆತಪ್ಪಿ ನುಡಿದಠೆ ಮಾರಿ. ನಮ್ಮ ಕೂಡಲಸಂಗಮದೇವರ ನೆನಹಮರೆದರೆ ಮಾರಿ. 94

27. ತೊತ್ತಿನ ಕೊರಳಲ್ಲಿ ಹಿತ್ತಾಳಿಯ ಸಿಂಗಾರವ ಮಾಡಿದಂತೆ ಕುಚಿ ತ್ತರ ಸಂಗೆ ಸುಸಂಗಿಗೆ ಸಂಗನಲ್ಲ. ಗುರುಗುಂಜಿ ಮಾಣಿಕಗೆ ಸರಿಯಪ್ಪುದೆ ಕೂಡಲಸಂಗಮದೇವ. 100

28. ಇಂದ್ರಿಯ ನಿಗ್ರಹಮಾಡಿದರೆ, ಹೊಂದುವವ್ರ ದೋಷಂಗಳು. ಮುಂದೆ ಕಾಡುವವು ಪಂಚೇಂದ್ರಿಯಂಗಳು. ಸತಿಪತಿ ರತಿಸುಖವಬಿಟ್ಟರೆ, ಸಿರಿಯಾಳ ಚಂಗಳೆಯರು? ಸತಿಪತಿರತಿ ಸುಖ ಭೋಗೋಪಭೋಗಬಿಟ್ಟರೆ ಸಿಂಧುಬಲ್ಲಾ ಳರು? ನಿಮ್ಮ ಮುಟ್ಟ, ಪರಧನ, ಪರಸ್ತ್ರೀಯರಿಗೆ ಎಳೆಸಿದರೆ ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವಯ್ಯ. 103

29. ಲಿಂಗಜಂಗಮವು ಒಂದೇ ಎಂದು ನಂಬಿದ ಬಳಕ, ಅವರಂಗನೆ ಯರು ಲಿಂಗದ ರಾಣಿವಾಸ. ಅಲ್ಲಿಯೂಮೇಳ, ಇಲ್ಲಿಯೂಮೇಳ, ಚೌಡೇಶ್ವರಿ ಯಲ್ಲಿಯೂಮೇಳ. ಮಾತೆಯಂಬ ಭಾವತಪ್ಪಿ ಆಪ್ಪಿದವರ ತಲೆಯಕೊಂಬ ಕೂಡಲಸಂಗಮದೇವ. 104

30. ಒಡೆಯರು ತಮ್ಮ ನುನೆಗೆ ಒಡಗೊಂಡು ಹೋದರೆ, ತುಡುಗುಣಿ ತನದಲ್ಲಿ ಪರವಧುವನೋಡುವ ಸರಸಬೇಡವೋ ಕಾಣಿರಣ್ಣಾ. ಒಡೆಯ ನರ

CC-0. Jangamwadi Math Collection. Digitized by eGangotri

ಸಿಯ ಸರಸಬೇಡವೋ, ಕೂಳಸೊಕ್ಕು ತಲೆಗೇರಿ ರಾಣೀವಾಸದೊಡನೆ ಸರಸ ಬೇಡವೋ. ಕೂಲಸಂಗಮದೇವನು ಕರೆಯಿಸಿ ತಗನಯ್ಯ. 105

31. ನೋಡಲಾಗದು ನುಡಿಯಲಾಗದು. ಸರಸ್ತ್ರೀಯರ ಬೇಡಕಾಣೆಯೋ. ತಗರ ಬೆನ್ನಿನಲ್ಲಿ ಹರಿವಸೊಣಗನಂತೆ ಬೇಡಕಾಣೆಯೋ, ಒಂದಾಸೆದೆ ಸಾಸಿರವರುಷ ನರಕದಲ್ಲಿಕ್ಕುವ ಕೂಡಲ ಸಂಗಮದೇವಯ್ಯ. 106

32. ತೊರೆಯವಿಾವ ಅಣ್ಣಗಳಿರಾ, ತೊರೆಯವಿಾವ ಸ್ವಾಮಿಗಳಿರಾ, ತೊರೆಯಿಂಭೋ ತೊರೆಯಿಂಭೋ, ಪರನಾರಿಯಸಂಗ ತೊರೆಯಿಂಭೋ, ಪರಧನದಾಸೆಯಾವಿಷವ, ತೊರೆಯಿಂಭೋ, ಇವತೊರೆಯದೆಹೋಗಿ, ತೊರೆಯವಿಂದಿರೆ ಬರುದೊರೆ ಹೋಹುದು ಕೂಡಲಸಂಗಮದೇವ. 107

33. ಕುಳ್ಳಿರ್ದಲ್ಲಿ ಲಿಂಗವಪೂಜಿಸಿ, ಅಲ್ಲದಾಟವನಾಡುವರಯ್ಯ. ಜಿಳ್ಳಿತ್ತಿನ ಮರೆಯಲ್ಲಿರ್ದು, ಹುಲ್ಲೆಗೆಂಬತೊಡುವಂತೆ ಕಳ್ಳಡಾದರಿಗರ ಕೈಯಲ್ಲಿ ಪೂಜೆಯಕೊಳ್ಳಸಮ್ಮ ಕೂಡಲಸಂಗಮದೇವ. 109

34. ತನುಶುಚಿಯಿಲ್ಲದವನ ದೇಹವದೇತಕೆ? ದೇವರು ಕೊಡನೆಂಬ ಭ್ರಾಂತಿಯದೇತಕೆ? ಮನಕ್ಕೆಮನಸಾಕ್ಷಿಸಾಲದೆ, ಲಿಂಗತಂದೆ? ಹ್ಯಾಗೆ ಮನ. ಹಾಗೆಘನತಪ್ಪುದು ಕೂಡಲಸಂಗಮದೇವಾ. 111

35. ಪಾಪಿಗೆಕೋಪಿಗೆ ಭಕ್ತಿಯಾಗೆಂದಡೆ ಅಪ್ಪುದೆ? ನಾಯಿಗೆ ನಾರಿವಾಣವಕ್ಕುದೆ, ಕೂಡಲಸಂಗಮದೇವಾ, ನಿಮ್ಮ ನಂಬಿಯೂ ನಂಬದಡಂಭಕಂಗೆ? 112

36. ಸದಾಚಾರಸದ್ಭಕ್ತಿಯಿಲ್ಲ ದವರನಾನೊಲ್ಲೆನಯ್ಯ. ಅವರಾರಾಧನೆಡಂಡ. ನಿಚ್ಚನಿಚ್ಚಪ್ರಾಯಶ್ಚಿತ್ತರನೊಲ್ಲನಯ್ಯ ಕೂಡಲಸಂಗಮದೇವ, ಭೂಮಿಭಾರಕರಾ. 114

37. ನೂರನೋದಿ. ನೂರಕೇಳಿದರೇನು, ಆಸೆಪರಿಯದು, ರೋಷ ಬಿಡದು. ಮಜ್ಜನಕ್ಕೆರೆದು ಫಲವೇನು? ಮಾತಿನಂತೆನುನವಿಲ್ಲದ ಜಾತಿಪೊಂಬರ ನೋಡಿನಗುವನಮ್ಮ ಕೂಡಲಸಂಗಮದೇವಾ. 116

CC-0. Jangamwadi Math Collection. Digitized by eGangotri

38. ಅವರನಡೆಒಂದುನುಡಿಯೊಂದಾಡರೆ, ಶಿವಾಚಾರಕ್ಕವರುಸಲ್ಲರಯ್ಯ. ಒಲ್ಲನು. ಸಾತ್ವಿಕರಲ್ಲದವರನೊಲ್ಲನು. ಶಿವಾಚಾರವಬಲ್ಲನು. ಅಲ್ಲ ನಿಲ್ಲನು. ಪ್ರಪಂಚಿಯನೊಲ್ಲನು ಕೂಡಲಸಂಗಮದೇವಾ. 120

39. ಕೋಣನಹೇರಿಂಗೆ ಕುನ್ನಿಬುಸುಕುತ್ತ ಬರುವಂತೆ, ತಾವುನಂಬರು. ನಂಬುವರನಂಬಲೀಯರು. ತಾವುಮಾಡರು, ಮಾಡುವರನುಮಾಡಲೀಯರು. ಮಾಡುವ ಭಕ್ತರಕಂಡು ಸೈರಿಸಲಾರದವರ ಕೂಗೇಡಿಕೂಗೇಡಿ ನರಕದಲ್ಲಿಕ್ಕುವ ಕೂಡಲಸಂಗಮದೇವ. 128

40. ಫಲಬೇಕುಶರಣಂಗೆ ಪರಧನವನೊಲ್ಲೆನೆಂಬ, ಫಲಬೇಕುಶರಣಂಗೆ ಪರಸತಿಯರನೊಲ್ಲೆನೆಂಬ, ಫಲಬೇಕುಶರಣಂಗೆ ಪರದೈವವನೊಲ್ಲೆನೆಂಬ, ಫಲಬೇಕುಶರಣಂಗೆ ಲಿಂಗಜಂಗಮವು ಒಂದೇಯಂಬ, ಫಲಬೇಕುಶರಣಂಗೆ ಪರವಾದಿನಿಗ್ರಹದಲ್ಲಿ, ಫಲಬೇಕುಶರಣಂಗೆ ಪ್ರಸಾದದಿಟವೆಂಬ, ಫಲವಿಲ್ಲದವರ ಮೆಚ್ಚನಮ್ಮ ಕೂಡಲಸಂಗಮದೇವ. 139

41 ಜಂಬೂದ್ವೀಪನವಖಂಡಪೃಥ್ವಿಯೊಳಗೆ ಕೇಳಿರಣ್ಣಾ ಎರಡಾಳಿನ ಭಾಷೆಯ. ಕೊಲುವನೆಂಬಭಾಷೆದೇವನದು, ಗೆಲುವನೆಂಬ ಭಾಷೆಭಕ್ತನದು, ಸತ್ಯವೆಂಬ ಕೂರಲಗನೆಕಳದುಕ್ಕೊಂಡು ಸದ್ಭಕ್ತರು ಗೆದ್ದರು ಕಾಣಾಕೂಡಲ ಸಂಗಮದೇವಾ: 140

42. ಶಿವಭಕ್ತನಾಗಿ ತನ್ನಹಿಡಿದಿಹನೆಂದರೆ, ನುಗ್ಗುಮಾಡುವ, ನುಸಿಯು ಮಾಡುವ, ಮಣ್ಣುಮಾಡುವ, ಮಸಿಯುಮಾಡುವ. ಕೂಡಲಸಂಗಮದೇವರ ನೆನೆನಂಬಿದನಾದರೆ, ಕಡೆಗೆತನ್ನಂತೆಮಾಡುವ. 147

43. ವೇದಶಾಸ್ತ್ರವ ಬಲ್ಲವರಹಿರಿಯರೆಂಬೆನೆ? ಮಾಯಾಭ್ರಾಂತಿ, ಕವಿತಜ್ಞರ ಹಿರಿಯರೆನ್ನ. ಇವರು ಹಿರಿಯರುಗಳೇ, ಯಾಗನಟ್ಟುವಿಗೆ ಪ್ರಾಣರು? ಇವರಿಂದಧಿಕಸಾಧಿಸುವರೇನು ಕಿರಿಯರೇನು? ಇಂತು ವಿದ್ಯಾಗುಣಜ್ಞಾನ ಧರ್ಮವಿಚಾರಶೀಲಂಗಳ ನಮ್ಮ ಕೂಡಲಸಂಗನ ಶರಣರು ಸಾಧಿಸಿದ ಸಾಧನೆಯ ಸಾಧಿಸುವದು. 77

44. ಜಾಗ್ರತ್ ಸ್ವಪ್ನಸುಷುಪ್ತಿಯಲ್ಲಿ ಮತ್ತೊಂದನೆನೆದೊಡೆ ತಲೆದಂಡ, ತಲೆದಂಡ. ಹುಸಿಯಾದೊಡೆತಲೆದಂಡ, ತಲೆದಂಡ. ಕೂಡಲಸಂಗಮದೇವ, ನೀವಲ್ಲದೆ ಅನ್ಯವನೆನೆದೊಡೆ ತಲೆದಂಡ, ತಲೆದಂಡ. ಮಹೇಶ್ವರನ ಸುಹೇಶ

CC-0. Jangamwadi Math Collection. Digitized by eGangotri

45. ಗರುಡಿಯಕಟ್ಟಿ, ಅರವತ್ತುನಾಲ್ಕು ಕೋಲೇ ಅಭ್ಯಾಸಮಾಡಿದೆನಯ್ಯ. ಇರಿವಗಾಯದಖಂಡೆಯದಭೇದವನಿನ್ನುತಿಳಿಯೆನು. ಪ್ರತಿ ಗರುಡಿಕಾರಬಿರುದಿನ ಪಾಡಿಂಗೊಡಗಲು, ವೀರಪಟ್ಟಿಯಕಟ್ಟಿ ತಿಗುರನೇರಿಸಿ, ಗುರುಕಳನನೇರಿ ಕಠಾರಿಯ ಕೊಂಡಲ್ಲಿಯೇ ಹೋಯಿತ್ತಾಗಳೇ ಎಂದರೆ ಎನ್ನನಿನ್ನಲ್ಲಿ ನೋಡು ಕೂಡಲಸಂಗಮದೇವ. 11

46. ನಾನು ಆರಂಬವಮಾಡುವೆನಯ್ಯ ಗುರುಪೂಜೆಗೆಂದು, ನಾನುಜೀವಹಾರವಮಾಡುವೆನಯ್ಯ, ಲಿಂಗಾರ್ಚನೆಗೆಂದು, ನಾನು ಪರಸೇವೆಯಮಾಡುವೆನಯ್ಯ, ಜಂಗಮದಾಸೋಹಕ್ಕೆಂದು. ನಾನಾವ ಕರ್ಮಂಗಳಮಾಡದಡೆಯೂ, ಆಕರ್ಮದ ಫಲಭೋಗವನೀಕೊಡುವೆನೆಂಬುದನಾನು ಬಲ್ಲೆನಾಗಿ, ನೀಕೊಟ್ಟದ್ರವ್ಯವನಿನಗೆಲ್ಲದೆ, ಮತ್ತೊಂದಕ್ಕೆ ಮಾಡೆನು. ನಿಮ್ಮ ಸೊಮ್ಮು ನಿಮ್ಮಗೆ ಸಲ್ಲಿಸುವೆನುಕೂಡಲ ಸಂಗಮದೇವ. ಮಹೇಶ್ವರನಭಕ್ತ. 5

47. ಅಣ್ಣತಮ್ಮ ಹೆತ್ತಪ್ಪಗೋತ್ರವಾದರೇನು? ಲಿಂಗಸಾಹಿತ್ಯವಿಲ್ಲದವರ ಎನ್ನವರೆನ್ನೆನಯ್ಯಾ. ನಂಟುಭಕ್ತನಾಯಕನರಕ ಕೂಡಲಸಂಗಮದೇವ. 10

48. ಒಡೆಯರಿಲ್ಲದ ಮನೆಯ ತುಡುಗುಣಿನಾಯಿ ಹೋಗುವಂತೆನೀನಿಲ್ಲದವರಮನೆಯ ಹೊಗೆಸು. ಸಂಗಯ್ಯ ಶ್ವಪಜೋಪಿಗಳಾಗಲಿ ಕೂಡಲಸಂಗಯ್ಯನೀನಿದ್ದವನೇ ಕುಲಜನು. 11

49. ಹೊನ್ನುಹೆಣ್ಣುಮಣ್ಣೆಂಬಕರ್ಮದ ಬಲೆಯಲ್ಲಿಸಿಲುಕಿ ವೃಥಾ ಬರುದೊರೆ ಹೋಹ ಕೆಡುಕ ಹಾರುವನಾನಲ್ಲ. ಹಾರುವನಯ್ಯ ನಿಮ್ಮ ಭಕ್ತರ ಬರವ, ಗುಡಿಗಟ್ಟಹಾರುವೆನಯ್ಯ. ನಿಮ್ಮಶರಣರ ಬರವ ಕೂಡಲಸಂಗಮದೇವ ವಿಪ್ರಕರ್ಮವಬಿಡಿಸಿ ಅಶುದ್ಧನ, ಶುದ್ಧನಮಾಡಿದನಾಗಿ. 12

50. ಆವಕುಲವಾದರೇನು, ಶಿವಲಿಂಗವಿದ್ದವನೇ ಕುಲಜನು. ಕುಲವನರಸುವರೇ ಶರಣರಲ್ಲಿ ಜಾತಿಸಂಕರನಾದಬಳಿಕ? ಇದರ್ಕೆ ಪ್ರಮಾಣಂ ಶಿವೇ ಜಾತಕುಲೇಧರ್ಮ, ಪೂರ್ವಜನ್ಮ ವಿವರ್ಜಿತಂ | ಉಮಾಮಾತಾ ಪಿತಾರುದ್ರ ಈಶ್ವರಃ ಕುಲಮೇವಚ || ಎಂದುದಾಗಿ ಒಕ್ಕುಡಕೊಂಬಿನವರಲ್ಲಿ ಕೂಸ ಕೊಡುವೆ. ಕೂಡಲಸಂಗಮದೇವಾ, ನಂಬುವೆನು ನಿಮ್ಮಶರಣರನು. 14

CC-0. Jangamwadi Math Collection. Digitized by eGangotri

JNANA SIMHASAN JNANAMANDIR
LIBRARY
Jangamawadi Math, Varanasi
Acc. No. 4484

51. ಕೊಲ್ಲೆನಯ್ಯ ಪ್ರಾಣಿಗಳನು, ಮೆಲ್ಲೆನಯ್ಯೆ ಬಾಯಿಚ್ಚಿಗೆ, ಒಲ್ಲೆನಯ್ಯ ಪರಸತಿಯಸಂಗವ. ಒಲ್ಲೆನಯ್ಯ ಮುಂದೆ ತೊಡಕುಂಟೆಂಬುವ. ಬಳ್ಳವಬಾಯಂತೆ ಒಂದೇಮನವಮಾಡಿ, ನಿಲ್ಲೆಂದು ನಿಲ್ಲಿಸಯ್ಯ ಕೂಡಲಸಂಗಮದೇವ. ಮಹೇಶ್ವರನ ಪ್ರಾಣಲಿಂಗ. 1

52. ಶಿವಲೋಕಕ್ಕೆ ಬೇರೆಲೋಕವಿಲ್ಲ. ಶಿವಮಂತ್ರಕ್ಕೆ ಬೇರೆಮಂತ್ರವಿಲ್ಲ ಜಗಕ್ಕೆ. ಇಕ್ಕಿದೆ ಮುಂಡಿಗೆಯನೆತ್ತಿಕೊಳ್ಳಿ. ಕೂಡಲಸಂಗಯ್ಯನೊಬ್ಬನೇ ದೈವವೆಂದು. ಮಹೇಶ್ವರನ ಶರಣ. 9

53. ಊರಮುಂದೆ ಹಾಲಹಳ್ಳ ಹರಿವುತ್ತಿರಲಿ, ನಾಳೆ ಆವಿನಬೆನ್ನಲಿ ಹರಿಯಲಿ. ಅದೇಕಯ್ಯ? ಲಜ್ಜೆಗೆಡಲೇಕೆ? ನಾಣುಗೆಡಲೇಕೆ? ಕೂಡಲಸಂಗಮದೇವರುಳ್ಳನ್ನಕ್ಕರ ಬಿಜ್ಜಳನ ಭಂಡಾರ ಎನಗೇಕಯ್ಯ? 17

54. ಕಂಡುದಕ್ಕೆಳಸದೆನ್ನಮನದಲ್ಲಿ. ನೋಡಿ ಸೋಲೆ ನೆನ್ನಕಂಗಳಲ್ಲಿ ಆಡಿಸುಸಿಯೆ ನೆನ್ನಜಿಂಹೆಯಲ್ಲಿ ಕೂಡಲಸಂಗಮದೇವ, ನಿಮ್ಮಶರಣರಪರಿ ಇಂತುಟಯ್ಯ. 19

55. ಆಪ್ಯಾಯನಕ್ಕೆ (ತೃಪ್ತಿ) ಅನ್ನವ ನೀಡುವೆ. ಲಾಂಛನಕ್ಕೆ ಶರಣೆಂಬೆ. ಲಾಂಛನಕ್ಕೆತಕ್ಕ ಆಚಾರವಿಲ್ಲದಿದ್ದರೆ, ನೀ ಸಾಕ್ಷಿಯಾಗಿ ಛೇಎಂಬೆನು ಕೂಡಲಸಂಗಮದೇವ. 20

56. ದಾಸನಂತೆ ತವನಿಧಿಯಬೇಡುವನಲ್ಲ. ಜೋಳನಂತೆ ಹೊನ್ನ ಮಳೆಯ ಕರಿಸೆಂಬುವನಲ್ಲ. ಅಂಜದಿರು, ಅಂಜದಿರು. ಅವರಂದವನಾನಲ್ಲ. ಯನ್ನತಂದೆ ಕೂಡಲಸಂಗಮದೇವ ಸದ್ಭಕ್ತಿಯನೆ ಕರುಣಿಸೆನಗೆ. 23

57. ಬಾರದು ಬಾರದು ಭಕ್ತಂಗೆ ಪರಧನ ಪರಸತಿ, ಬಾರದುಬಾರದು ವಿಷಯಿಗೆ ಪಶುಪತಿವ್ರತ, ಬಾರದುಬಾರದು ಭವಭಾರಿಗೆ ಕೂಡಲಸಂಗಮದೇವನ ಒಕ್ಕುದಕೊಳ್ಳಬಾರದು. ಪ್ರಸಾದಿಸ್ಥಲ. 5

58. ಗುರುಲಿಂಗಜಂಗಮದಿಂದ ಪಾದೋದಕಪ್ರಸಾದ ಪಾಯಿತ್ತು. ಆ ಭಾವವೇ ಮಹಾನುಭಾವವಾಗಿ, ಎನಗೆ ಮತ್ತೆ ಜೀವೆ ಪ್ರಸಾದವೆಂಬುದಿಲ್ಲ ಕೂಡಲಸಂಗನದೇವ. ಪ್ರಸಾದಿಯಪ್ರಸಾದಿ. 1

CC-0. Jangamwadi Math Collection. Digitized by eGangotri

59. ಸಜ್ಜನಶರಣರಕಂಡು ಎನ್ನಮನ ಉಬ್ಬಿತ್ತುನೋಡಾ. ಶ್ರೀಗುರು ಪಾದವಪಿಡಿದು ಪಾವನನಾದೆನಯ್ಯ. ಪಾದೋದಕದಿಂದ ಭವಗೆಟ್ಟಿನು ಕೂಡಲಸಂಗಮದೇವ. ಪ್ರಸಾದಿಯಭಕ್ತ. 1

60. ಮೌನದಲುಂಬುದು ಆಚಾರವಲ್ಲ. ಲಿಂಗಾರ್ಪಿತವ ಮಾಡಿದ ಬಳಿಕ, ತುತ್ತಿಗೊಮ್ಮೆ ಶಿವಶರಣೆನ್ನುತ್ತಿರಬೇಕು. ಕರಣವೃತ್ತಿಗಳಡಗುವವು, ಕೂಡಲಸಂಗಮದೇವರ ನೆನೆಯುತ್ತ ಉಂಡರೆ. ಪ್ರಸಾದಿಯ ಪ್ರಾಣಲಿಂಗ 1

61. ಶಿವಾಚಾರವೆಂಬುದೊಂದು ಬಾಳಬಾಯಿಧಾರೆ ಕಂಡೆಯಾ, ಲಿಂಗ ಮೆಚ್ಚಬೇಕು, ಜಂಗಮ ಮೆಚ್ಚಬೇಕು, ಪ್ರಸಾದಮೆಚ್ಚಬೇಕು, ತನ್ನಲ್ಲಿ ಸ್ವಾಯ ತವಾಗಿರಬೇಕು, ಬಿಚ್ಚಿಬೇರಾದರೆ, ಮೆಚ್ಚ ನಮ್ಮ ಕೂಡಲಸಂಗಮದೇವ 4

62. ಲಿಂಗವಿಕಾರಿಗೆ ಅನ್ನವಿಕಾರವೆಂಬುದಿಲ್ಲ. ಜಂಗಮವಿಕಾರಿಗೆ ಧನ ವಿಕಾರವೆಂಬುದಿಲ್ಲ. ಪ್ರಸಾದವಿಕಾರಿಗೆ ಮನವಿಕಾರವೆಂಬುದಿಲ್ಲ. ಇಂತೀ ತ್ರಿವಿಧಗುಣವನರಿದಾತನು ಅಚ್ಚ ಲಿಂಗೈಕ್ಯನು ಕೂಡಲಸಂಗಮದೇವ. ಪ್ರಸಾದಿಯ ಐಕ್ಯ 2

63. ಅಹಂಕಾರ ಮನವನಿಂಬುಗೊಂಡಲ್ಲಿ, ಲಿಂಗತಾನೆಲ್ಲಿಪ್ಪುದೋ ? ಅಹಂಕಾರಕ್ಕೆ ಎಡೆಗುಡದೆ ಲಿಂಗತನುವಾಗಿರಬೇಕು. ಅಹಂಕಾರರಹಿತನಾದಲ್ಲಿ, ಸನ್ನಿಹಿತಕಾಣಾ ಕೂಡಲಸಂಗಮದೇವ. ಪ್ರಾಣಲಿಂಗಿಸ್ಥಲ 5

64. ನುಡಿದರೆ ಮುತ್ತಿನಹಾರದಂತಿರಬೇಕು. ನುಡಿದರೆ ಮಾಣಿಕ್ಯ ದೀಪ್ತಿಯಂತಿರಬೇಕು. ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು. ನುಡಿದರೆ ಲಿಂಗಮಚ್ಚು ಅಹುದೆನಬೇಕು. ನುಡಿಯೊಳಗಾಗಿ ನಡೆಯದಿದ್ದರೆ ಕೂಡಲ ಸಂಗಮದೇವ ನೆಂತೊಲಿವನಯ್ಯ. 6

65. ಮನವಂಚನೆಯ ಅನ್ಯಲಿಂಗಾರ್ಚನೆ, ಅದುನಿಜವಲ್ಲ ಕೂಡಲ ಸಂಗಮದೇವನು ಮನದಂತರ್ಯಾಮಿತಾನಾಗಿ. ಪ್ರಾಣಲಿಂಗಿಯ ಪ್ರಾಣಲಿಂಗಿ 2

66. ಬೆಳಗಿನೊಳಗಿನ ಮಹಾಬೆಳಗು, ಶಿವಶಿವ ಪರಮಾಶ್ರಯವೇ ತಾನಾಗಿ, ಶತಪತ್ರಕಮಲಕರ್ಣಿಕಾಮಧ್ಯದಲ್ಲಿ ಸ್ವತಃ ಸಿದ್ಧನಾಗಿಪ್ಪ ನಮ್ಮ ಕೂಡಲಸಂಗಮದೇವ. 10

CC-0. Jangamwadi Math Collection. Digitized by eGangotri

67. ನಿನ್ನನಾನರಿಯೆ. ಮುನ್ನನೀನೆಲ್ಲಿದ್ದೆ? ಎಲ್ಲೊಳಗಿರ್ದು, ನಿನ್ನ ತೋರಲಿಕ್ಕೆ ನೀನೆರೂಪಾದೆ, ಇನ್ನು ಜಂಗಮವೇಲಿಂಗವೆಂದು ನಂಬಿದೆ ಕೂಡಲ ಸಂಗಮದೇವ. ಪ್ರಾಣಲಿಂಗಿಯಭಕ್ತ 2

68. ಭೂತಬಲಿದಾತ್ಮನ ಸೋಂಕಿದಬಳಿಕ ಭೂತದಗುಣವಲ್ಲದೆ ಆತ್ಮನ ಗುಣವುಂಟೆ? ಗುರುಕಾರುಣ್ಯವಾಗಿ ಹಸ್ತಮಸ್ತಕಸಂಯೋಗವಾದಬಳಿಕ, ಗುರುಲಿಂಗಜಂಗಮವೇ ಗತಿಯಾಗಿರ್ದೆ ಕೂಡಲಸಂಗಮದೇವ. 6

69. ಮಾಡುವಾತನಾನಲ್ಲಯ್ಯ! ನೀಡುವಾತನಾನಲ್ಲಯ್ಯ! ಬೇಡುವಾತನಾನಲ್ಲಯ್ಯ! ನಿಮ್ಮ ಕಾರುಣ್ಯವಲ್ಲದೆ, ಎಲೆದೇವಾ! ಮನೆಯತೊತ್ತಲಸಿದಡೆ, ಒಡತಿಯಾಡಿಕೊಂಬಂತೆ, ನಿನಗೆ ನೀಮಾಡಿಕೊ ಕೂಡಲಸಂಗಮದೇವ. ಪ್ರಾಣಲಿಂಗಿಯ ಮಾಹೇಶ್ವರ 3

70. ಜನ್ಮಜನ್ಮಕ್ಕೆಹೋಗಲೀಯ್ಯದೆ, ಸೋಹಂಮೆಂದೆನಿಸದೆ, ದಾಸೋಹಂಮೆದೆನಿಸಯ್ಯ! ಲಿಂಗಜಂಗಮಪ್ರಸಾದದನಿಲವತೋರಿ ಬದುಕಿಸಯ್ಯ! ಕೂಡಲಸಂಗಮದೇವ ನಿಮ್ಮ ಧರ್ಮ. ಪ್ರಾಣಲಿಂಗಿಯ ಪ್ರಸಾದಿ 1

71. ಜಂಗಮವೇಲಿಂಗವೆನಗೆ. ಜಂಗಮವೇಪ್ರಾಣವೆನಗೆ, ಎನಗೆಯುಂ ನಿನಗೆಯುಂ ಜಂಗಮಪ್ರಸಾದವೇ ಪ್ರಾಣ ಕಾಣಾ ಕೂಡಲ ಸಂಗಮದೇವ. 7

72. ಅದ್ಯತವಚನ ಆದ್ಯರಿಗಾಯಿತ್ತು. ವೇದ್ಯರಿಗಲ್ಲದೆ ಸಾಧ್ಯವಾಗದು. ಕೂಡಲಸಂಗಮದೇವಾ! ನಿಮ್ಮನುಭಾವದಿಂದೆನ್ನ ಭವನಾಸ್ತಿಯಾಯಿತ್ತು. 10

73. ನೀನೊಲಿದರೆ ಒಲಿ. ಒಲಿಯದಿದ್ದರೆ ಸಮವೇಧಿಸಿಕೊಳ್ಳಯ್ಯಾ! ಲಿಂಗದಬೆಳಗನೊಳಕೊಂಡು ಸಮವೇಧಿಸಿಕೊಳ್ಳಯ್ಯಾ! ಕೂಡಲಸಂಗಮದೇವರಲ್ಲಿ ತಗ್ಗತನಾದೆನಯ್ಯಾ. ಪ್ರಾಣಲಿಂಗಿಯಶರಣ 2

74. ಎಲ್ಲರಗೆಂಡರ ಪರಿಯಂತಲ್ಲನೋಡವ್ವ, ನಮ್ಮನೆಲ್ಲ, ಸುಳಿಯಲಿಲ್ಲ. ಸುಳಿದುತ್ಸಂಗಾರವಮಾಡಲಿಲ್ಲ. ಕೂಡಲಸಂಗಮದೇವರ ತನ್ನೊಳಗೆನ್ನ ಬಚ್ಚಿಟ್ಟನಾಗಿ. ಪ್ರಾಣಲಿಂಗಿಯ ಐಕ್ಯ 1

CC-0. Jangamwadi Math Collection. Digitized by eGangotri

75. ಅಡಗಡಿಗೆಸ್ಥಾನನಿಧಿ, ಅಡಿಗಡಿಗೆದಿವ್ಯಕ್ಷೇತ್ರ, ಅಡಿಗಡಿಗೆನಿಧಿನಿಧಾನನೋಡಾ ! ಶರಣಂಗೆಸುತ್ತಿಬರೆ, ವಾರಣಾಸಿ. ಆತನಿರವೇ ಆವಿಮುಕ್ತಿಕ್ಷೇತ್ರ ಕೂಡಲಸಂಗನಶರಣನು ಸ್ವತಂತ್ರನಾಗಿ. 5

76. ಉಂಬುವಬಟ್ಟಲುಬೇರೆಕಂಚಲ್ಲ,ನೋಡುವದರ್ಪಣಬೇರೆಕಂಚಲ್ಲ, ಭಾಂಡಭಾಜನಒಂದೇ. ಬೆಳ್ಳಗೆಕನ್ನಡಿ ಎನಿಸಿತ್ತಯ್ಯ ! ಅರಿದರೆ ಶರಣ, ಮರೆದರೆಮಾನವ, ಮರೆಯದೆ ಪೂಜಿಸು ನಮ್ಮ ಕೂಡಲಸಂಗದೇವನ. ಶರಣಸ್ಥಲ. 7

77. ಕೆರೆಹಳ್ಳಭಾವಿಗಳು ಮೈದೆಗೆದರೆ, ಗುಳ್ಳಿ, ಗುರಜೆ, ಚಿಪ್ಪುಗಳ ಕಾಣಬಹುದು. ವಾರಿಧಿಮೈದೆರೆದರೆ, ರತ್ನಂಗಳ ಕಾಣಬಹುದು. ನಮ್ಮ ಕೂಡಲಸಂಗನ ಶರಣರು ಮನದೆರೆದು ಮಾತನಾಡಿದರೆ, ಲಿಂಗನ ಕಾಣಬಹುದು. 8

78. ಪುಣ್ಯಪಾಪವೆಂಬುಭಯಕರ್ಮವನಾರು ಬಲ್ಲರಯ್ಯ ! ಇವನಾರುಂಬರು. ಕಾಯತಾನುಂಬರೆ, ಕಾಯಮಣ್ಣು ಜೀವತಾನುಂಬರೆ, ಜೀವಬಯಲು. ಈ ಯುಭಯನಿರ್ಣಯವ ಕೂಡಲಸಂಗಮದೇವ ನಿಮ್ಮಶರಣಬಲ್ಲ. 9

79. ಭಕ್ತನ ಮಠವೆಂದು ಜಂಗಮನಡೆದುಬಂದಲ್ಲಿ, ಆಭಕ್ತನು ಕಾಣುತ್ತ ಆಸನತ್ಯಜಯಮಾಡುತ್ತ, ಕೈಮುಗಿದುನಿಂದಿರ್ದು, ಬಾಗಿಬಳುಕುತ್ತ. ಬಿಜಯಂಮಾಡಿ, ದೇವಾ ಎಂದು ಕರೆದು, ಕುಳ್ಳಿರಿಸಿ ಪಾದಾರ್ಚನೆಯಂಮಾಡಿ, ಪಾದೋದಕವಕೊಂಡು, ವಿಭೂತಿವೀಳೆಯಮುಂಕೊಟ್ಟು, ಕಂಗಳತುಂಬಿ, ನಿರೀಕ್ಷಿಸಿ, ಶ್ರೋತ್ರತುಂಬಿಹಾಗೈಸಿ, ಬಾಯತುಂಬ ಮಾತಾಡಿ, ಏಗುದುಬೆಸನೆಂದು ತನುಗೆರಗಿ, ಮನಕರಗಿನೋಡಿ, ಮಾಡುವುದು ಭಕ್ತಿಸ್ಥಲ. ಬಡವನಾಗಲಿ ಬಲ್ಲಿದನಾಗಲಿ ಇನಿತುಮುಖ್ಯವಾಗಿ ಮಾಡಿಸಿಕೊಂಬುದು ಜಂಗಮಸ್ಥಲ. ಈ ಯರಡೊಂದಾದ ಘನವನಂತಿಂತೆಂದುಪಮಿಸಬಾರದು. ಆದಂತಿರಲಿ, ಇನಿತಲ್ಲದೆ ಮಾಡಿದಮಾಟಭಕ್ತಿಸ್ಥಲಕ್ಕೆ ಸಲ್ಲದು. ಫಲದಾಯಕನೈಸೆ, ಇನಿತಲ್ಲದೆ ಮಾಡಿಸಿಕೊಂಬುದು ಜಂಗಮಸ್ಥಲಕ್ಕೆ ಸಲ್ಲದು. ಉಪಜೀವಕನೈಸೆ. ಈ ಎರಡಕ್ಕೆಯೂ ಭವಹಿಂಗದು ಕಾಣಾ ಕೂಡಲಸಂಗಮದೇವ. 11

80. ತೆರನನರಿವುದಪೂರ್ವ, ಅರಿದುಮರೆವುದು ಅಪೂರ್ವ, ಕೂಡೆ ಶರಣೆಂಬುದು ಅಪೂರ್ವ, ಕೂಡಲಸಂಗಮದೇವರ ಭಕ್ತಿ ಅಭಿಮಾನಿಯ ಜಪ್ಪನಡಂತೆ. 13

CC-0. Jangamwadi Math Collection. Digitized by eGangotri

81. ಮಣ್ಣು ಮಡಿಕೆ ಮಣ್ಣಾಗದು, ಕ್ರಿಯೆಯಳಿದು, ಜಿಣ್ಣಿಕರಿಗಿ ತುಪ್ಪವಾಗಿ, ಮರಳಿಬೆಣ್ಣೆಯಾಗದು ಕ್ರಿಯೆಯಳಿದು, ಕೂಡಲಸಂಗನ ಶರಣನಾಗಿ, ಮರಳಿಮಾನವನಾಗನು ಕ್ರಿಯೆಯಳಿದು. 16

82. ಪೂರ್ವಜನ್ಮನಿವೃತ್ತಿಯಾಗಿ, ಗುರುಕಾರುಣ್ಯ ವಿಡಿದಂಗೆ, ಬಂಧನವೆಲ್ಲಿಯದೋ? ಭವವೆಲ್ಲಿಯದೋ? ಸಂಕಲ್ಪ ವಿಕಲ್ಪವೆಂಬ ಸಂದೇಹ ಳಿದವಂಗೆ ಕೂಡಲಸಂಗಮದೇವರ ತ್ರಿಸಂಧ್ಯಾಕಾಲದಲ್ಲಿ ಮಾಣದೇ ನೆನೆವಂಗೆ. 17

83. ಲಗ್ನವೆಲ್ಲಿಯದೋ, ವಿಘ್ನವೆಲ್ಲಿಯದೋ ಸಂಗಯ್ಯ? ದೋಷವೆಲ್ಲಿಯದೋ? ದುರಿತವೆಲ್ಲಿಯದೋ ಸಂಗಯ್ಯ, ನಿಮ್ಮ ಮಾಣದೆ ನೆನೆವಂಗೆ ಭವಕರ್ಮ ವೆಲ್ಲಿಯದೋ ಬಂಧನ ವೆಲ್ಲಿಯದೋ ಕೂಡಲಸಂಗಮದೇವಾ 18

84. ಶರಣ ನಿದ್ರೆಗೈದರೆ ಜಪಕಾಣೆರೋ. ಶರಣನೆದ್ದು ಕುಳಿತರೆ ಶಿವರಾತ್ರಿ ಕಾಣೆರೋ, ಶರಣ ನಡೆದರೆ ಪಾವನ, ಶರಣ ನುಡಿದುದೇ ಪರತತ್ವ ಕಾಣೆರೋ ಕೂಡಲಸಂಗನ ಶರಣರ ಕಾಯವೇ ಕೈಲಾಸ ಕಾಣೆರೋ. ಶರಣನ ಶರಣ. 1

85. ಉಪಮಿಸಬಾರದು ಉಪಮಾತೀತರ, ಕಾಲಕರ್ಮವಿರಹಿತರ, ಭವವಿರಹಿತರ, ಕೂಡಲಸಂಗಮದೇವ, ನಿಮ್ಮ ಶರಣರ. 2

86. ಭವಕ್ಕೆ ಹುಟ್ಟುವನಲ್ಲ, ಸಂದೇಹಿಸೂತಕಿಯಲ್ಲ, ಆಕಾರ ನಿರಾಕಾರನಲ್ಲಿ ನೋಡಯ್ಯಾ! ಕಾಯವಂಚಕನಲ್ಲ, ಜೀವವಂಚಕನಲ್ಲ, ಶಂಕೆಯಿಲ್ಲದ ಸುಹಾಮಹಿಮ ಕಾಣಯ್ಯ! ಕೂಡಲಸಂಗನ ಶರಣನುಪಮಾತೀತ ನೋಡಯ್ಯ. 3

87. ಬ್ರಹ್ಮಂಗೆವಾಕ್ಪರುಷ, ವಿಷ್ಣುವಿಗೆ ನಯನಪರುಷ, ರುದ್ರಂಗೆ ಹಸ್ತಪರುಷ, ನಮ್ಮ ಕೂಡಲಸಂಗನ ಶರಣರಿಗೆ ಪಾದವೇ ಪರುಷ. 4

88. ನೆಲನೊಂದೇ ಹೊಲೆಗೇರಿ ಶಿವಾಲಯಕ್ಕೆ. ಜಲವೊಂದೇ ಕೌಚಾಚಮನಕ್ಕೆ. ಕುಲವೊಂದೇ ತನ್ನತಾನರಿವಂಗೆ. ಫಲವೊಂದೇ ಷಡು ದರ್ಶನಮುಕ್ತಿಗೆ; ನಿಲವುವೊಂದೇ ಕೂಡಲ ಸಂಗಮದೇವಾ ನಿಮ್ಮನರಿವಂಗೆ. 7

CC-0. Jangamwadi Math Collection. Digitized by eGangotri

89. ಅರಿದುದನರಿಯಲೊಲ್ಲದು, ಅಂದೆತಯ್ಯ? ಮರೆದುದಮರೆಯಲೊಲ್ಲದು, ಅಂದೆತಯ್ಯ? ಅರಿದುಮರೆವ ಮನವ ಕೂಡಲಸಂಗಯ್ಯ ತಾನೇ ಬಲ್ಲ. ಶರಣನಭಕ್ತ 5

90. ಹಾಲೆಂಜಲುವತ್ಸನ, ಉದಕ ಎಂಜಲು ಮತ್ಸ್ಯನ, ಪುಷ್ಪ ಎಂಜಲುತುಂಬಿಯ. ಎಂತುಪೂಜಿಸುವೆನಯ್ಯ? ಶಿವಾಶಿವಾಎಂತು, ಎಂತು ಪೂಜಿಸುವೆ? ಈ ಎಂಜಲನತಿಗಳವಡೆ, ಎನ್ನಳವಲ್ಲ, ಬಂದುದಕ್ಕೆ ಕೋ ಕೂಡಲಸಂಗಮದೇವಾ. 7

91. ಶುದ್ಧವಾಯಿತ್ತೆಂಬಿನೆ? ಸುಯಿಧಾನಿ (ಏಕಾಗ್ರತೆಯುಳ್ಳವ) ನಾನಲ್ಲ ಅನುವಾಯಿತ್ತೆಂಬಿನೆ? ಅವಧಾನಿನಾನಲ್ಲ. ಸುಯಿಧಾನದವಧಾನದರ್ಪಿತನನಾನರಿಯೆ. ಇದ್ದಪರಿಯಲ್ಲಿನೀಡಿದರೆ, ಬಂದಪರಿಯಲ್ಲಿ ಕೈಕೋ ಕೂಡಲ ಸಂಗಮದೇವಾ. 8

92. ತನುಮನಧನವೆಂಬ ಕನ್ನಡಿಯನೋಡಯ್ಯ! ಎನ್ನೆಮುಖವಲ್ಲ, ಸಿನ್ನೆದು ಅಲ್ಲ, ಬರಿಯಭ್ರಮೆಯ ಮಾತು. ಆಭ್ರಮೆಗೊಳಗಾದೆ, ನಿಮ್ಮ ಪಾದಚರಣವಬಿಡೆ ಕೂಡಲ ಸಂಗಮದೇವ. ಶರಣನ ಮಹೇಶ್ವರ 2

93. ಗ್ರಹಬಂದು ಆವರಿಸಲೊಡನೆ, ತನ್ನ ಮರಿಸುವುದು, ಅಯ್ಯ! ಮತ್ತೊಂದಕ್ಕೆಂಬು ಗೊಡಲೀಯದಯ್ಯ! ಕೂಡಲಸಂಗಮ ದೇವನ ಅರಿವು ಅನುಭವುವಾಗಲೊಡನೆ, ವ್ಯವಹಾರದೊಳಗಿರಲೀಯದಯ್ಯ. ಶರಣನ ಪ್ರಾಣಲಿಂಗಿ 2

94 ಸತ್ಯವಿದೆ, ಸಮಾಧಾನವಿದೆ, ಮನಕ್ಕೆ ಬಾರದಿದೇನಯ್ಯ! ಸರ್ವಸನುಮತವಿದೆಂಬ ಸುಖವಿದೆ, ಮನಕ್ಕೆ ಸೋಂಕದೇನಯ್ಯ! ಆಸುನೀನೆಂಬುದೊಂದೂಘನವಿದೆ ಕೂಡಲ ಸಂಗಮದೇವ. ಭ್ರಮೆಯೂ. ಶರಣನಜಕ್ಯ 3

95. ಪೂಜೆಯುಳ್ಳನ್ನಬರ, ಲಿಂಗವಹಾಡಿದೆ. ಮಾಟವುಳ್ಳನ್ನ ಬರಜಂಗಮವಹಾಡಿದೆ. ಜಿಂಹ್ವೆಯುಳ್ಳನ್ನಬರ ಪ್ರಸಾದವಹಾಡಿದೆ. ಈತ್ರಿವಿಧನಾಸ್ತಿಯಾವ ಬಳಿಕ ಎನ್ನನಾಹಾಡಿಕೊಂಡೆ ಕಾಣಾ ಕೂಡಲಸಂಗಮದೇವಾ. 5

96. ದೇವಲೋಕ, ಮರ್ತ್ಯಲೋಕವೆಂಬ ಸೀಮೆಯುಳ್ಳನ್ನಕ್ಕರ ಕೇವಲ ಶರಣನಾಗಲರಿಯ, ಸತ್ತು ಬೆರೆಸಿಹೆನೆಂಪರೆ, ಕಬ್ಬಿಸತುದಿಯ ಮೆಲ್ಲಿದಂತೆ ಕೂಡಲಸಂಗಮದೇವಾ. ಐಕ್ಯಸ್ಥಲ 5

CC-0. Jangamwadi Math Collection. Digitized by eGangotri

97. ಮಾತಿಲ್ಲ, ನುಡಿಇಲ್ಲ, ಏತಕ್ಕೆ ಮುನಿದಿರಿ? ಮಾತನಾಡಿದರೇತ ಕಯ್ಯ? ಬೆಳಸೆಂಬುದನರಿಯಿರಿ. ಮಾತುಕೆಟ್ಟಲ್ಲದೆ, ತಾನಾಗಬಾರದು. ಕೂಡ ಲ ಸಂಗಮದೇವಾ ಮಾತಿಂದ ಬಕ್ಕುಭವಭಾರಹೋರ.6

98. ಏನಾದರೆಯೂ ಸಾಧಿಸಬಹುದು. ಮತ್ತೇನಾದರೂ ಸಾಧಿಸ ಬಹುದು. ತಾನಾರೆಂಬುದು ಸಾಧಿಸ ಬಾರದು, ಕೂಡಲ ಸಂಗಮ ದೇವರ ಕರುಣವುಳ್ಳವಂಗಲ್ಲದೆ. 7

99. ಗುರುಶಿಷ್ಯಸಂಬಂಧವಾದುದಕ್ಕೆ ಇದುಚಿನ್ಹ. ಹಿಂದುಬಿಟ್ಟು ಮುಂದೆಹಿಡಿಯಬೇಕು, ಕೂಡಲ ಸಂಗಮದೇವಾ, ಕೇಳಯ್ಯಾ! ಕಿಚ್ಚಿನೊಳಗೆ ಕೋಲಬಚ್ಚಿಟ್ಟಂತಿರಬೇಕು. 10

100. ಲಿಂಗಪೂಜಿಸಿ ಫಲವೇನಯ್ಯಾ? ಸಮರತಿ ಸಮಕಳೆ ಸಮಸುಖ ವನರಿಯದನ್ನಕ್ಕರ, ಲಿಂಗವ ಪೂಜಿಸಿ ಫಲವೇನಯ್ಯಾ? ಕೂಡಲ ಸಂಗಮ ದೇವರ ಪೂಜಿಸಿ ನದಿಯೊಳಗೆ ನದಿಬೆರಸಿದಂತಾಗದನ್ನಕ್ಕರ? 11

101. ಏನೆಂಬೆನೇನೆಂಬೆ? ಏನೆಂಬೆನೇನೆಂಬೆನೆರಡೊಂದಾದುದ? ಏನೆಂಬೆ ನೇನೆಂಬೇನ ವಿರಳಘನವ? ಮಹಾದಾನಿಕೂಡಲಸಂಗಮದೇವಾ ತಾನೇಬಲ್ಲ. ಐಕ್ಯನಪ್ರಾಣಲಿಂಗಿ 3

102. ಹುತ್ತಕ್ಕೆ ಏಸುಬಾಯಾದರೇನು? ಸರ್ಪನಿಪ್ಪುದೊಂದೇಸ್ಥಾನ, ಭಾವಭಾವಿಸಿಭ್ರಮೆಯಳಿದುನೋಡು! ಆಭಾವಭಾವಿಸಲು ನಿರ್ಭಾವನೋಡು, ಕೂಡಲ ಸಂಗಮದೇವಾ. ಐಕ್ಯನಶರಣ 3

103. ವೇದಾತೀತ, ಷಡುವರ್ಣರಹಿತ, ಅಷ್ಟತ್ರಿಂಶತ್ಕಳಾತೀತ ಅಗಮ್ಯ ಅಗೋಚರವ್ಯೋಮಾತೀತ ಕೂಡಲ ಸಂಗಮದೇವಾ. 5

104. ಘನಗಂಭೀರ ಮಹಾಘನದೊಳಗೆ ಘನಕ್ಕೆಘನವಾಗಿರ್ದೆನಯ್ಯ ಕೂಡಲಸಂಗಮದೇವನೆಂಬ ಮಹಾಬೆಳಗಿನೊಳಗಿರ್ದು, ಶಬ್ದಮುಗ್ಧನಾದು ದನೇನೆಂಬೆನಯ್ಯ. 8

105. ಸಮಸ್ತಕತ್ತಲೆಯ ಮಸಕವಕಳೆದಿಪ್ಪ ಇರವ ನೋಡಯ್ಯ! ಬೆಳಗಿಂಗೆ ಬೆಳಗು ಸಿಂಹಾಸನವಾಗಿ, ಬೆಳಗು ಬೆಳಗು ಕೂಡಿದ ಕೂಟವ ಕೂಡಲ ಸಂಗಯ್ಯ ತಾನೆಬಲ್ಲ. 9

CC-0. Jangamwadi Math Collection. Digitized by eGangotri

106. ಅಂತರಂಗ, ಬಹಿರಂಗ, ಆತ್ಮಸಂಗ ಒಂದೇ ಅಯ್ಯಾ! ನಾದ ಬಿಂದು, ಕಳಾತೀತ, ಆದಿಯಾಧಾರನೀನೇಅಯ್ಯ! ಆರೂಪದ ಕೂಡಿದ ಕೂಟದ ಸುಖವ ಕೂಡಲಸಂಗಯ್ಯತಾನೇಬಲ್ಲ. 10

107. ಕಾಳಿಕಂಕಣದಿಂದಮುನ್ನ, ತ್ರಿಪುರಸಂಹಾರದಿಂದಮುನ್ನ, ಹರಿ ವಿರಿಂಚಿಗಳಿಲ್ಲದಮುನ್ನ, ಉಮೆಯಕಲ್ಯಾಣದಿಂದಮುನ್ನ, ಮುನ್ನ ಮುನ್ನ, ಆದಿಉಳಿವಿನ ಕೆಳೆಯನೀನು, ಹಳೆಯನಾನು, ಮಹಾದಾನಿಕೂಡಲಸಂಗಮ ದೇವ. ಪಿಂಡಜ್ಞಾನಸ್ಥಲ 1

108. ನರವಿಂಧ್ಯದೊಳೆಗೆನ್ನ ಹುಲುಗಿಳಿಯಮಾಡಿಸಲುಹುತ್ತ, ಶಿವಾ ಎಂದೋದಿಸಯ್ಯ. ಭಕ್ತಿಎಂಬ ಪಂಜರದೊಳಗಿಕ್ಕಿಸಲಹು ಕೂಡಲಸಂಗವದೇವ ಸಂಸಾರಹೇಯಸ್ಥಲ. 52

109. ಮಡಿಕೆಯಮಾಡುವರೆ ಮಣ್ಣೀಮೊದಲು. ತೊಡಿಗೆಯಮಾಡು ವರೆ, ಹೊನ್ನೀಮೊದಲು, ಶಿವಪಥವನರಿವಡೆಗುರುಪಥವೇ ಮೊದಲು. ಕೂಡಲ ಸಂಗಮದೇವರನರಿವಡೆ, ಶರಣರಸಂಗವೇಮೊದಲು. ಗುರುಕರುಣಸ್ಥಲ 1

110. ನೀರಿಂಗೆನ್ಯೆದಿಲೆಶೃಂಗಾರ, ಊರಿಗೆಅರಸನೇಶೃಂಗಾರ, ಸಮುದ್ರ ಕ್ಕೆತೆರೆಯೇ ಶೃಂಗಾರ, ನಾರಿಗೆಗುಣವೇಶೃಂಗಾರ, ಗಗನಕ್ಕೆ ಚಂದ್ರಮನೇ ಶೃಂಗಾರ, ಕೂಡಲಸಂಗನ ಶರಣರನೊಸಲಿಗೆ ವಿಭೂತಿಯೇಶೃಂಗಾರ. ವಿಭೂ ತಿಯ ಸ್ಥಲ 2

111. ಪಾತಕಶತಕೋಟಿಗಳ ನೂರಿಸಲು, ಸಾಲದೆ ಒಂದೆ ಶಿವನನಾಮ, ಸಾಲದೆಒಂದೇ ಹರನನಾಮ, ಕೂಡಲಸಂಗಮದೇವ ನಿಮ್ಮ ಉಂಡಿಗೆಯ ಪಶುವಮಾಡಿದೆಯಾಗಿ. ಪಂಚಾಕ್ಷರಿಯಸ್ಥಲ 10

112. ಕುಂಬಳದಕಾಯಿಗೆ ಕಬ್ಬಿನದಕಟ್ಟು ಕೊಟ್ಟರೆ ಕೊಳೆವುದಲ್ಲದೆ ಬಲುಹಾಗಬಲ್ಲುದೆ? ಅಳಿಮನದಂಗೆ ಶಿವದೀಕ್ಷೆಕೊಟ್ಟರೆ ಭಕ್ತಿಎಂತಹುದೊ? ಮುನ್ನಿನಂತೆ ಕೂಡಲಸಂಗಯ್ಯ ಮಾನಹೀನನ ಮಾಸಲ ಕಾಯ್ದಿರಿಸಿದಂತೆ. ತಾಮಸ ನಿರಸನಸ್ಥಲ 4

113. ಸಗಣಿಯ ಬೆನಕಂಗೆ ಸಂಪಿಗೆಯರಳಲ್ಲಿ ಪೂಜಿಸಿದರೆ ರಂಜನೆಯ ಹುದಲ್ಲದೆ, ಅಪರಗಂಜಳಬಿಡದಣ್ಣ. ಮಣ್ಣಪುತ್ತಳಿಯಮಾಡಿ ಜಲದಲ್ಲಿತೊಳೆ

CC-0. Jangamwadi Math Collection. Digitized by eGangotri

ದರೆನಿಚ್ಚ ಕೆಚ್ಚನಿಸರಹುದಲ್ಲದೆ. ಅವರಚ್ಚುಗ (ಆಕೃತಿ) ಬಿಡದಣ್ಣ, ಲೋಕದ ಮಾನವರಿಗೆ ಶಿವದೀಕ್ಷೆಯ ಕೊಟ್ಟಪೆ, ಕೆಟ್ಟವನೇಕೆ ಸದ್ಭಕ್ತನಹನು ಕೂಡಲ ಸಂಗಮದೇವಾ? 5

114. ತನುವಿನಲ್ಲೊಂದಿಟ್ಟು ಮನದಲ್ಲಿ ಎರಡಿಟ್ಟರೆ, ಬಲ್ಲನೊಲ್ಲನಯ್ಯ ಲಿಂಗವು, ಬಲ್ಲನೊಲ್ಲನಯ್ಯಾ ಜಂಗಮವು, ಪರಚಿಂತೆಯನೊಲ್ಲ ಕೂಡಲಸಂಗಮ ದೇವಾ. 7

115. ಒಳಗೆ ಕುಟಿಲ, ಹೊರಗೆ ವಿನಯವಾಗಿ, ಭಕ್ತರೆನಿಸಿಕೊಂಬು ವರ ಬಲ್ಲನೊಲ್ಲನಯ್ಯಾ ಲಿಂಗವು. ಅವರು ಶಿವಪಥಕ್ಕೆ ಸಲ್ಲರು ಸಲ್ಲರಯ್ಯ ಒಳಹೊರಗೊಂದಾಗದವರಿಗೆ, ಅಳಿಯಾಶೆದೋರಿ, ಬಿಸಾಡುವನವರ ಜಗದೀಶ ಕೂಡಲಸಂಗಮದೇವಾ. 8

116. ಗಂಡನಮೇಲೆ ಸ್ನೇಹವಿಲ್ಲದಹೆಂಡತಿ,ಲಿಂಗದಮೇಲೆ ನಿಷ್ಠೆಇಲ್ಲದ ಭಕ್ತ ಇದ್ದರೇನೊ ಶಿವಶಿವಾ, ಹೋದರೇನೋ ? ಶಿವಶಿವಾ ಕೂಡಲಸಂಗಮ ದೇವಯ್ಯ, ಒದೆದ ಆವಿಂಗೆ ಉಣ್ಣದಕರುವಬಿಟ್ಟಂತೆ. 21

117 ಅವಳವಚನ ಬೆಲ್ಲದಂತೆ, ಹೃದಯದಲ್ಲಿಪ್ಪುದು, ನೋಡಾನಂಜು ಕಂಡಯ್ಯ! ಕಂಗಳೊಬ್ಬನ ಕರೆವಳು, ಮನದೊಳೊಬ್ಬನ ನೆನೆವಳು ಕೂಡಲ ಸಂಗಮದೇವ, ಮಾನಸಗಳ್ಳಿಯ ನಂಬದಿರಯ್ಯ. 22

118. ಹಾದರಕ್ಕೆ ಹೋದರೆ ಕಳ್ಳಪಮ್ಮವಾಯಿತ್ತು. ಹಾಳುಗೋಡೆಗೆ ಹೋದರೆ ಜೇಳೂರಿತ್ತು. ಅಬ್ಬರವಕೇಳಿ ತಳವಾರನುಟ್ಟಸೀರೆಯ ಸುಲಿದ, ನಾಚಿಹೋದರೆ ಮನೆಯಗಂಡ ಬೆನ್ನಬಾರನೆತ್ತಿದ,ಅರಸುಕೂಡಲಸಂಗಮದೇವ ದಂಡವಕೊಂಡ. 23

119. ಒಲೆಯ ಬೂದಿಯ ಬಳಿಯಲುಬೇಡ. ಒಲೆಯಂತೆ ಹೂಸಿಕೊಂ ಡಿಪ್ಪುದು ಹುಸಿ. ಏನುಫಲ ಮನದಲ್ಲಿ ಲೇಸಿಲ್ಲದನ್ನಕ್ಕರ ? ಒಂದನಾಡಹೋಗಿ ಒಂಬತ್ತನಾಡುವ ಡಂಭಕರಮೆಚ್ಚ ಕೂಡಲಸಂಗಮದೇವಯ್ಯ. ಭಕ್ತಿಸ್ಥಲ. 1

120. ಹುತ್ತಬಡಿದಡೆ ಹಾವುಸಾಯಬಲ್ಲುದೇನಯ್ಯ? ಅಘೋರತಪವ ಮಾಡಿದಡೇನು ? ಅಂತರಂಗದ ಆತ್ಮಶುದ್ಧವಿಲ್ಲದನರನೆಂತು ನಂಬುವನಯ್ಯ ಕೂಡಲಸಂಗನುದೇವಾ ? 4

CC-0. Jangamwadi Math Collection. Digitized by eGangotri

121 ಗಿಳಿಯೋದಿಫಲವೇನು ? ಬೆಕ್ಕುಬಾಹದು ಹೇಳಲರಿಯದು. ಜಗವೆಲ್ಲ ಕಾಂಬಕಣ್ಣು ತನ್ನಕೊಂಬಕೊಯ್ಲಿಯ ಕಾಣಲರಿಯದು. ಇದಿರಗುಣವ ಬಲ್ಲೆನೆಂಬರು, ತಮ್ಮ ಗುಣವನರಿಯರು, ಕೂಡಲಸಂಗಮದೇವಾ 10

122 ಲೋಕದಡೊಂಕ ನೀವೇತಕೆತಿದ್ದುವಿರಿ ? ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ, ನಿಮ್ಮ ನಿಮ್ಮ ಮನವಸಂತೈಸಿಕೊಳ್ಳಿ, ನೆರೆಮನೆಯವರ ದುಃಖಕ್ಕೆ ಆಳುವರಮೆಚ್ಚ ಕೂಡಲಸಂಗಮದೇವ. 11

123. ಅರ್ಥವಡಗದು, ಕ್ರೋಧತೊಲಗದು, ಕ್ರೂರಕುಹಕಕುಭಾಷೆ ಬಿಡದನ್ನಕ್ಕ, ನೀನೆತ್ತಲುಶಿವನೆತ್ತಲು, ಹೋಗುತ್ತಮರುಳೆ, ಭವರೋಗವೆಂಬ ತಿಮಿರತಿಳಿಯದನ್ನಕ್ಕರ, ಕೂಡಲಸಂಗಯ್ಯನೆತ್ತ ನೀನೆತ್ತಮರುಳೇ. 18

124. ಅರೆಭಕ್ತರಾದವರನೆರೆಬೇಡ, ಹೊರೆಬೇಡ, ದಾರಿಸಂಗಬೇಡ, ದೂರದಲಿದ್ದು ನುಡಿಸಲುಬೇಡ, ಕೂಡಲಸಂಗನ ಶರಣರಲ್ಲಿ ಆಚ್ಚ ಲಿಂಗೈಕ್ಯಂಗೆ ತೊತ್ತಾಗಿಹುದಯ್ಯಾ 20

125. ಸಾರಸುಜನರ ಸಂಗಲೇಸುಕಂಡಯ್ಯಾ ! ದೂರದುರ್ಜನರಸಂಗವದು ಭಂಗವಯ್ಯ ! ಸಂಗವೆರಡುಂಟು. ಒಂದು ಬಿಡುವುದು. ಹಿಡಿವುಂಗಳ ಮೂರ್ತಿ ನಮ್ಮ ಕೂಡಲಸಂಗನ ಶರಣರ. 21

126. ಪರುಷಮುಟ್ಟದಬಳಿಕ, ಕಬ್ಬುಸವಾಗದುನೋಡಾ ! ಲಿಂಗಮುಟ್ಟದಬಳಿಕ, ಕುಚಿತ್ತಾಚಾರವಾಗದುನೋಡಾ, ಕೂಡಲಸಂಗನ ಶರಣರು ಅನ್ಯವನರಿಯರಾಗಿ. 24

127. ಪಟ್ಟವಕಟ್ಟದಬಳಿಕ, ಲಕ್ಷಣವನರಸುವರೆ ? ಲಿಂಗದೇವನ ಪೂಜಿಸಿಕುಲವನರಸುವರೇ ಅಯ್ಯಾ ? ಕೂಡಲಸಂಗಮದೇವರ ಭಕ್ತಿಕಾಯ, ಮಮಕಾಯವೆಂದುದಾಗಿ. 28

128. ಎಂತವನಾದೊಡೇನು ? ಲಿಂಗಮುಟ್ಟದವನೇ ಕೀಳುಜಾತಿ. ಕುಲವಹುದು ತಪ್ಪದು, ಲಿಂಗವಮುಟ್ಟಲೊಡನೆ ಹೊನ್ನಹುದು ತಪ್ಪದು, ಪರುಷಮುಟ್ಟಲೊಡನೆ, ಕೂಡಲಸಂಗಮದೇವ ನೊಲ್ಲನು ಸರ್ವ ಸಂದೇಹಗಳನು. 29

CC-0. Jangamwadi Math Collection. Digitized by eGangotri

129. ಹಾವಿನಡೊಂಕು ಹುತ್ತಕ್ಕೆಸಸಿನ (ಕ್ಷೇಮ). ನದಿಯಡೊಂಕು ಸಮುದ್ರಕ್ಕೆಸಸಿನ. ನಮ್ಮ ಕೂಡಲಸಂಗನ ಶರಣರಡೊಂಕು ಲಿಂಗಕ್ಕೆನಸಿನ.31

130. ನೆರೆನಂಬೋನೆರೆನಂಬೋ ದುರದುರವಿಲ್ಲದೆ ಸಾಮವೇದಿಗಳಂತೆ ನೆರೆನಂಬೋನೆರೆನಂಬೋ ದಾಸದುಗ್ಗಳೆಯಂತೆ, ನೆರೆನಂಬೋನೆರೆನಂಬೋ ಸಿರಿಯಾಳಚಂಗಳೆಯಂತೆ, ನೆರೆನಂಬೋನೆರೆನಂಬೋ ಸಿಂಧುಬಲ್ಲಾಳನಂತೆ. ನಂಬಿಧೆಯಾದಡೆ, ತನ್ನ ನೀವಕೂಡಲಸಂಗಮದೇವ. 35

131. ಮರ್ತ್ಯಲೋಕವೆಂಬುದು ಕರ್ತಾರನಕಮ್ಮಟವಯ್ಯಾ! ಇಲ್ಲಿ ಸಲ್ಲುವರು, ಅಲ್ಲಿಯೂಸಲ್ಲುವರಯ್ಯಾ! ಇಲ್ಲಿಸಲ್ಲದವರು ಅಲ್ಲಿಯೂಸಲ್ಲರಯ್ಯ ಕೂಡಲಸಂಗಮದೇವ. 41

132. ನೀರಲ್ಲಿಪುಟ್ಟದಗುಳ್ಳಿಗೆ ಕಬ್ಬುನದಕಟ್ಟು ಕೊಟ್ಟುಸುರಕ್ಷಿತವ ಮಾಡುವಭರವನೋಡಾ! ಮಹಾದಾನಿಕೂಡಲಸಂಗಯ್ಯನ ಪೂಜಿಸಿ ಬದುಕೋ ಕಾಯವನಿಶ್ಚಯಿಸದೇ. 48

133. ಪಂಜರಬಲ್ಲಿತ್ತೆಂದು ಅಂಜದೆ ಓದುವಗಿಳಿಯೇ, ಎಂದೆಂದು ಅಳಿಯೆನೆಂದು ಗೂಡಕಟ್ಟದೆಯಲ್ಲಾ! ನಿನ್ನಮನದಲ್ಲಿ ಮಾಯಾಮಂಜರ ಕೊಲುವರೇ, ನಿನ್ನಪಂಜರಕಾವುದೆ ಕೂಡಲಸಂಗಮದೇವನಲ್ಲದೆ? 49

134 ಸಂಸಾರವೆಂಬುದೊಂದು ಗಾಳಿಯಸೊಡರು, ಸಿರಿಯಂಬುದೊಂದು ಸಂತೆಯಮಂದಿ ಕಂಡೈಯ್ಯ. ಇದನು ನೆಚ್ಚಿ ಕೆಡಬೇಡ. ಸಿರಿಎಂಬುದಮರೆದು, ಪೂಜಿಸು ನಮ್ಮಕೂಡಲಸಂಗಮದೇವನ 50

135. ಎಲೆಎಲೆ ಮಾನವ ಅಳಿಯಾಸೆಬೇಡೆಲೊ. ಕಾಡಬೆಳದಿಂಗಳ ಸಿರಿಯು ಸ್ಥಿರವಲ್ಲ. ಕೇಡಿಲ್ಲದ ಪದವಿಯ ಕೂಡಲು, ಕೂಡಲಸಂಗಮದೇವನ ಮರೆಯದೆ ಪೂಜಿಸು. 51

136. ಅಚ್ಚುಗವೇಕಯ್ಯ ಸಂಸಾರದೊಡನೆ? ನಿಚ್ಚ ನಿಚ್ಚ ಶಿವರಾತ್ರಿಯ ಮಾಡುವದು, ಬೇಗಬೇಗ ಅರ್ಚನೆಪೂಜೆಯ ಮಾಡುವದು ಕೂಡಲಸಂಗನ ಕೂಡುವದು. 59

137. ಅಂದು, ಇಂದು ಮತ್ತೊಂದು ಎನಬೇಡ. ದಿನಬಂದೇ ಶಿವಶರಣೆಂಬುವಂಗೆ. ದಿನಬಂದೆ ಹರಶರಣೆಂಬುವಂಗೆ. ದಿನಬಂದೇನಮ್ಮ ಕೂಡಲಸಂಗನಮಾಣದೆ ಮಾಣದೆ ನೆನೆಯುವಂಗೆ. 60

CC-0. Jangamwadi Math Collection. Digitized by eGangotri

138. ಆಡಿಹರಯ್ಯ, ಆಡಿಹರಯ್ಯ ಮನಬಂದಪರಿಯಲಿ, ಶಿವಶರಣರನುಂದೆ, ಆಡಿಹರಯ್ಯ, ಹಾಡಿಹರಯ್ಯ. ಕೋಡಂಗಿ (ವಿದೂಷಕ) ಯಾಟವನಾಡಿದ ಭಕ್ತಂಗೆ ಬೇಡಿದ್ದನೀವ ನಮ್ಮ ಕೂಡಲಸಂಗಮದೇವ. 65

139. ಬಂಡಿತುಂಬ ಪತ್ರೆಯತಂದು, ಕಂಡಕಂಡಲಿ ಮಜ್ಜನಕೆರೆವಿರಿ, ತಾಪತ್ರಯವಲಿಂಗನೊಲ್ಲ ಕೂಡಲಸಂಗಮದೇವ ಬರಿಯಉದಕವಲ್ಲಿನೆನೆವನೆ.70

140. ಭಕ್ತನಾಗಿ ಲಿಂಗಜಂಗಮವ ಪೂಜಿಸಬೇಕು, ಭಕ್ತನಾಗಿ ತನ್ನತಾ ಪೂಜಿಸಿಕೊಂಬುದೆಂತಯ್ಯ? ಸ್ವಾಮಿಭೃತ್ಯ ಸಂಬಂಧವೆಂತಯ್ಯ ಪೂಜಿಸುವ್ರದು ಕೂಡಲಸಂಗಮದೇವ. ಕಣ್ಣಕಟ್ಟಕನ್ನಡಿಯತೋರುವಂತೆ. 71

141. ಕನ್ನಡಿಯನೋಡುವ ಅಣ್ಣಗಳಿರಾ, ಜಂಗಮದೊಳಗೆ ನೋಡಿದರೆ, ಜಂಗಮದೊಳಗೆ ಲಿಂಗಯ್ಯ ಸನ್ನಿಹಿತನಾಗಿರ್ಪ. ಸ್ಥಾವರಜಂಗಮ ಒಂದೇ ಎಂದುದು ಕೂಡಲಸಂಗಯ್ಯನವಚನ. 73

142. ಲಿಂಗವ ಪೂಜಿಸಿದಬಳಿಕ ಜಂಗಮಕ್ಕಂಜಲೇಬೇಕು. ದಕ್ಕನೆ ನುಂಗಿದಂತೆ ಬೆರೆತುಕೊಂಡಿರಬೇಡ. ಬೀಗಿಬೆಳೆದಕೊನೆವಾಳೆಯಂತೆ ಬಾಗಿಕೊಂಡಿದ್ದರೆ, ಬೇಡಿವಪದವಿಯನೀವ ಕೂಡಲಸಂಗಮದೇವಾ. 75

143. ಹಮ್ಮಿನಭಕ್ತಿ ಕರ್ಮಕ್ಕೆಮೊದಲು. ಧರ್ಮವನರಿಯದ ಮಾಟ ಸುಯಿಧಾನದಕೇಡು. ಬಂದಸಮಯೋಚಿತವನರಿಯದಿದ್ದರೆ, ನಿಂದಿತಲೊಲ್ಲ ಕೂಡಲಸಂಗಮದೇವಾ. 76

144. ದ್ವೈತಾದ್ವೈತವನೋದಿ ಏನುಮಾಡುವಿರಯ್ಯಾ. ನಮ್ಮ ಶರಣರಿಗೆ ಉರಿಗೊಡ್ಡಿದರಗಿನಂತೆ ಕರಗದನ್ನಕ್ಕ? ಕೂಡಲಸಂಗಮದೇವ ಬರಿಯ ಮಾತಿನ ಮಾಲೆಯುಲೇನಹುದು. 77

145. ಸರ್ವಭೂತಾತ್ಮನೆಂಬ ಮಾತಿನಮಾಲೆಯಲ್ಲಿ ಹೋಗದು, ತನು ಮನಧನವ ಗುರುಲಿಂಗಜಂಗಮಕ್ಕೆ ಸವಿಸಲೇಬೇಕು, ನಮ್ಮ ಕೂಡಲಸಂಗನ ಶರಣರಿಗೆ ಅಂಜಲೇಬೇಕು. 85

146. ಆಡಿದರೇನು ಹಾಡಿದರೇನು ಓದಿದರೇನು ತ್ರಿವಿಧದಾಸೋಹವಿಲ್ಲದನ್ನಕ್ಕರ? ಆಡದನವಿಲು ಹಾಡದತಂತಿ ಓದದಗಿಳಿ ಭಕ್ತಿ ಇಲ್ಲದವರನೊಲ್ಲ ಕೂಡಲಸಂಗಮದೇವ. 88

CC-0. Jangamwadi Math Collection. Digitized by eGangotri

147. ಧನಕ್ಕೆ ಮನವನೊಡ್ಡಿದರೇನು? ಮನಕ್ಕೆ ಧನವನೊಡ್ಡಿದರೇನು? ತನುಮನಧನವನಿಮಾರಿ ಮಾತಾಡಬಲ್ಲರೆ, ಆತನಿಸ್ಸೀಮನು ಆತನಿಜೈಕ್ಯನು, ತಸುತ ಮನಧನವ ಸವಿದರೆ ಕೂಡಲಸಂಗಮದೇವ ನೊಲಿವ. 98

148. ಬಿದಿರಅಂದಣವಕ್ಕು, ಬಿದಿರಸತ್ತಿಗೆಯಕ್ಕು, ಬಿದಿರಲ್ಲಿ ಗುಡಿಗು ಡಾರವಕ್ಕು, ಬಿದಿರಲ್ಲಿ ಸಕಲಸಂಪದವಕ್ಕು, ಎಲ್ಲಬಿದಿರೆಂಬೊ ಬಿದಿರೆಂಬೋ. ಬಿದಿರಿವರ ಮೆಚ್ಚನಮ್ಮ ಕೂಡಲಸಂಗಮದೇವ. 101

149. ಪಾಪಿಯಧನ ಪ್ರಾಯಶ್ಚಿತ್ತಕ್ಕಲ್ಲದೆ, ಸತ್ಪಾತ್ರಕ್ಕೆ ಸಲ್ಲದಯ್ಯ! ನಾಯಹಾಲು ನಾಯಿಂಗಲ್ಲದೆ, ಪಂಚಾಮೃತಕ್ಕೆ ಸಲ್ಲದಯ್ಯ. ನಮ್ಮ ಕೂಡಲ ಸಂಗನ ಶರಣರಿಗಲ್ಲದೆ, ಪಾಡುವಅರ್ಥ ವ್ಯರ್ಥಕಂಡಯ್ಯ. 103

150. ಹರಿಸಿಮಾಡುವದು ಹರಿಕೆಯುದಂಡ! ನೆರಹಿಮಾಡುವದು ಡಂಭಿ ನಭಕ್ತಿ, ಹರಿಸಬೇಡ, ನೆರಿಸಬೇಡ. ಬಂದಬರವನರಿದರೆ, ಕೂಡಿಕ್ಕೊಂಡಿಪ್ಪ ನಮ್ಮ ಕೂಡಲಸಂಗಮದೇವ. 108

151. ಓಡಲಾರದ ಮೃಗವು ಸೊಣಗಂಗೆ ಮಾಂಸಕೊಡುವಂತೆ ಮಾಡ ಲಾಗದುಭಕ್ತ ಕೊಳಲಾಗದು ಜಂಗಮ. ಹಿರಿಯರು ನರಮಾಂಸವಭುಂಜಿಸು ವರೆ? ತನುಳುಕ್ಕಿ ಮನಳುಕ್ಕಿ ಮಾಡಬೇಕು. ಭಕ್ತಿಯಮಾಡಿಸಿಕೊಳ್ಳಬೇಕು ಜಂಗಮ. ಕೂಡಲಸಂಗಮದೇವ 109

152. ಮಾಡಿಮಾಡಿ ಕೆಟ್ಟರು ಮನವಿಲ್ಲದೆ, ನೀಡಿನೀಡಿಕೆಟ್ಟರು ನಿಜ ವಿಲ್ಲದೆ, ಮಾಡುವ ನೀಡುವ ನಿಜಗುಣವುಳ್ಳರೆ, ಕೂಡಿಕೊಂಡಿಪ್ಪನಮ್ಮ ಕೂಡಲ ಸಂಗಮದೇವಾ. 112

153. ಮಾಡಿದೆನೆಂಬುದುಮನದಲ್ಲಿ ಹೊಳೆದರೆ, ಏಡಿಸಿಕಾಡಿತ್ತು ಶಿವನ ಡಂಗುರ. ಮಾಡಿದೆನೆನ್ನದಿರಾಲಿಂಗಕ್ಕೆ, ಮಾಡಿದೆನೆನ್ನದಿರಾಜಂಗಮಕ್ಕೆ. ಮಾಡಿದೆ ನೆಂಬುದು ಮನದಲ್ಲಿ ಇಲ್ಲದಿದ್ದರೆ ಬೇಡಿದ್ದನೀವ ಕೂಡಲಸಂಗಮದೇವಾ. 113

154. ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ, ಮುನಿಯ ಬೇಡ, ಅನ್ಯರಿಗೆ ಅಸಹ್ಯಬೇಡ, ತನ್ನಬಣ್ಣಿಸಬೇಡ, ಇದಿರಹಳಿಯಲುಬೇಡ. ಇದೇ ಅಂತರಂಗಶುದ್ಧಿ, ಇದೇಬಹಿರಂಗಶುದ್ಧಿ ಇದೇ ನಮ್ಮ ಕೂಡಲಸಂಗಮ ದೇವರನೊಲಿಸುವಪರಿ. 114

CC-0. Jangamwadi Math Collection. Digitized by eGangotri

155. ಸ್ವಾಮಿಭೃತ್ಯಸಂಬಂಧಕ್ಕೆ ಆವುದು ಪಥವೆಂದರೆ ದಿಟವನುಡಿವುದು ನುಡಿದಂತೆ ನಡೆವುದು. ನುಡಿದುಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲಕೂಡಲ ಸಂಗಮದೇವಾ. 116

156. ದೇವಲೋಕ, ಮರ್ತ್ಯಲೋಕ ವೆಂಬುದು ಬೇರಿಲ್ಲ ಕಾಣಿರಣ್ಣಾ. ಸತ್ಯವ ನುಡಿವುದೇ ದೇವಲೋಕ. ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ, ಅನಾಚಾರವೇನರಕ. ಇದಕ್ಕೆ ನೀವೇ ಪ್ರಮಾಣು ಕೂಡಲ ಸಂಗಮದೇವ. 118

157. ದಯವಿಲ್ಲದ ಧರ್ಮವದಾವುದಯ್ಯ ? ದಯವೇಬೇಕು. ಸಕಲ ಪ್ರಾಣಿಗಳಿಲ್ಲರಲ್ಲಿ. ದಯವೇ ಧರ್ಮದ ಮೂಲವಯ್ಯ ! ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ. 126

158. ಅರ್ಥಕ್ಕೆ ತಪ್ಪಿದರೇನು? ಪ್ರಾಣಕ್ಕೆ ತಪ್ಪಿದರೇನು? ಅಭಿಮಾನಕ್ಕೆ ತಪ್ಪಿದರೇನು ? ಶರಣರು ಶರಣರಲ್ಲಿ ಗುಣವನರಸುವರೆ ? ಕೂಡಲಸಂಗನ ಶರಣರು ನೊಂದರೆ ಸೈರಿಸುವದು. 128

159. ಲಿಂಗವನೆಚ್ಚ ದೀಮನವು. ಜಂಗಮವನೆಚ್ಚ ದೀಮನವು. ಕೋಪರ ಕಂಡರೆ ಒಲ್ಲದೀಮನವು, ಈಮನದ ಭ್ರಮೆಯನೆಲ್ಲವಮರಿಸಿ ನಿಮ್ಮ ಶರಣರಿಗೆ ಶರಣೆಂಬುವ ಕರುಣಿಸು ಕೂಡಲಸಂಗಮದೇವ. ಭಕ್ತನ ಭಕ್ತ 9

160. ದುರ್ವ್ಯಸನಿ, ದುರಾಚಾರಿ ಎಂದೆನಿಸದಿರಯ್ಯಾ ! "ಅವಶ್ಯಮನುಭೋಕ್ತವ್ಯಂ" ಎಂದಿನಿಸದಿರಯ್ಯ ! ಎನ್ನಲಿಂಗವ್ಯಸನಿ ಜಂಗಮಪ್ರೇಮಿ ಎಂದೆನಿಸಯ್ಯಾ ? ಕೂಡಲಸಂಗಮದೇವಾ, ಸೆರೆಗೊಡ್ಡಿ ಬೇಡುವೆನು. 13

161. ಧೃತಿಗೆಟ್ಟು ಅನ್ಯರಬೇಡದಂತೆ, ಮತಿಗೆಟ್ಟು, ಪರರಹೊಗೆಳದಂತೆ ಪರಸತಿಯರ ರತಿಗೆ ಮನವೆಳಿಸದಂತೆ, ಶಿವಪಥ ಒಲ್ಲದವರೊಡನಾಡದಂತೆ, ಅನ್ಯಜಾತಿಯಸಂಗವಮಾಡದಂತೆ, ಎನ್ನಪರಿಪಾಲಿಸು ಕೂಡಲಸಂಗಮದೇವ. 14

162. ಮತ್ತೊಂದ ಕಾಣದೆ, ಮತ್ತೊಂದ ಕೇಳದೆ, ನಿಮ್ಮ ಶರಣರ ಪಾದವಲ್ಲದೆ, ಅನ್ಯವಿಷಯಕ್ಕೆಳಿಸದಂತರಿಸಯ್ಯಾ, ಕೂಡಲ ಸಂಗಮದೇವಾ 15

CC-0. Jangamwadi Math Collection. Digitized by eGangotri

163. ಆಡಿ ಅಳುಪದಿರಾ! ಲೇಸಮಾಡಿ, ಮರುಗದಿರಾ, ಎಲೆಮನವೇ ಕೂಡಿತಪ್ಪದಿರಾ! ನಿನ್ನಬೇಡಿದವರಿಗೆ ಇಲ್ಲೆನ್ನದಿರುಕಂಡ್ಯಾ! ನಾಡ ಮಾತುಬೇಡ. ಸರಿಗೊಡ್ಡಿಬೇಡು ಕೂಡಲ ಸಂಗನ ಶರಣರ. 29

164. ಲಿಂಗದಲ್ಲಿ ಕಠಿಣವುಂಟೆ? **ಜಂಗಮದಲ್ಲಿ ಕುಲವುಂಟೆ?** ಪ್ರಸಾದದಲ್ಲಿ ಅರುಚಿಯುಂಟೆ? ಈ ತ್ರಿವಿಧದಲ್ಲಿ ಭಾವಭೇದವನರಸುವರೆ, ಕೂಡಲ ಸಂಗನುದೇವ ಮನಧಾರೆವಟ್ಟಲೆನ್ನಭಕ್ತಿ. 85

165. ಎನಗಿಂತಕಿರಿಯರಿಲ್ಲ. ಶಿವಭಕ್ತರಗಿಂತ ಹಿರಿಯರಿಲ್ಲ. ನಿಮ್ಮ ಪಾದಸಾಕ್ಷಿ. ಎನ್ನಮನಸಾಕ್ಷಿ. ಕೂಡಲ ಸಂಗಮದೇವ ಎನಗಿದೇದಿಬ್ಯ. 88
(ಸುಂದರವಾದದ್ದು.)

166. ಸೆಟ್ಟಿಎಂಬೆನೆಸಿರಿಯಾಳನ? ಮಡಿವಾಳನೆಂಬೆನೆ ಮಾಚಯ್ಯನ? ಡೋಹರನೆಂಬೆನೆ ಕಕ್ಕಯ್ಯನ ಮಾದಾರನೆಂಬೆನೆಚನ್ನಯ್ಯನ? ಆನುಹಾರುವ ನೆಂಬಪೆ, ಕೂಡಲ ಸಂಗಯ್ಯನಗುವನಯ್ಯ. 93

167. ಕಾಮುವತೊರೆದಾತ, ಹೇಮುವ ಜರಿದಾತ, ಭಾಸುವಿನ ಉದಯಕ್ಕೆ ಒಳಗಾಗದಾತ ಶರಣನು, ಆವಾಗಳು ನಿಮ್ಮಮಾಣದೆ ನೆನೆವರ ಮನೆಯಲು ಶ್ವಾನನಾಗಿರಿಸೋ ಮಹಾದಾನಿ ಕೂಡಲಸಂಗಮದೇವಾ. 107

168. ಮೇಲಾಗಲೊಲ್ಲೆನು, ಕೀಳಾಗಲೊಲ್ಲದೆ, ಕೀಳಿಂಗಲ್ಲದೆ ಹಯನ ಕಲೆವುದೆ?. ಮೇಲಾಗಿ ನರಕದೊಳಗೋಲಾಡಲಾರೆನು. ನಿಮ್ಮಶರಣರ ಪಾದಕ್ಕೆ ಕೀಳಾಗಿರಿಸು ಮಹಾದಾನಿ ಕೂಡಲಸಂಗಮದೇವ. 108

169. ಬ್ರಹ್ಮಪದವಿಯನೊಲ್ಲೆ, ವಿಷ್ಣುಪದವಿಯನೊಲ್ಲೆ, ರುದ್ರಪದದವಿಯನೊಲ್ಲೆ. ನಾನು ಮತ್ತಾವ ಪದವಿಯ ನೊಲ್ಲೆನಯ್ಯ! ಕೂಡಲಸಂಗಮದೇವಾ ನಿಮ್ಮ ಸದ್ಭಕ್ತರ ಪಾದವನರಿದಿಪ್ಪ ಮಹಾಪದವಿಯನೆ ಕರುಣಿಸಯ್ಯ. 109

170. ಚಕೋರಂಗೆ ಚಂದ್ರಮನಬೆಳಗಿನಚಿಂತೆ, ಅಂಬುಜಕ್ಕೆ ಭಾನುವಿನ ಉದಯದಚಿಂತೆ, ಭ್ರಮರಂಗೆ ಪರಿಮಳದ ಬಂಡುಂಬಚಿಂತೆ, ಎನಗೆ ಕೂಡಲಸಂಗಮದೇವರ ನೆನವಚಿಂತೆ. 113

CC-0. Jangamwadi Math Collection. Digitized by eGangotri

171. ಸೂರ್ಯನುದಯತಾವರೆಗೆಜೀವಾಳ, ಚಂದ್ರಮನುದಯ ನೈದಿಲೆಗೆ ಜೀವಾಳ, ಕೂಪರಠಾವಿನಲ್ಲಿ ಕೂಟಜೀವಾಳ. ಒಲಿದಠಾವಿನಲ್ಲಿ ನೋಟವೇ ಜೀವಾಳ, ಕೂಡಲ ಸಂಗನ ಶರಣರಬರವೆನಗೆ ಪ್ರಾಣಜೀವಾಳ ಕೂಡಲ ಸಂಗಯ್ಯಾ. 115

172. ಲಿಂಗವಪೂಜಿಸುತ್ತ ಜಂಗಮದ ಮುಖವನೋಡುತಿಪ್ಪ ಸುಖವ ಕೊಡು ಕಂಡೆಯಾಲಿಂಗವೇ ಪರಮಸುಖವಕೊಡು ಕಂಡೆಯಾತಂದೆ, ಮಹಾಲಿಂಗವೇ ಕೂಡಲಸಂಗಮದೇವಯ್ಯ ಇವೇವರವನಿನ್ನಲ್ಲಿ ಬೇಡುವೆ.121

173. ಎಲ್ಲರಿಗಿಂತಲೂ ಶಿವಭಕ್ತರೇ ಅಧಿಕರು ನೋಡಯ್ಯ. ಇವಕ್ಕೆ ಅಧಿಕವಾಗಿ ಜಂಗಮವಕಂಡೆ, **ಈ ದ್ವಿವಿಧವನೊಂದೇ** ಎಂದು ನಂಬಿದೆ ಕೂಡಲಸಂಗಮದೇವ. 140

174. ನಡೆಯಲರಿಯದೆ, ನುಡಿಯಲರಿಯದೆ ಲಿಂಗವಪೂಜಿಸಿ ಫಲವೇನು? ಅವರ ಸುಖವೆನ್ನಸುಖ. ಅವರದುಃಖವೆನ್ನದುಃಖ ಕೂಡಲ ಸಂಗನ ಶರಣರ ಮನನೊಂದರೆ ನಾನು ಬೆಂದೆನಯ್ಯಾ 151

175. ಕುದುರೆಸತ್ತಿಗೆಯವರ ಕಂಡರೆ ಹೊರಳಿಬಿದ್ದು ಕಾಲಹಿಡಿವರಯ್ಯ ಬಡಭಕ್ತರು ಬಂದರೆ ಎಡೆಯಿಲ್ಲ ಅತ್ತ ಸನ್ನಿ ಎಂಬರಯ್ಯ! ಎನ್ನೊಡೆಯ ಕೂಡಲ ಸಂಗಯ್ಯನವರು ತಡೆಗೆಡಹಿ ಮೂಗಕೊಯ್ಯದೆ ಮಾಬನೇ? 156 (ಬಿಟ್ಟಾನೆ)

176. ಆಚಾರವನ್ನರಿಯಿರಿ. ವಿಚಾರವನ್ನರಿಯಿರಿ. ಜಂಗಮಸ್ಥಲ ಲಿಂಗಕಾಣಿರಯ್ಯ! **ಜಾತಿಭೇದವಿಲ್ಲ. ಸೂತಕವಿಲ್ಲ. ಅಜಾತಂಗೆ ಕುಲವಿಲ್ಲ.** ನುಡಿದಂತೆ ನಡಿಯದಿದ್ದರೆ ಕೂಡಲಸಂಗಯ್ಯ ಮೆಚ್ಚನು ಕಾಣಿರಯ್ಯ. 160

177. ಆರಾಧನೆಯಮಾಡಿದರೆ, ಅಮೃತವಬೆಳಸು, ವಿರೋಧಿಸಿದರೆ ವಿಷವಬೆಳಸು.' ಇದು ಕಾರಣ ಲಿಂಗಜಂಗಮಕ್ಕೆ ಅಂಜಲೇಬೇಕು. ಸ್ಥಾವರಜಂಗಮವೊಂದೆಂದರಿದರೆ, ಕೂಡಲಸಂಗಮದೇವ ಶರಣಸನ್ನಿಹಿತ. 164

178. ಕಾಗೆಬಿಂದಗಳುಕಂಡರೆ, ಕರೆಯದೆ ತನ್ನ ಬಳಗವನೆಲ್ಲವನು? ಕೋಳಿ ಬಿಂದು ಗುಟಕವಕಂಡರೆ ಕರೆಯದೆ ತನ್ನ ಕುಲವನೆಲ್ಲವನು? ಶಿವ

CC-0. Jangamwadi Math Collection. Digitized by eGangotri

ಭಕ್ತನಾಗಿ, ಭಕ್ತಿಪಕ್ಷವಿಲ್ಲದಿದ್ದರೆ, ಕಾಗಿ ಕೋಳಿಗಿಂತ ಕನಕಷ್ಟ ಕೂಡಲ ಸಂಗಮದೇವಾ. ಭಕ್ತನಮಹೇಶ 7

179. ಆಸನಾದರೇನು? ಹೇಮವಿಲ್ಲದಂಗೈಸಬಹುದೆ? ಕೂಡಲಿಲ್ಲೆಂಬುದರಿಂದ ಸಾಯಲುಬಹುದು. ಸೈರಿಸಬಾರದು. ಬೇಡುವರನೋಡಿ ಈಯಲಿಲ್ಲದನ ಜೀವನವದೇತಕೆ ಕೂಡಲಸಂಗಮದೇವಾ ? 8

180. ಭಕ್ತಿಸಂಭಾಷಣೆಯ ನುಡಿಯನುಡಿವೆ. ನುಡಿದಂತೆ ನಡೆವೆ. ನಡೆಯೊಳಗೆ ನುಡಿಯ ಪೂರೈಸುವೆ, ಮೇಲೆ ತೂಗುವತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ ಒಂದು ಜನಕೊರತೆಯಾದರೆ, ಎನ್ನನೆದ್ದಿ. ನೀನೆದ್ದುಹೋಗು ಕೂಡಲ ಸಂಗಮದೇವಾ. 10

181. ಓಡದುವಾತಲೆಂಕನಲ್ಲ(ಸೇವಕ). ಬೇಡುವಾತ ಭಕ್ತನಲ್ಲ. ಓಡಲಾಗದುಲೆಂಕನು,ಬೇಡಲಾಗದು ಭಕ್ತನು, ಓಡೆನಯ್ಯಾ ಬೇಡೆನಯ್ಯಾ ಕೂಡಲ ಸಂಗಮದೇವ. 11

182. ಎಲ್ಲಿ ನೋಡಿದಡಲ್ಲಿ ಸುನವೆಳಸಿದಡೆ, ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ಪರುಷಧುವನು ಮಹಾದೇವಿ ಎಂದುಕಾಂಬೆ ಕೂಡಲಸಂಗಮದೇವಾ. 15

183. ಹರಿವಹಾವಿಂಗೆಂಜೆ, ಉರಿಯನಾಲಿಗೆಗೆಂಜೆ, ಸುರಿಗಿಯ ಮೊನೆಗೆಂಜೆ, ಒಂದಕ್ಕಕ್ಕಂಜುವೆನೊಂದಕ್ಕಳುಕುವೆ. ಪರಸ್ತ್ರೀ ಪರಧನವೆಂಬ ಜೂಜಿಂಗಂಜುವೆ, ಮುನ್ನಂಜದರಾವಣನೇ ವಿಧಿಗೊಳಗಾದ? ಅಂಜುವೆನಯ್ಯಾ ಕೂಡಲ ಸಂಗಮದೇವಾ. 16

184. ದೇವಸಹಿತಭಕ್ತರು ಮನೆಗೆಬಂಡರೆ, ಕಾಯಕವಾವುದೆಂದು ಬೆಸಗೊಂಡನಾದರೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ತಲೆದಂಡ ತಲೆದಂಡ, ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಸಿದರೆ ನಿಮ್ಮಾಣೆ, ನಿಮ್ಮ ರಾಣೆ ನಾಸದಾಣೆ. 22

185. ಲಿಂಗಾಂಗಿಗಳೆಲ್ಲದವರ ಶರಣರ ಸಂಗದೊಳಗಿರದವರ ಕಂಡು ನಾಚುವೆ. ಅವರನುಡಿ ಎನಗೆ ಸಮನಿಸದಯ್ಯ! ಕೂಡಲಸಂಗಮದೇವಾ ನೀನು ಅಲ್ಲಿಲ್ಲದಕಾರಣ. 23

CC-0. Jangamwadi Math Collection. Digitized by eGangotri

186. ತೊತ್ತಿಂಗೇತಕೆ ಲಕ್ಷಣ ? ಬಂಟಂಗೇತಕಾಚಾರ ? ಆಗಮುನೇ ಕೆಡಿಂಗರಿಗೆಂಗೆ, (ಸೇವಕ) ನಿಮ್ಮ ಒಕ್ಕುದ ಸುಂಬವಂಗೆ, ವಿಧಿನಿಷೇಧಗಳುಂಟೆ ಕೂಡಲಸಂಗಮದೇವಾ ? ನಿಮ್ಮ ನಂಬುವದೊಂದೇ ಆಚಾರವಯ್ಯಾ. ಭಕ್ತನ ಪ್ರಸಾದಿ 9

187. ಪಾದೋದಕವಕೊಂಬೆ, ಪ್ರಸಾದವಕೊಂಬೆ, ಅರ್ಥಪ್ರಾಣಾಭಿಮಾನನಿಮ್ಮದೆಂಬೆ, ಶಾತ್ರಿಯಲೊತ್ತೆಕೊಂಬ ಪಾತಕಿಸೂಳೆಯಂತೆ, ಬರಿಯ ಮಾತಿಂಗೊಲಿವನೇ ನಮ್ಮ ಕೂಡಲಸಂಗಮದೇವಾ ? 11

188. ಅಷ್ಟದಳಕಮಲವಸುತ್ತುವ ಜೀವಾತ್ಮನು ತಾನು ಮೆಟ್ಟಿದ ದವಳನರಿಯದೆ, ಭಕ್ತನೆಂತೆಂಬೆ? ಆನುಶರಣನೆಂತೆಂಬೆ? ಆನುಲಿಂಗೈಕ್ಯನೆಂತೆಂಬೆ ಕೂಡಲಸಂಗಮದೇವಾ, ಎನ್ನ ಮನವು ಸಮಾಧಾನವಾಗದನ್ನಕ್ಕರ. ಭಕ್ತನ ಪ್ರಾಣಲಿಂಗಿ 4

189. ವಾರವೆಂದರಿಯೆ, ದಿನವೆಂದರಿಯೆ, ಏನಂದರಿಯೆನಯ್ಯಾ! ಇರುಳೆಂದರಿಯೆ, ಹಗಲೆಂದರಿಯೆ, ಏನಂದರಿಯೆನಯ್ಯಾ! ನಿಮ್ಮುವ ಪೂಜಿಸಿ ಎನ್ನವ ಮರೆದೆ ಕೂಡಲಸಂಗಮದೇವಾ. ಭಕ್ತನ ಶರಣ 6

190. ಅಷ್ಟವಿಧಾರ್ಚನೆ ಷೋಡಶೋಪಚಾರಪನಂಪಂದಿನ ಕೃತ್ಯವನಂದಂದಿಂಗೆ ಆನುಮಾಡಿಶುದ್ಧನಯ್ಯಾ ! ಹಂಗು ಹರಿಯಿಲ್ಲದಕಾರಣ, ಕೂಡಲಸಂಗಮದೇವಾ, ನಿಃಫಲದಾಯಕನಾಗಿ, ಅನುಮಾಡಿ ಶುದ್ಧನಯ್ಯ. ಭಕ್ತಸ್ಥೈರ್ಯ 2

191. ಹೊಲಬುಗೊಂಡರಸಬೇಡ. ಬರಿದುತೆರಬೇಡ. ಒಲಿದರೊಮ್ಮೆ ಶಿವಶರಣೆನ್ನಿರಯ್ಯ ಒಂದುಸೊಲ್ಲಿಂಗೆಮುಕ್ತಿಸಿದ್ಧಿ ಕೂಡಲಸಂಗಮದೇವಭಕ್ತಿಲಂಪಟನಾಗಿ. ಭಕ್ತಿಸ್ಥಲ66

192. ಕೆಡೆನಡೆಯದೆ, ಕೆಡೆನುಡಿಯದೆ, ಅನ್ಯರ ಪ್ರತಿಪಾದಿಸದೆ ಇದ್ದರೆ, ಏನಕೊಡನಯ್ಯ ಲಿಂಗವು ತಾನೇನಬೇಡಿದ್ದನೀವನಾಗಿ. ನಂಬಿಕೆಯುಳ್ಳ ಶಿವಭಕ್ತಂಗೆ ಇದೇ ದಿವ್ಯ ಕೂಡಲಸಂಗಮದೇವಾ 115

193. ಶ್ರೀ ವಿಭೂತಿಯ ಪೂಸದೇ ಇದ್ದವನ, ಶ್ರೀ ರುದ್ರಾಕ್ಷಿಯ ಧರಿಸದೇಇದ್ದವನ, ನಿತ್ಯಲಿಂಗಾರ್ಚನೆಯಮಾಡದವನ, ಜಂಗಮವೇ ಲಿಂಗವೆಂದರಿಯಪವನ, ಸದ್ಭಕ್ತರ ಸಂಗದಲ್ಲಿರದವನ ಎನಗೊಮ್ಮೆತೋರದಿರು ಕೂಡಲಸಂಗಮದೇವಾ. ಭಕ್ತನಮಹೇಶ 24

CC-0. Jangamwadi Math Collection. Digitized by eGangotri

ಐದನೆಯ ಪ್ರಕರಣ.

ಬಿಜ್ಜಳನ ಚರಿತ್ರೆ.

ಕ್ರೀ. ಶ. ೧೨-ನೆ ಶತಮಾನದಲ್ಲಿ ಕರ್ನಾಟಕದೇಶದಲ್ಲಿ, ಪಶ್ಚಿಮ ಚಾಳುಕ್ಯರಾಜರು ಮಹಾ ಪ್ರಬಲರಾಗಿ ಮೊದಲು ಅಯೋಧ್ಯೆಯಲ್ಲಿಯೂ, ತರುವಾಯ ತಮ್ಮಲ್ಲಿನ, ವಿಜಯಾದಿತ್ಯನು, ಕ್ರೀ. ಶ. 699-ರಲ್ಲಿ ಬರೆಸಿದ, ಸಂಸ್ಕೃತಲಿಪಿಯನ್ನೊಳಕೊಂಡ, ಕಲ್ಲುಮಠದದಿಂದ ಪ್ರಸಿದ್ಧವಾದ, ವಾತಾಪಿ ಪುರವೆಂಬ, ಬಾದಾಮಿನಗರದಲ್ಲಿಯೂ, ಆಮೇಲೆ ಕಲ್ಯಾಣಪಟ್ಟಣದಲ್ಲಿಯೂ ಆಳುತಿದ್ದರು.1 ಈ ಕಲ್ಯಾಣಪಟ್ಟಣವು, ಚಾಳುಕ್ಯ 1-ನೇ, ಸೋಮೇಶ್ವರನಿಂದ ಸ್ಥಾಪಿಸಲ್ಪಟ್ಟು, ಮಿತಾಕ್ಷರಧರ್ಮಶಾಸ್ತ್ರಗ್ರಂಥಕರ್ತನಾದ ವಿಜ್ಞಾನೇಶ್ವರನ ಜನ್ಮಸ್ಥಾನವಾಗಿತ್ತು.2 ಈ ಪಟ್ಟಣವನ್ನು ಮಂಗಳಪುರ, ಮಂಗಳವಾಡಿ, ಕಟಕ, ಬಲ್ಲಹ,ಶುಭವುರಿ, ಶಿಲ್ಪಗಿರಿ ಎಂದು ಸಿಂಗಿರಾಜನೂ ನೈಘಂಟಿಕ ಬೊಮ್ಮರಸನು, (1450) ಸೌಂದರ ಪುರಾಣಿಕ ಬೊಮ್ಮರಸನು, (1450) ಇವರಿಂದ ಬೇರೆಯಾದ ಬೊಮ್ಮರಸನೂ (1500) ಮರಿತೋಂಟದ ಸಿದ್ಧಲಿಂಗಾರ್ಯ ಯತಿಯೂ (1560) ಆಂಧ್ರ ಪಿಡುಪರ್ತಿ ಸೋಮನಾಥನೂ ಆಂಧ್ರ ಅತ್ತಲೂರಿ ಪಾಪಕವಿಯೂ ಜಿ. ಗ್ಯಾರೆಟ್ಟು ದೊರೆಯೂ ಮುಂತಾದವರು ಬೇರೆಬೇರೆ ಹೆಸರುಗಳಿಂದ ಕರೆದಿರುವರು.3 ಇವರ ಪೂರ್ವಜರು, ಚಂದ್ರವಂಶದವರಾಗಿ ಮಾನವ್ಯಗೋತ್ರದ, ಹಾರಿತಪುತ್ರರೆಂಬ ಬಿರುದುಳ್ಳವರೆಂತ ಲಿಪಿಗಳು ಹೇಳುತ್ತಿವೆ. ಮೊದಲು ಇವರು ವಿಷ್ಣು ಭಕ್ತರಿದ್ದು ಅನಂತರ ಶೈವ ಮತವನ್ನು ಸ್ವೀಕರಿಸಿದರೆಂದು ತಿಳಿಯುತ್ತಿದೆ. ಇವರಿಗೆ ವರಾಹವು ಧ್ವಜವಾಗಿತ್ತು. ಇವರು ಚಾಳುಕ್ಯಪರ್ವತದಲ್ಲಿ ಗೌರಿಯನ್ನು ಕುರಿತು ತಪಸ್ಸನ್ನು ಮಾಡಿದುದರಿಂದ, ಇವರಿಗೆ ಚಳುಕ್ಯರು, ಚಾಳುಕ್ಯರು, ಎಂಬ ನಾಮವು ಬಂದಂತೆ ತಿಳಿಯುತ್ತದೆ.4 ಇವರ ಜನ್ಮಕಥೆಯು ತಕ್ಕಮಟ್ಟಿಗೆ ಕಾಶ್ಮೀರ ಕಲಶರಾಜ, 6-ನೇ ಚಾಳುಕ್ಯ, ವಿಕ್ರಮಾದಿತ್ಯ (ತ್ರಿಭುವನಮಲ್ಲ II ಪೆ (ಪೇ) ರ್ಮ (ರ್ಮಾ) ಡಿ, ಕಲಿವಿಕ್ರಮ) ರ ಆಸ್ಥಾನ ಪಂಡಿತನು, ಮುಕ್ತಕಲಶನ ಮರಿ

CC-0. Jangamwadi Math Collection. Digitized by eGangotri

ಮೊಮ್ಮಗನು, ರಾಜಕಲಶನ ಮೊಮ್ಮಗನು, ಜೇಷ್ಟಕಲಶ ಗಂಗಾದೇವಿಯರ ಮಗನು, ಇಷ್ಟರಾಮಾನಂಪ ಕವಿಗಳ ಸಹೋದರನು, ವಿದ್ಯಾಪತಿ ಬಿರುದಾಂಕಿತನು, ಚೌರಪಂಚಾಶಿಕಾ ಕರ್ಣಸುಂದರಿನಾಟಕಾದಿ ಸಂಸ್ಕೃತಗ್ರಂಥಗಳ ಕರ್ತನು, ಆವ ಬಿಲ್ಹಣನ (1085) ವಿಕ್ರಮಾಂಕದೇವಚರಿತ್ರೆಯಲ್ಲಿ ಇದ್ದಂತೆ ತಿಳಿಯಬರುತ್ತದೆ. 5

ಈ ಪಶ್ಚಿಮ ಚಾಳುಕ್ಯರ ಸಾಮಂತರಾದ ಉಚ್ಚಂಗಿಗ್ರಾಮದ ಪಾಂಡ್ಯ ವಂಶದ ಹೈಹಯವೆಂಬ ಕಲಚೂರ್ಯವಂಶದವರು ಜೈನರಾಗಿ ನೊಲಂಬವಾಡಿ ಯೆಂಬ ಶಿವಮೊಗ್ಗ, ಚಿತ್ರದುರ್ಗ, ಬಳ್ಳಾರಿ, ಕಡಪ, ಕರ್ನೂಲು ಜಿಲ್ಲೆಗಳನ್ನು ಒಳಕೊಂಡ ಪ್ರದೇಶವನ್ನೇಲೆ, ಮೊದಲು, ಹೇಮಾವತಿಯಲ್ಲಿಯೂ, ತರುವಾಯ ಕಂಪ್ಲಿಯಲ್ಲಿಯೂ, ರಾಜಧಾನಿಯನ್ನಾಗಿಮಾಡಿಕೊಂಡು ಆಳುತ್ತಿದ್ದರು. 6 ಇವರು, ಕರಿಕಾಲಚೋಳನ ಸಮಕಾಲೀನರಾದ, ಮೊದಲು ಕಂಚಿಯ ಕಾಮಕೋಟ್ಯಾಂಬಿಕ ಭಕ್ತನಾಗಿದ್ದ ತ್ರಿನಯನಪಲ್ಲವನ ವಂಶದಲ್ಲಿ ಹುಟ್ಟಿದಂಥ ಸುಹೇಂದ್ರಾಧಿ ರಾಜನ ವಂಶಿಕರಾದ, ಬಾಣವಂಶವನ್ನು ನಾಶಮಾಡಿದ ವೀರಶೈವರಾದ, ನೊಲಂಬ (ನೊಣಬ) ಎಂಬ ಪಲ್ಲವರಾಜರನ್ನು ಜೈಸಿ ಕೆಲಕಾಲಪ್ರಬಲಿಸಿದ್ದರು. 7

ಭಾರತ, ರಾಮಾಯಣ, ವಿಷ್ಣುಪುರಾಣ, ಮನುಸ್ಮೃತಿ, ಹರಿವಂಶ, ರಘುವಂಶ ಮೊದಲಾದವುಗಳಿಂದಲೂ, ಕಾಸಕುಡಿತಾಂಬ್ರ ಶಾಸನದಿಂದಲೂ, ಕೃಷ್ಣಜಿಲ್ಲೆಯ ಅಮರಾವತಿ, ಕಂಚಿಯ ಕೈಲಾಸನಾಥ ಗುಡಿಯ ಶಿಲಾಶಾಸನಾದಿಗಳಿಂದಲೂ, ವಶಿಷ್ಟನ ಕಾಮಧೇನುವು ಡುರುಕೆಹಾಕುವಕಾಲಕ್ಕೆ ಹುಟ್ಟಿದ, ಸಗರಚಕ್ರವರ್ತಿಯಿಂದ ಅನುಮೋದಿಸಲ್ಪಟ್ಟ ಗಡ್ಡಗಳುಳ್ಳ, ಮೊದಲು ಬ್ರಾಹ್ಮಣರಾಗಿದ್ದು, ತರುವಾಯ, ಮ್ಲೇಚ್ಛ ಅಥವಾ ಯವನರಾಗಿ ವಿಶ್ವಾಮಿತ್ರ ಸಂತತಿಯವರಿದ್ದು, ಶಿಶುಪಾಲನಿಂದ ರಕ್ಷಿಸಲ್ಪಟ್ಟು, ಆಶ್ವತ್ಥಾಮ ಮುನಿಗೆ, ಮೇನಕೆಯಲ್ಲಿಯೊ ಅಥವಾ ಮಾದನಿಕೆಯಲ್ಲಿಯೊ ಹುಟ್ಟಿದ, ಭಾರದ್ವಾಜಗೋತ್ರದ, ಪಾರ್ಥವರು (ಪಾರ್ಥಯನರು ಪಹ್ಲವರು) ಎಂಬ ಈ ಪಲ್ಲವರಾಜರು ವ್ಯಾಘ್ರಧ್ವಜ, ನಂದಿಮುದ್ರೆಯುಳ್ಳವರಾಗಿ ಶೈವರಾಗಿದ್ದರು. 8 ಈ ಶೈವಪಲ್ಲವರನ್ನು ಕುರುಂಬರೆಂಬ ಕುಡುಬರು (ಕದಂಬರು) ಎಂದು ಸರ್ ವಾಲ್ಟರ್ ಎಲಿಯಟ್ ದೊರೆಗಳು ಹೇಳಿರುವುದು, ಇನ್ನೂ ಕೆಲವರು, ಬೌದ್ಧ

CC-0. Jangamwadi Math Collection. Digitized by eGangotri

ರಾದ ಸಾಲಂಕಾಯನ, ಬೃಹತ್ಫಲಾಯನ ಸಂತತಿಯವರೆಂದು ಹೇಳಿರುವುದು ಸಮುಂಜಸವಾಗಿಲ್ಲ. 9 ಏಕಂದರೆ, ಈ ಕುಟುಂಬದವರೆಂಬಕುರುಬರು, ಅಲಿಂಗಿಗಳು; ಅವರಾದರೋ ಲಿಂಗಾರಾಧಕರು.

ಈ ಕಲಚೂರಿಗಳು (ಕಲಚೂರ್ಯರು, ಕಾಲಚೂರಿಗಳು, ಕಾಲಚೂರ್ಯರು, ಕಳಭುರಿ, ಕಾಳಭುರ್ಯ, ಕಳಭೂರಿಗಳು, ಕಲತುರ್ಯ) ಮೇಖಲಾಪರ್ವತದಲ್ಲಿ ಹುಟ್ಟಿದೆ ಯಂದು ಸೋಮವಂಶದ ಪುರೂರವರಾಜನಿಂದ ಶೋಧಿಸಿ ಭೂಮಿಯಲ್ಲಿ ಪ್ರಸಿದ್ಧಮಾಡಲ್ಪಟ್ಟ ನರ್ಮದಾನದೀತೀರದಲ್ಲಿರುವ, ಈಗಲೂ ವಸ್ತ್ರಗಳಿಂದ ಪ್ರಸಿದ್ಧವಾಗಿರುವ ಮಾಹಿಷ್ಮತಿಪುರವೆಂಬ ಈಗಿನ ಮಹೇಶ್ವರ ಗ್ರಾಮದಲ್ಲಿ ಮೊದಲು ಆಳಿದ, ಸಪಸ್ರಬಾಹುವಾದ ಕಾರ್ತ್ಯವೀರ್ಯಾರ್ಜುನನು ತಮ್ಮ ಮೂಲಪುರುಷನೆಂದು, ಸಿದ್ಧಿಗಿರಿದುರ್ಗವಾಸಿಲ್ಲರುಯಂದು ಹೇಳುವರೆಂದು ಇತಿಹಾಸ ಕರ್ತೃರು ಬರೆದಿರುವರು. 10 ಅದುಕಾರಣವೇ ಇವರಿಗೆ ಅರ್ಜುನಾನ್ವಯರೆಂದು ಸಹಾ ಬಿರುದುಂಟು. ಚೇದಿದೇಶವೆಂಬ ಈಗಿನ, ರೇವ ಬುಂದೇಲಖಂಡದಲ್ಲಿನ ಕಲಿಂಜರಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡುದುವಕ್ಕೆ, ಇವರು ಕಲಿಂಜರಪುರವರಾಧೀಶ್ವರರೆಂಬ ಬಿರುದನ್ನು ಪಡೆದು, ಚೈದ್ಯರೆಂದು ಪ್ರಸಿದ್ಧರಾದರು. 11 ಇವರಿಗೆ ಸುವರ್ಣವೃಷಭವೂ ಡಮರುಗವೂ ಧ್ವಜದಲ್ಲಿ ಇದ್ದುವು. 12 ಇವರಿಗೆ ಶನಿವಾರವು ಪೂಜ್ಯದಿನವಾಗಿತ್ತು. 13 ಇವರ ಹೆಸರಿನ ಒಂದು ತ್ರೈಕೂಟಕವೆಂಬ ಶಕವು (ಕಲಚೂರಿ ಸಂವತ್) ಕ್ರೀ. ಶ. 249-ನೆ ಸಂವತ್ಸರದಲ್ಲಿ ಪ್ರಾರಂಭವಾಗುತ್ತಿದೆ. 14 ಈ ಶಕವನ್ನು ಸ್ಥಾಪಿಸಿದ ಮೊದಲನೇ ಅರಸು (ಇವನು ಶಿವನಿಂದ ಬ್ರಾಹ್ಮಣಕನ್ಯಕೆಯಲ್ಲಿ ಹುಟ್ಟಿದ ಕ್ಷತ್ರಿಕನಾದ ಕೃಷ್ಣನೇ ಯಿರಬಹುದು) ಜಬ್ಬಲಪುರದಿಂದ 6 ಮೈಲುಗಳ ಮೇರೆಯಿರುವ ತ್ರಿಪುರವಂಬ ತೇವಾರಗ್ರಾಮದಲ್ಲಿ ಆಳಿದನೆಂದು ತಿಳಿಯುತ್ತದೆ. 15 ಆದರೆ ಕಲಚೂರಿಗಳು ದಕ್ಷಿಣಾಪಥಕ್ಕೆ ಯಾವಕಾಲದಲ್ಲಿ ಬಂದರೆಂಬುವುದು ತಿಳಿಯುವುದಿಲ್ಲ. ಇವರವಂಶಜರು ಚಾಳುಕ್ಯರ ಮಾಂಡಲಿಕರಾಗಿ ಬೇರೆ ಬೇರೆ ಕಡೆಯಲ್ಲಿ ಆಳಿದರು. ಅವರೊಳಗೆ ಕುಂತಲದೇಶವಾಪ ಬಳ್ಳಾರಿ ಪ್ರಾಂತದಲ್ಲಿ ಪಾಂಡ್ಯ ವಂಶದವರೆಂದು, ಅನೇಕಪಾಂಡ್ಯಾಂಕಿತರಾಜರು ಬಹಳ ಪ್ರಸಿದ್ಧರಾಗಿ ಆಳಿದರೆಂದು ತೋರುತ್ತದೆ. 16 ಇದನ್ನು ಚರಿತ್ರಶೋಧಕರು ಮತ್ತು ಜೈನಧರಣಪಂಡಿತನು ಒಪ್ಪಿಕೊಂಡಿರುವರು. ಇವರು ಚಾಳುಕ್ಯರನ್ನು ಸೋಲಿಸಿ ಸುಪಾ ಪ್ರಬಲರಾಪುವಕ್ಕೆ ಭ್ರಮಿಸಿಯೇ ಆಂಧ್ರ

CC-0. Jangamwadi Math Collection. Digitized by eGangotri

ನರಸ ಭೂಪಾಲೀಯ (1570) ಮತ್ತು ನರಪತಿ ವಿಜಯ (ರಾಮರಾಜೀಯ (1650) ಇವುಗಳ ಗ್ರಂಥಕರ್ತರು, ದೇವನಹಳ್ಳಿ ಶಿಲಾಶಾಸನವು, ಯಸ್. ಪಿ. ನರಸಿಂಹುಲುನಾಯುಡು ಯವರು ತಮ್ಮ ಬಲಿಜರಮೂಲಚರಿತ್ರವೆಂಬ ತಮಿಳ ಗ್ರಂಥದಲ್ಲಿ ಇವರನ್ನು ಚಾಳುಕ್ಯದವಂಶದವರೆಂದು, ನರಪತಿವಂಶದವರೆಂದು ಉಲ್ಲೇಖಿಸಿ ಅಂತ್ಯದಲ್ಲಿ ವಿಜಯನಗರದ (ಹಂಪಿಯ) ರಾಜರಮೂಲಪುರುಷರಾದರೆಂದು ಬರೆದಿರುವರು. 17 ಆದರೆ ಇವರ ವಂಶಾವಳಿಯು ಮುರಿಗೆ ದೇಶಿಕೇಂದ್ರನ ರಾಜೇಂದ್ರವಿಜಯ (ಕ್ರೀ. ಶ. 1560 ಮನುರಾಜನಕಾವ್ಯ)ವೆಂಬ ಹವಿರ್ಮಾರಕಾವ್ಯದಲ್ಲಿರುವಂತೆ ಚಾರಿತ್ರಕವಾಗಿ, ಸರಿಮಾಡಿ ಇದರ ಅಂತ್ಯದಲ್ಲಿ ಸೇರಿಸಲ್ಪಟ್ಟಿರುವುದು. 18 ಸಿಂಗಿರಾಜನು ಭ್ರಮಿಸಿದಂತೆಯೇ ಈ ಮುರಿಗೆ ದೇಶಿಕೇಂದ್ರನು ಬಿಜ್ಜಳನತಂದೆಯನ್ನು, ಚಾಳುಕ್ಯನೆಂದು ಭ್ರಮಿಸಿರುವನು. ಆದರೆ ಈ ಹೆಸರಿನವನು ಶಾಸನಾದಿಗಳಿಂದ ಸ್ಥಿರಪಡುವುದಿಲ್ಲವೆಂದು ಧಾರಾಳವಾಗಿ ಹೇಳತಕ್ಕದ್ದಾಗಿದೆ. ಈ ವಂಶಾವಳಿಯ ಮೇಲಿಂದ ಇವರ ಆದಿಮ ಶಾಂತನುನೆಂಬ ರಾಜನು ಕ್ರೀ. ಶ. 11-ನೆ ಶತಮಾನದ ಆದಿಯಲ್ಲಿ ದಕ್ಷಿಣಕ್ಕೆ ಬಂದನೆಂದು ಊಹಿಸಲವಕಾಶವಿರುತ್ತದೆ. 19 ಈ ಕಲಚೂರಿಗಳಲ್ಲಿ ಕ್ರೀ. ಶ. 1128-55 ವರೆಗೂ ಕರ್ಣರಾಜನ ಮೊಮ್ಮಗನಾದ, ಜೋಳಪಾಂಡ್ಯನೆಂಬ ಜೊಗಮನ (ಹೆಮ್ಮಡಿರಾಯ) ಮಗನಾದ, ಪೆರ್ಮಡಿ (ಪೇರ್ಮಾಡಿ ವೀರಮೊರ್ದಿನ್) ರಾಜನು ರಾಗವತಿ (ಸಂಗೀತಚೂಡಾಮಣಿ) ಎಂಬ ಹೆಂಡತಿಯೊಡನೆ, ಅನಂತಪುರ ಜಿ|| ಮಡಕಶಿರ ತಾ|| ಹೇಮಾವತಿಗ್ರಾಮವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತಿದ್ದನು. 20 ಈಗಿನ ಪೆಜರು (ಹೆಂಜರು) ಎಂಬ ಈ ಗ್ರಾಮವು ಐತಿಹಾಸಿಕ ಚಿತ್ರಶೇಖರ, ಸೋಮಶೇಖರ ರಾಜರ ಜನ್ಮ ಸ್ಥಾನದಿಂದ ಪ್ರಸಿದ್ಧವಾಗಿರುವುದು. (ಇವರು, ಹಲಸೂರಿನ (ರತ್ನಪುರಿ) ವಜ್ರಮುಕುಟರಾಯನ ಮಕ್ಕಳಾಗಿ ಇಲ್ಲಿಗೆ ಬಂದು ಪ್ರಸಿದ್ಧರಾದರು. 21) ಇವನನ್ನು ಧರಣೀಂದ್ರಕವಿಯು ಪಂಡಿತಪಾಂಡ್ಯನೆಂದೂ ಚಂದ್ರಸಾಗರವರ್ಣಿಯು ಪದ್ಮಬಿಜ್ಜಳನೆಂದೂ ಉಲ್ಲೇಖಿಸಿರುವರು. 22 ಇವನಿಗೆ ಶಾಸನದಲ್ಲಿ ನಿಜಭುಜಬಲಚಕ್ರವರ್ತಿಯೆಂಬ ಬಿರುದಿದ್ದಂತೆ ತಿಳಿಯುತ್ತದೆ. 23 ಇವನು ಮೊದಲು, ಸೋಮೇಶ್ವರ IIIನ, ಕೈ ಕೆಳಗೆ ಮಹಾಮಂಡಲೇಶ್ವರನಾಗಿ, ತರ್‌ದೇವಾಡಿಯಲ್ಲಿಯಾ ಆಮೇಲೆ ಡಾವಣಗೇರಿಯ ಮಹಾಮಂಡಲೇಶ್ವರನಾಗಿಯೂ ಆಳುತ್ತಿದ್ದನು. 24 ಇವನು ಮಹಾ ಮಂಡಲೇಶ್ವರ ವಿಜಯ ಪಾಂಡ್ಯದೇವನನ್ನು ಸೋಲಿಸಿ ಪ್ರಬಲಿಸಿದ್ದಂತೆ ಊಹಿಸಲವಕಾಶವಿದೆ. 25 ಇವನ ದೇಶವಾವ

CC-0. Jangamwadi Math Collection. Digitized by eGangotri

ನೊಳಂಬವಾಡಿ ಮಂಡಲವು 32 ಸಾವಿರ ವರಹದ ವಾರ್ಷಿಕರಾಜಾದಾಯವನ್ನು ಕೊಡುತ್ತಿತ್ತು. ಇವನ ಕಾಲದಲ್ಲಿ ಮಗನಾದ ಬಿಜ್ಜಳನು ಪರವಾನದಿಯಮೇಲೆ ಯುಗಕ್ರಮವಾಗಿ ಚೌಮುದಿ, ಜಯಂತಿ (ವೈಜಯಂತಿ) ಬೈಂದವಿ, ಬನವಾಸಿ ಎಂದು ಹಸರುಗಳನ್ನು ಪಡೆದ, ಮಧುಕೈಟಭರಾಕ್ಷಸರ ಆವಾಸಸ್ಥಾನವಾಗಿರುವ, ಕದಂಬರ ಕುಲದೇವನಾದ ಮಧುಕೇಶ್ವರನ ಗುಡಿಯಿಂದ ಪ್ರಸಿದ್ಧವಾಗಿರುವ ಬನವಾಸಿ (12000)ಯಲ್ಲಿ ಯುವರಾಜನಾಗಿ ಆಳುತ್ತಿದ್ದಂತೆ ತೋರುತ್ತದೆ. 26

ಈ ರಾಜನ ಕೈಕೆಳಗೆ ಕ್ರೀ. ಶ. 1147 ರಲ್ಲಿ ಪಾಸುಗಲ್ಲು (500) ಎಂಬ ಗ್ರಾಮದ ಸಾಮಂತರಾಜನಾಗಿ ಆಳಿದ, ಪಂಚಾಕ್ಷರಮಂತ್ರಮಹತ್ವವನ್ನು ತಿಳಿಸುವ ಷಡಕ್ಷರಕಂದ (ಮಂತ್ರಗೋಪ್ಯಷಡಕಂದ) ವೆಂಬ ಗ್ರಂಥಕರ್ತನೂ ಭಾರದ್ವಾಜಗೋತ್ರದ ಹೂಳಲಮರಸ ದುರ್ಗಾದೇವಿಯರ ಮಗನೂ ಶೀಲವಂತಾಗ್ರಗಣ್ಯನೂ ಆದ ಕೊಂಡಗುಳಿ ಕೇಶವರಾಜನೆಂಬ ಕೇಶಿರಾಜ (ಕೇಶಿಮಯ್ಯ) ದಂಡನಾಯಕನು, ಹಂಡತಿ ಗಂಗಾದೇವಿ ಮಗ ವಾಸುದೇವರೊಡನೆ ಪರಮಪೀರಶೈವನಾಗಿ ನಂದಿಯುಂಗರವನ್ನು ಧರಿಸಿ ಮಂತ್ರಿಯಾದುಪರಿಂದಲೇ ರಾಜನಿಂದವಮಾನಿತನಾಗಲು, 12000 ವರಹದ ವಾರ್ಷಿಕರಾಜಾದಾಯವುಳ್ಳ ಪೂರ್ವದಲ್ಲಿ ಚೌದ್ಧರಾಗಿ, ಹನುಮಧ್ವಜ, ಸಿಂಹಮುದ್ರೆ, ಜಯಂತಿಪುರವರಾಧೀಶ್ವರರೆಂಬ ಬಿರುದನ್ನು ಪಡೆದ ಕಾದಂಬರಪ್ರಾಂತವಾದ ಬನವಾಸಿ (ಬನವಸೆ) ಮಂಡಲವೆಂಬ ಈಗಿನ ಶಿವಮೊಗ್ಗ ಜಿಲ್ಲೆಯಮೇಲೆ ಮೊದಲು ಹೆಗ್ಗಡೆ (ಸೂಪರಿಂಟೆಂಡೆಂಟು) ಆ ಮೇಲೆ ಸೇನಾಧಿಪತಿ ಆಗಿದ್ದು ಕಡಿಗೆ ಕ್ರೀ. ಶ. 1157 ರಿಂದ ಸ್ವತಂತ್ರಿಸಿ ಬಲಿಪುರದಲ್ಲಿಯೋ ಅಥವ ಶಿವಪುರದಲ್ಲಿಯೋ ಮಹಾದಾನಶೌಂಡನಾಗಿ ಆಳಿ, ಬಸವೇಶ್ವರನ ಜೀವದಗೆಳೆಯನಾಗಿ ಕ್ರೀ. ಶ. 1172 ರಲ್ಲಿ ಮಗನಾದ ವಾಸುದೇವನಿಗೆ ಅಧಿಕಾರವನ್ನು ಕೊಟ್ಟು, ಬಸವೇಶ್ವರನ ಸಂಗಡ ಕೂಡಲಸಂಗಮಕ್ಷೇತ್ರದಲ್ಲಿ ಐಕ್ಯನಾದನು. 27 ಈತನು ಒಳ್ಳೇ ಪ್ರಸಿದ್ಧನಾದ ದಂಡನಾಯಕನಾಗಿದ್ದಂತೆ ತಿಳಿಯುತ್ತದೆ. ಭೀಮಕವಿಯ ಪೌರಾಣಿಕಬೋನದಕೇಶಿಮಯ್ಯನಿರಬಹುದಾದ ಚಾರಿತ್ರಿಕ ಬೊಲಿಕೆಯ ಕೇಶಿಮಯ್ಯನಿಗೂ ಈ ಕೇಶಿಮಯ್ಯನಿಗೂ ಏನೂಸಂಬಂಧ ವಿಲ್ಲವೆಂದು ನಿಸ್ಸಂದೇಹವಾಗಿ ಹೇಳತಕ್ಕದಾಗಿದೆ.28 ಈ ಕೇಶಿಯ ತರುವಾಯ ಪರಮಶೈವನಾದ ಪಂಚಾಕ್ಷರಮಂತ್ರಮಹತ್ವದಿಂದಲೇ ಲೆಖ್ಖವನ್ನು ಬರೆಯುತ್ತಿದ್ದ ಬಲದೇವನು

CC-0. Jangamwadi Math Collection. Digitized by eGangotri

ಮಂತ್ರಿಯಾದನು. ಇವನು ಶ್ರೀ ಬಸವೇಶ್ವರನ ತಾಯಿಯಾದ ಮಾದಲಾಂಬೆಯ ದಾಯಾದಿಯು. ಇವನಿಗೆ ಆಧುನಿಕ ನಂದ್ಯಾಗವುವು ಸಿದ್ಧರಸನೆಂಬ ಹೇಳಿರುವದು ಸಮಂಜಸವಿಲ್ಲ. 29 ಈಸಿದ್ಧರಸನು ತಮ್ಮ ನಿದ್ದನೆಂದು ಸಮಕಾಲೀನ ಸಿಂಗಿರಾಜನು ಹೇಳಿರುವುದು ಸರಿಯಾಗಿರುವುದು. ಇದನ್ನು ಕರ್ನಾಟಕಕವಿಚರಿತ್ರಕಾರನು ಸಮರ್ಥಿಸಿರುವನು.30 ಷಡಕ್ಷರಕವಿಯು ಒಂದೆಡೆಯಲ್ಲಿ ಮಾದಲಾಂಬೆಯ ತಮ್ಮನೆಂದೂ ಮತ್ತೊಂದೆಡೆಯಲ್ಲಿ ಅದೇ ಮಾದಲಾಂಬೆಯ ಅಣ್ಣನೆಂದೂ ಉಲ್ಲೇಖಿಸಿರುವುದು ವಿಚಾರಣೀಯವು. 31 ಕ್ರೀ. ಶ.1165ರಲ್ಲಿ ಹಾನುಗಲ್ಲು (500) ಸಾಮಂತರಾಜನಾದ ಸಿದ್ಧಪ್ಪಯ್ಯನು ಇವನೇಯೆಂದು ನಿಸ್ಸಂದೇಹವಾಗಿ ತರ್ಕಿಸಿ ಹೇಳತಕ್ಕದ್ದಾಗಿದೆ.32 ಈ ಬಲದೇವನಿಗೆ ಗಂಗಮ್ಮನೆಂಬ ಒಬ್ಬಮಗಳು, ಸಿದ್ಧರಸನಿಗೆ ಮಧುವರಸ, ನೀಲಮ್ಮನೆಂಬ ಮಕ್ಕಳು ಇದ್ದರೆಂದು ತೋರಿಬರುತ್ತಿದೆ. 33 ಅದರೊಳಗೆ, ಆಧುನಿಕ ನಂದ್ಯಾಗವುದಮೇಲಿಂದ ಮಧುವರಸನು ಸಿದ್ಧರಸನಮಗನಾಗಿದ್ದನೆನ್ನುವದು ವಿಚಾರಣೀಯವಾಗಿದೆ.

ಬಲದೇವನಕಾಲದಲ್ಲಿ, ಪೆರ್ಮಡಿರಾಜನು ಸಾಯಲು, ತ್ರಿಭುವನಮಲ್ಲ ಭುಜಬಲಚಕ್ರವರ್ತಿಬಿರುದಾಂಕಿತನಾದ ಬಿಜ್ಜಳನು ಕ್ರೀ. ಶ. 1156 ನೇ ಸಂವತ್ಸರಕ್ಕೆ ಸರಿಯಾಗುವ ಧಾತುಸಂವತ್ಸರದಲ್ಲಿ ರಾಜ್ಯಾಭಿಷಿಕ್ತನಾದನೆಂದು ಚಂದ್ರಸಾಗರನೂ ಅನೇಕಚರಿತ್ರಶೋಧಕರೂ ಬರೆದಿರುವರು.34 ಇವನಿಗೆ ಬಿ(ವಿ)ಜ್ಜ, ಬಿ(ವಿ)ಜ್ಜಣ(ಳ) ಪ್ರಥಮ ನಿಶ್ಶಂಕಮಲ್ಲ, ತ್ರಿಭುವನಮಲ್ಲ, ಸುರಬಿಜ್ಜಣ (ಳ) ಇಂದ್ರವೈಭವವೆಂಬ ಹೆಸರುಗಳೂ ಬಿರುದುಗಳೂ ಇದ್ದವೆಂದು ತಿಳಿಯುತ್ತದೆ. 35 ಈ ಸುರಬಿಜ್ಜಣನೆಂಬ ಹೆಸರನ್ನು ಮೊದಲು ಕಾರುನಾಡಿನ ರಾಜಧಾನಿಯಾದ ಹೇಮಾವತಿಯನ್ನು ಬಿಟ್ಟು, ವರಹಾವತಾರದಲ್ಲಿ ಎಡಬಲಕೋರೆದಾಡೆಗಳಿಂದ ಬೆವರಾಗಿಹುಟ್ಟಿದ ತುಂಗ-ಭದ್ರೆ ಎಂಬ ಸಂಯುಕ್ತನದಿಯ ತೀರದಲ್ಲಿರುವ, ಲೋಕಕ್ಕೂ ಸಸ್ಯಾದಿಗಳಿಗೂ ಸಂತೋಷವನ್ನುಂಟುಮಾಡುವ ತಮಗಿಂತ ಪೂರ್ವದಲ್ಲಿ ಆಗಾಗ ರಾಜಧಾನಿಯಾಗಿರುತ್ತಿದ್ದ,ದ ಕ್ಷೀಣಪಾಂಚಾಲ ದೇಶದ ದೃಪದನರಾಜಧಾನಿಯಾದ ಪಶ್ಚಿಮೋತ್ತರ ಪರಗಣೆಯಲ್ಲಿರುವ ಫರುಕಾಬಾದುಜಿಲ್ಲಾ, ಫಥೇಫರ್‌ಗೆ ಈಶಾನ್ಯಕ್ಕೆ 28 ಮೈಲುಗಳ ಅಂತರದಲ್ಲಿರುವ, ಕಾಂಪಿಲ್ಯವೆಂಬ ಪಟ್ಟಣದಿಂದ ಬೇರೆಯಾದ, ಬಳ್ಳಾರಿ ಜಿಲ್ಲೆಯಲ್ಲಿರುವ ಕಂಪ್ಲಿಯೆಂಬ ಪಟ್ಟಣಕ್ಕೆ ಬಿಜ್ಜಳನು ವರ್ಗಾಯಿಸಿದುದರಿಂದ, ಈಹೆಸರು ಬಂದಂತೆ

CC-0. Jangamwadi Math Collection. Digitized by eGangotri

ಚಂದ್ರಸಾಗರನು ವರ್ಣಿಸಿರುವದು ಸಾರ್ಥಕವೆಂದು ಊಹಿಸಲವಕಾಶವಿದೆ. ಆದುದರಿಂದಲೇ ಏನೋ ಈ ಪ್ರಾಂತಕ್ಕೆ ಪೂರ್ಯಭದ್ರವೆಂಬ ಹೆಸರಿತ್ತೆಂದು ತಿಳಿಯುತ್ತದೆ. 36 ಇವನು ಪಿಂಗಳವರ್ಣದವನಿದ್ದನೆಂದು ತಿಳಿಯುತ್ತದೆ. 37 ಇವನ ಹೆಂಡತಿಯು ಪಾಂಡ್ಯದೇಶದ ಮಧುರೆಯ ಹರಿವಿಕ್ರಮನ ಮಗಳಾದ ಸುಪ್ರಭೆಎಂಬುವಳಿದ್ದಳೆಂದು ಚಂದ್ರಸಾಗರನು ಹೇಳುತ್ತಾನೆ. 38 ಧರಣೇಂದ್ರನಾವರೋ ಈಕೆಗೆ ಪಾರ್ವತಿ, ರತ್ನಾವತಿ ಎಂದು ಮುಂತಾಗಿ ಸಂಬೋಧಿಸಿರುವನು 39 ಆದರೆ ಹರಿವಿಕ್ರಮನೆಂಬ ಹರಿವೀರಪಾಂಡ್ಯನು ಕ್ರೀ. ಶ. 1051 ರಲ್ಲಿ ಹಾಲಾಸ್ಯ ಮಹಾತ್ಮೆಯ ತಮಿಳಪರಿವರ್ತನರೂಪ ಮಧುರಾಪುರಾಣವನ್ನು ಬರೆದ ಪರಂಜೋತಿಗೆ ಆಶ್ರಯದಾತನಾಗಿದ್ದಂತೆ ತಿಳಿಯಬರುವುದರಿಂದ ಜೈನಕವಿಯ ಹೇಳಿಕೆಯು ನಂಬುವಂತಿಲ್ಲ. ಆದರೆ ಹರಿಹರಶಾಸನದಲ್ಲಿ ವಿಜಲದೇವಿಯುಂದು ಉಲ್ಲೇಖಿಸಿರುತ್ತದೆ. 40 ಮತ್ತು ಜೈನಕವಿಗೆಳಬ್ಬರೂ ಹಂಸ (ಸಿಂಹ) ಧ್ವಜ, ನೇಮಿಎಂಬ ಇಬ್ಬರು ತಮ್ಮಂದಿರು ಈಬಿಜ್ಜಳನಿಗೆ ಇದ್ದರೆಂದು ಬರೆದಿರುವರು. 41 ಆದರೆ ಇವರೊಳಗಣ ನೇಮಿಯು ತಮ್ಮನಿರದೆ, ಬಸವೇಶ್ವರನ ಕೊಂಡೆಯರಲ್ಲೊಬ್ಬನಿದ್ದನೆಂದು ಸಮಕಾಲೀನ ಸಿಂಗಿರಾಜನು ಹೇಳಿರುವುದರಿಂದ, ಒಬ್ಬ ತಮ್ಮನಿದ್ದುದು ನಿಜವೆಂದು ಧಾರಾಳವಾಗಿ ಹೇಳತಕ್ಕದ್ದಾಗಿದೆ. 42 ಈ ಹಂಸಧ್ವಜನಿಗೆ ಸಿಂಗಿರಾಜನು ಕರ್ಣದೇವನೆಂದು ಹೇಳಿರುವುದು ಸರಿಯಾಗಿರುವುದು. ಈ ಕರ್ಣದೇವನಿಗೆ ಕೆಲವರು ಕನ್ಯೇಶನೆಂದು ಕರೆದಿರುವರು. ಸಿಂಹಧ್ವಜನೆನ್ನುವದು ಬಿರುದಾಗಿರಬಹುದು. 43 ಅದರಂತೆ ವಜ್ರದೇವನೆಂಬ ಬೇರೆಹೆಸರುಂಟು. ಚರಿತ್ರೆಶೋಧಕರುಮಾತ್ರ ಈತಮ್ಮನಿದ್ದನೆಂಬ ವಿಷಯದಲ್ಲಿ ಮೌನವನ್ನು ಧರಿಸಿರುವುದರಿಂದ ವಿಚಾರಣೀಯಾಂಶವೆಂದು ಹೇಳುವುದಕ್ಕೆಯಾವ ಅವಕಾಶವೇಯಿಲ್ಲ, ಏಕಂದರೆ ಬಿಜ್ಜಳನು ಯುವರಾಜನಾಗಿ ಪಶ್ಚಿಮಪ್ರಾಂತದ ಸುಮಾರಿನಲ್ಲಿದ್ದಾಗ ಕೋಡತಾಲೂಕು ಮೇದೂರುಗ್ರಾಮದಲ್ಲಿ ಈಕರ್ಣದೇವನು ಹುಟ್ಟಿರಬಹುದೆಂದು ತೋರುವುದರಿಂದಲೂ, ಮತ್ತು ಸಿದ್ಧರಸನ ಹೆಂಡತಿ ಪದ್ಮಗಂಧಿಯ ಸ್ತನ್ಯಪಾನದಿಂದ ನೀಲಮ್ಮನ ಜೊತೆಗೆ ಪಾಲಿಸಲ್ಪಟ್ಟನೆಂದು ಸಿಂಗಿರಾಜನು ಸ್ಥಿರೀಕರಿಸುವುದರಿಂದಲೂ ದೃಢವಾಗಿ ಒಬ್ಬ ತಮ್ಮನಿದ್ದನೆಂದು ಹೇಳತಕ್ಕದ್ದಾಗಿದೆ. 44 ಈಕರ್ಣದೇವನು ಜೈನಕವಿಗಳ ಹೇಳಿಕೆಯಂತೆ ಸಾರ್ಥಕ ಹಂಸ (ಸಿಂಹ) ಧ್ವಜನಾಗಿ ಕರ್ನನಂತೆ ಲೋಕೈಕವೀರನಾಗಿ ಸೊಲ್ಲಾಪುರಪ್ರಾಂತದಲ್ಲಿ ಸಾಮಂತಾಧಿಕಾರವನ್ನು ಮಾಡುತಿದ್ದನೆಂದು ಸಿದ್ಧರಾಮೇಶ್ವರಪುರಾಣದ ಮೇಲಿಂದ ತರ್ಕಿಸತಕ್ಕದಾಗಿದೆ. 45 ಬಿಜ್ಜ

CC-0. Jangamwadi Math Collection. Digitized by eGangotri

ಳನಿಗೆ ಚಾರಿತ್ರಿಕ ಸಿರಿಯಾದೇವಿಯೆಂಬ ಸೀತಾದೇವಿ (ಶೀಲಾದೇವಿ) ಎಂಬ ಒಬ್ಬ ಸಹೋದರಿಯು ಇದ್ದಳೆಂದು ರಾಬರ್ಟ್‌ಸನೆಲ್ಲನೂ ಧರಣೇಂದ್ರನೂ ಬರೆದಿರುವರು. 48 ಇವಳನ್ನು ಮೇಬಲ್‌ಡಫ್ ಎಂಬುವಳು ಮಗಳೆಂದು ಉಲ್ಲೇಖಿಸಿರುವುದು ಸರಿಯಾಗಿತೋರುವದಿಲ್ಲ.47 ಇವಳು ಬಹಳ ಆಚಾರಶೀಲಳಾಗಿ ಕೊಪ್ಪಳ ಸಿಂಬನೂರು, ಹೊಯ್ಸಲರ ದ್ವಾರಾವತಿ ಪುರವೆಂಬ ಹಳೇಬೀಡು, ಜಿನದತ್ತರಾಯನಿಂದ ಸ್ಥಾಪಿಸಲ್ಪಟ್ಟ ಹೊಂಬುಜ, ಬಿದರೆ, ಮಲ್ಯಾಳ, ಮಂಜೇಶ್ವರ, ಚಂದ್ರಬೆಟ್ಟದಲ್ಲಿದ್ದ ಶ್ರುತಕೇವಲಿಯಾದ ಭದ್ರಬಾಹು, ಪೌರ್ಯಚಂದ್ರಗುಪ್ತ, ಮತ್ತು ರಾಷ್ಟ್ರಕೂಟ ಅಂತ್ಯರಾಜನಾದಇಂದ್ರ ಇವರ ಸಮಾಧಿಗಳಿಗೂ, ಸ್ವಚ್ಛವಾದ ಕೆರೆಗೂ, ವಿಂಧ್ಯಬೆಟ್ಟವೆಂಬ ಇಂದ್ರಬೆಟ್ಟದಮೇಲಿನ ಗಂಗರಾಚಮಲ್ಲನ ಮಂತ್ರಿಯಾದ, ಅಜಿತಸೇನಾಚಾರ್ಯನ ಶಿಷ್ಯನಾದ, ಶ್ರೀಷಷ್ಟಿಲಕ್ಷಣ ಮಹಾಪುರಾಣಕರ್ತನಾದ ಅಣ್ಣನೆಂಬ ಕವಿಜನಶೇಖರವಿರುದಾಂಕಿತನಾದ, ಬ್ರಹ್ಮ ಕ್ಷತ್ರ ಶಿಖಾಮಣಿ ಚಾಮುಂಡರಾಜನಿಂದ ಸ್ಥಾಪಿಸಲ್ಪಟ್ಟ, ಅರಿಷ್ಟನೇಮಿಯಿಂದ ಕೆತ್ತಲ್ಪಟ್ಟ ಗೋಮಟೇಶ ವಿಗ್ರಹಕ್ಕೂ ಹಿತ್ತಾಳೆಪಾತ್ರೆಗಳಸಲುವಾಗಿ ಪ್ರಸಿದ್ಧವಾಗಿರುವ ಶ್ವೇತಸರೋವರ (ಧವಳಸರಸ್ಸು, ಗೋಮಟಪುರ, ಜೈನದಕ್ಷಿಣಕಾಶಿ) ಎಂಬ ಶ್ರವಣ ದೇವರ ಬೆಳ್ಗೊಳ ಮುಂತಾದ ತೀರ್ಥಕ್ಷೇತ್ರಯಾತ್ರೆಗಳನ್ನು ರೇವಣನೆಂಬುವನೊಡನೆ ಮಾಡಿಸಂತೆ ತಿಳಿಯುತ್ತದೆ. 48 ಮುಮ್ಮಡಿತೈಲಪನ ಕೈಕೆಳಗೆ ಕಿಸುಕಾಡು (70) ಕೆಲವಡಿ (ಕೆಳವಾಡಿ 300) ಎಂಬ ಪ್ರಾಂತಗಳಮೇಲೆ ಅಧಿಕಾರಿಯಾಗಿದ್ದ ಇವಳಗೆಂಡನಾದ ಯಲಬುರ್ಗೆಯ (ಯರಂಬರ್ಗೆ) ನಾಗಜಾತಿಯ ಸಿಂದವಂಶದ ದ್ವಿತೀಯ ಚಾವುಂಡರು ಮಗನಾದ ಬಿಜ್ಜಳನೊಡನೆ ಟಾಲೆಮಿಯಿಂದ ಕೊಂಡಾಡಲ್ಪಟ್ಟ ಪೆತಿರ್ಗಲ್ ಮತ್ತು ಪ್ರಾಚೀನಕಿಸುವೊಳಲೆಂಬ ಪಟ್ಟದಕಲ್ಲುಗ್ರಾಮದಲ್ಲಿ ಸಾಮಂತರಾಜನಾಗಿ ಮಹಾಮಂಡಲೇಶ್ವರನೆಂಬ ಬಿರುದಿನಿಂದ ಆಳುತ್ತಿದ್ದನು. 49 ಕ್ರೀ. ಶ. 1075 ರಲ್ಲಿದ್ದ ಕದಂಬರ ದ್ವಿತೀಯ ಶಾಂತಿವರ್ಮನ ಹೆಂಡತಿಯಾದ ಪಾಂಡ್ಯವಂಶದ ಸಿರಿಯಾದೇವಿಗೂ ಇವಳಿಗೂ ಏನೂ ಸಂಬಂಧವಿಲ್ಲ. 50 ಪಾಪ ಕವಿಯು ಸಂಬೋಧಿಸುವ ಚಿತ್ರಕನ್ಯೆಯು ಮೇಲಿನತಂಗಿಯೇ ಇರಬಹುದೆಂದು ಊಹಿಸತಕ್ಕದ್ದಾಗಿದೆ. ಇವಳ ಕಥೆಯನ್ನು ಹೇಳುವದಕ್ಕೆ ಅಪೂರ್ವವಾಗಿ ವರ್ಣಿಸಿ ಊರ್ಧ್ವರೇತಯ್ಯನಿಂದ ಲಿಂಗವನ್ನು ಧಾರಣಮಾಡಿಕೊಂಡು ಬಸವಿಯೆಂಬ ಹೆಸರಿನಿಂದ ಸುಪ್ರಸಿದ್ಧಳಾಗಿದ್ದಳೆಂದು ಶಬ್ದಗಳಿಗೆ ವಿಶೇಷಾರ್ಥದಿಂದ ಕಲ್ಪಿಸಿ ಬರೆದಿರುವುದು ಮತದುರಭಿಮಾನ ಮೂಢಕಲ್ಪನೆಯಾದ್ದರಿಂದ ಸಂಬಲರ್ಹವಾಗುವದಿಲ್ಲ. 51

CC-0. Jangamwadi Math Collection. Digitized by eGangotri

ಬಿಜ್ಜಳನಿಗೆ ಸೋಮೇಶ್ವರ, ಸಂಕಮ, ವೀರನಾರಾಯಣ, ಸಿಂಘಣರೆಂಬ ನಾಲ್ವರುಮಕ್ಕಳಿದ್ದರೆಂದು ತಿಳಿಯುತ್ತದೆ. 52 ಜೈನಕವಿಗಳು ಹೇಳುವ ಒಬ್ಬ ಮಗನು ಪವಿತ್ರ ಮೇಲಿನ ಚಾರಿತ್ರಿಕ ಭುವನೈಕಮಲ್ಲಬಿರುದಾಂಕಿತ ಸೋಮೇಶ್ವರನಿಗೆ ಅನ್ವಯಿಸುತ್ತಿದೆ. ಈ ಸೋಮೇಶ್ವರನಿಗೆ ರಾಯಮುರಾರಿ, ಹಾನಗಲ್ಲು ಸಾಮಂತರಾಜನಾದ ಸೋಮದೇವನಿಂದ ಬೇರೆಯಾದ, ಸೋಮ (ಮಿ, ಯಿ, ವಿ) ದೇವ, ಶಿವಬಿಜ್ಜಣ, ರಾಯಬಿಜ್ಜಣ, ಇಮ್ಮಡಿಬಿಜ್ಜಣ, ಚಿಕ್ಕ ಬಿಜ್ಜಣ, ವೀರಬಿಜ್ಜಣ, ಅಳಿಯಬಿಜ್ಜಣ, ಭುಜಬಲಮಲ್ಲ, ಭುವನೈಕಮಲ್ಲ, ಸಮಸ್ತಭುವನಾಶ್ರಯ, ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾಜಪರಮೇಶ್ವರ ಪರಮಭಟ್ಟಾರಕ ಮುಂತಾದ ಬಿರುದುಗಳೂ ಉಪನಾಮಗಳೂ ಇದ್ದವೆಂದು ತಿಳಿಯುತ್ತಿದೆ. ಇವನು ಚಂಪ್ರವಾರ ಹುಟ್ಟಿದ ಕಾರಣ ಸೋಮೇಶ್ವರನೆಂದೂ ಲಿಂಗಧಾರಿಯಾದದ್ದರಿಂದ ಶಿವಬಿಜ್ಜಣನೆಂದೂ ಕಾಲ್ಪನಿಕಸೋದರನಾವನಾದ ಬಸವೇಶ್ವರನ (ಬಸವೇಶ್ವರನಿಗೆ ಸಹೋದರಿಯೇ ಇದ್ದಿಲ್ಲ. ಮತ್ತು ಇರದಂಥವಳನ್ನು ಬಿಜ್ಜಳರಾಜನಿಗೆ ಕೊಡುವದೂ ಅಸಂಭವ) ಪ್ರತಾಪ ಭರದಲ್ಲಿ (ಇದುಸಹಾ ಮೂಢಕಲ್ಪನವೇ) ಇವನ ಹೆಸರು ಅಡಗಿ ಆಕಯ ಬಿಜ್ಜಣನೆಂದು ಮುಂತಾದ ನಾಮಗಳು ಉಲ್ಲೇಖಿಸಲ್ಪಟ್ಟಿರುವದಾಗಲಿ ಜೀರೆಯಿಲ್ಲ. 53 ಇವನಿಗೆ ಸಾವಲದೇವಿಯೆಂಬ ಹೆಂಡತಿಯಿದ್ದಳೆಂದು ತಿಳಿಯುತ್ತಿದೆ. ಈ ರಾಜಾಂಗನೆಯು ಸಭಾಂಗಣದಲ್ಲಿ ಪಾಶ್ಚಾತ್ಯರ ನಾಟ್ಯದಂತೆ ನಾಟ್ಯಾಭಿನಯಾದಿಗಳಿಂದ ರಾಜನ ಮನಸ್ಸಂತೋಷಮಾಡುತ್ತಿದ್ದಳೆಂದು ತಿಳಿಯುತ್ತದೆ. 54 ಸಂಕಮನಿಗೆ ನಿಶ್ಶಂಕಮಲ್ಲನೆಂದೂ ವೀರನಾರಾಯಣನಿಗೆ ಆಹವಮಲ್ಲ (ಅಪ್ರತಿಮಲ್ಲ) ನೆಂದು ಉಪನಾಮಗಳಿದ್ದವೆಂದು ತಿಳಿಯುತ್ತಿದೆ. 55 ಸೋಮೇಶ್ವರನಿಗೆ ಸುಲಕ್ಷಣೆಯಂಬ ಒಬ್ಬ ಮಗಳಿದ್ದು ಅವಳನ್ನು ಸಂಶಯಾಸ್ಪದ ಪಂಚಾಚಾರ್ಯರಲ್ಲೊಬ್ಬರಾದ (ಆಚಾರ್ಯರು ಒಬ್ಬರೇ, ಮೂವರೇ, ನಾಲ್ವರೇ, ಐವರೇ, ಆರೇ, ಹನ್ನೆರಡೇ ಎಂಬ ವಿಷಯವು ಚನ್ನಾಗಿ ಚರ್ಚಿಸಲ್ಪಡುವದು. ನೋಡು ವೀರಶೈವಚರಿತ್ರೆ. ಇವರು ಸಮಕಾಲೀನರೇ? ಯೆಂಬುವದು ಸಹಾ ವಿಚಾರಿಸಲ್ಪಡುವುದು) ಮತಾಂತರ ಸಹಿಷ್ಣುಕಾರಕರಾದ ರೇವಣಸಿದ್ಧರೆಂಬ ರೇಣುಕರು (ರೇವಣಸಿದ್ಧ ಅಥವಾ ರೇಣುಕರು ನಾಲ್ಕಾರು ಜನರಿರುವರು. ಮುಂದೆ ಚರ್ಚಿಸಲ್ಪಡುವುದು) ಮದುವೆಯಾದರೆಂದು ಬೊಮ್ಮರಸನು ನಿರಾಘಾಟವಾಗಿ ಬರೆದಿರುವುದರಿಂದ ಸೋಮೇಶ್ವರನಿಗೆ ಲಿಂಗವಿದ್ದುದು ನಿಜವೆಂದು ತರ್ಕಿಸತಕ್ಕದ್ದಾಗಿದೆ. 56 ಇದನ್ನು ಜೈನಚಂದ್ರಸಾಗರನು ಒಪ್ಪಿಕೊಂಡಿರುವನು. ಮತ್ತು

CC-0. Jangamwadi Math Collection. Digitized by eGangotri

ಇವನಮಗ ರಾಯನಾರಾಯಣನು ಸಂಗಮೇಶ್ವರನಶಿಷ್ಯನಾಗಿ ಕೂಡಲುಗ್ರಾಮ ದಲ್ಲಿ ಅನೇಕ ಶಿಲಾಶಾಸನಗಳಿಂದ ದಾನಗಳನ್ನು ಮಾಡಿಪಂತೆ ಸಹ ಬಲಪಡಿ ಸುತ್ತಿದೆ. 57 ಬಿಜ್ಜಳನ ಸೇನಾಪತಿಗಳು ಮಯೂರಕೇತನು, ಕಾಮದೇವನು, ಗುಪ್ತಕಾರಸ್ಥಾನಾಧಿಪತಿ (C. I. D.) ಮಂಚಿ ಹರಿಭಟ್ಟರಸನು, ಕುಲಪುರೋ ಹಿತನು ಸಿಂಧೋಪಾಧ್ಯಾಯನು, ಆಸ್ಥಾನಪಂಡಿತನು ಅಜಕುಂಡಲನು, ಆಸ್ಥಾ ನದ ಹಾಸ್ಯಗಾರನು ಬೊಮ್ಮನು ಎಂಬುವರಿದ್ದರು. 58 ಹನ್ನೆರಡುಸಾವಿರ ಸೈನ್ಯದಮೇಲೆ ಪ್ರಸಾದಿಯಾದ ಕಾಮದೇವನು (ಜೈನರ ರಾಮನು) ಹೆಂಡತಿ ಗುಣವತಿಯೊಡನೆ ಗ್ರಾಮರಕ್ಷಣಾಧಿಕಾರಿಯಾಗಿದ್ದನು. 59 . ಸ್ವಯಂಪ್ರಭೆ, ಹೆಗ್ಗಡಿತಿಲಕ್ಷ್ಮಿಯೆಂಬುವರಬ್ಬರು ರಾಜನ ಅಂಗರಕ್ಷಕರಲ್ಲಿ ಪ್ರಥಮೆಯರಾಗಿ ದ್ದರು. (Aid-de-camps,60 ಆಕಾಲದಲ್ಲಿ ಸ್ತ್ರೀಯರು ರಾಜೋದ್ಯೋಗ ದಲ್ಲಿದ್ದದ್ದು ನೋಡಿದರೆ ಈಗಿನಕಾಲದಲ್ಲಿ ಪರಮಾಶ್ಚರ್ಯವಾಗಿ ಪಾಶ್ಚಾತ್ಯನಾಗರಿಕ ರಾಜತಂತ್ರಜ್ಞರನ್ನು ಲಜ್ಜಾಸ್ಪದರನ್ನಾಗಿ ಮಾಡುವುದು. ಬಿಜ್ಜಳನು ಅದ್ವಿ ತೀಯ ವಿಕ್ರಮನಿದ್ದನೆಂದು ಅವನ ಬಿರುದುಗಳೇ ಹೇಳುತ್ತವೆ. ಮೊದಲು ಇವನು ಪಶ್ಚಿಮ ಚಾಳುಕ್ಯರಾಜನಾದ ಇಮ್ಮಡಿನೂರ್ಮಡಿತೈಲ ತ್ರೈಲೋಕ್ಯ ಮಲ್ಲ ಎಂಬ ಬಿರುದಾಂಕಿತ ಮುಮ್ಮಡಿತೈಲಪನ ಕೈಕೆಳಗೆ ಪ್ರಸಿದ್ಧ ಸಾಮಂತ ದಂಡಕನಾಗಿದ್ದನೆಂದು ತಿಳಿಯುತ್ತಿದೆ. ಆದರೆ ಮೊದಲು ಇವನು ತನ್ನಕೈಕೆಳಗೆ ಬನವಾಸಿಪ್ರಾಂತದಮೇಲಿನ ಕ್ರೀ. ಶ. 1150-ರಲ್ಲಿ ಕಸಪಯ್ಯ ನಾಯಕನನ್ನು ಕ್ರೀ. ಶ. 1151-ರಲ್ಲಿ ತರ್ದ್ದವಾಡಿಯ (ಬಿಜಾಪುರ) ಮಹಾ ಪ್ರಧಾನಸೇನಾಧಿಪತಿದಂಡನಾಯಕನಾದ ಮೈಲಾರಯ್ಯನನ್ನು ಕ್ರೀ. ಶ. 1155-ರಲ್ಲಿ ಮಹಾಸಾಮಂತಾಧಿಪತಿ ಸೇನಾಪತಿದಂಡನಾಯಕ ಪುರಿಗೆರೆಯ ನುಹಾದೇವರಸ, ಚಾರಿತ್ರಿಕ ಪೋತರಸ (ಪೌರಾಣಿಕ ಪೋಚರಸ) ಛತ್ತಿಮರಸ, ಸದ್ಮರಸ, (ಸೋವರಸ), ಹಾನುಗಲ್ಲಿನ ಕದಂಬವಂಶದ ಸೋಮ (ಸೋವ) ಸವದತ್ತಿಯ (ಸೌಂದತ್ತಿ) ರಟ್ಟವಂಶದ ಮುಮ್ಮಡಿಕಾರ್ತವೀರ್ಯ ಇವರನ್ನು ಸಾಮಂತರನ್ನಾಗಿ ಮಾಡಿಕೊಂಡು ಕ್ರೀ. ಶ. 1156 ರಲ್ಲಿ ಮಹಾಪ್ರಧಾನ ಸಾವಲನಾಯಕನಮೇಲೆ ತಾನು ಸ್ವತಂತ್ರಿಸಿ ಆಳುತ್ತ, ಕ್ರೀ. ಶ. 1157 ರಲ್ಲಿ ಗೋಮಂತಕರಾಜನಾದ ಸೃಗಾಲವಾಸುದೇವನನ್ನು ಕೊಂದ ಶ್ರೀಕೃಷ್ಣನ ಕರವೀರಪುರವೆಂಬ ಈಗಿನಕೋಲ್ಹಾಪುರದ ವಿದ್ಯಾಧರರಾದ ಶಿಲಾಹಾರವಂಶದ ವಿಜಯಾರ್ಕ, ಫ್ರೋಲರಾಜ, ಪೇಗಣಅನೇಕ ಶೈವಸಾಮಂತರ ಮತ್ತು ಕಾಕತೀ ಯರ ಸಹಾಯದಿಂದ ಗಜಯೋಧನಾದ ಮುಮ್ಮಡಿತೈಲಪನನ್ನು ಜೈಯಿಸಿ,

CC-0. Jangamwadi Math Collection. Digitized by eGangotri

ಪ್ರಸಿದ್ಧರಾಜನಾಗಿ ಆಳುವುದಕ್ಕೆ ಮೊದಲು ಮಾಡಿದುದರಿಂದಲೇ ಚಾಳುಕ್ಯ ನಾರಾಯಣನೆಂಬ ಬಿರುದನ್ನು ಪಡೆದನು. 61 ಈ ಸೋತತೈಲಪನು ಅಣ್ಣಿಗೇರಿಯಲ್ಲಿ ನಾಮಕಾರ್ಥವಾಗಿ ರಾಜ್ಯವಾಳಿದನಂತರ ಕ್ರೀ. ಶ. 1163-ರಲ್ಲಿ ವಿಧಿವಶ ನಾದನು. ಇವನು ಸತ್ತನಂತರ ಬಿಜ್ಜಳನು ಬಲಿಷ್ಟರಾಜನಾಗಿ ರಾಜ್ಯವನ್ನು ಪರಿಪಾಲಿಸಿದನು. ಈವಳಗಾಗಿ ಕ್ರೀ. ಶ. 1161 ರಲ್ಲಿ, ಸಗರಚಕ್ರವರ್ತಿಯ ವಂಶದ ಮುಂಜಲದೇವನ ಮಗನಾದ ಕಸಪಯ್ಯನಾಯಕನ ಬಂಧುವಾದ ಬರಮರಸನನ್ನು ಗೆದ್ದು, ಕ್ರೀ. ಶ. 1163-ರಲ್ಲಿ ಬೆಳವೊಲ (300 ನಗರಗುಂದ ಪ್ರಾಂತ)ದ ಅಮ್ಮಣ್ಣನನ್ನು ಸೋಲಿಸಿ ಮತ್ತು ಕ್ರೀ. ಶ. 1165-ರಲ್ಲಿ ಟಾಲೆ ಮಿಯ ಪನ್ನಂಗಲ್, ವಿರಾಟನಗರವೆಂಬ ಈಗಿನಹಾನಗಲ್ಲು ಸಾಮಂತರಾಜನಾದ ಬಲದೇವನ ತಮ್ಮ ಸಿದ್ಧಪ್ಪಯ್ಯ, ಹೆಗ್ಗಡೆ ದಂಡನಾಯಕ ಕರಹಾಟದ ಮಹಾ ಮಂಡಲೇಶ್ವರ ಸಿಂದವಂಶದ ಈಶ್ವರ ಇವರೊಡನೆ ವಿಜೃಂಭಿಸಿ ರಾಜ್ಯವಾಳಿದನು. 62 ಬಿಜಾಪುರಕ್ಕೆ ಬಿಜ್ಜನಹಳ್ಳಿಯೆಂಬ ಹೆಸರಿರುವುದರಿಂದ ಇವನ ಕಾಲಕ್ಕೆ ಉದ್ಭವಿಸಿತೆಂದು ತರ್ಕಿಸತಕ್ಕದ್ದಾಗಿದೆ. 63 ಮೇಲೆಬಂದ ಸಾಮಂತ ಅರಸರಲ್ಲಿ ಕೆಲವರು ವೀರಶೈವರಿದ್ದರೆಂದು ಧರಣೀಂದ್ರನೂ ಪಾಪಕವಿಯೂ ಬರೆದಿರುವಂತೆ ಈಗಲೂ ಅನೇಕ ವೀರಶೈವದೇಶಾಯಿಮನೆತನದವರು ಇರುವರು. 64 ಅಂಬಗ್ರಾಮದಲ್ಲಿ (ನೋಮಿನಾಬಾದು) ಜೈನರಾದ ಪಂಚಮ ಲಿಂಗಾಯಿತರು ಚಾಳುಕ್ಯಸಾಮಂತರಾಗಿ ಪ್ರಭುತ್ವಮಾಡಿದರು. 65 ಜೈನಕವಿ ಗಳು ಬರೆದಿರುವ ಗೌಡ (Gour) ಘೂರ್ಜರ, (Guzarat) ಬರ್ಬರ ಮಗಧ, ಕಾಶ್ಮೀರ, ಕುಂಬಕೋಳ (ಕುಂಬಕೋಣಂ ?) ಮತ್ತು ಸೋದೆಯ ತುರುಕರು (ಮುಸಲರು 12-ನೇ ಶತಮಾನದಲ್ಲಿ ವಿಂಧ್ಯದ ದಕ್ಷಿಣಕ್ಕೆ ಬಂದಿ ರುವದಿಲ್ಲೆಂದು ಚರಿತ್ರೆಶೋಧಕರು ಸ್ಥಿರೀಕರಿಸಿರುವರು)ಮುಂತಾದವರ ಸ್ನೇಹವು ಬಿಜ್ಜಳರಾಜನಿಗೆ ಇತ್ತೆನ್ನುವುದು ಅಸಂಭವವೆಂದು ನಿಶ್ಶಂಕೆಯಿಂದ ಹೇಳ ತಕ್ಕದ್ದಾಗಿದೆ. 66 ಆದರೆ ಮಾಳವದವರ ಸ್ನೇಹವಿತ್ತೆಂದು ತರ್ಕಿಸುವುದಕ್ಕೆ ಆಸ್ಪದವಿದೆ. ಹೀಗೆ ಎಷ್ಟು ಪ್ರಬಲಿಸಿದರೂ ಒಂದುಸಾರಿ ಚಂಗಾಳ್ವರಮೇಲೆ ಹೋದಾಗ ಇವನು ಸೋತಂತೆ ತಿಳಿಯುತ್ತದೆ. 67 ಚಂದ್ರಸಾಗರನು ಹೇಳುವ ಭೂತಿಲಕಪುರದ ಭದ್ರರಾಜ ಭವಾಕ್ಷಿಯರಮಗನಾದ ಕಲ್ಯಾಣರಾಜನು ಮೇಲೆ ಸೋತತೈಲಪನೇಯಿದ್ದನೆಂದು ಹೇಳುವುದಕ್ಕೆ ಯಾವ ಸಂಶಯವೂ ಇಲ್ಲ. 68 ಈ ಬಿಜ್ಜಳನು ಕ್ರೀ. ಶ. 1166-1168-ರಲ್ಲಿ ಕಾಲಾಧೀನನಾದ ನೆಂದು ಅನೇಕ ಚರಿತ್ರಶೋಧಕರು ಬರೆದಿರುವರು. 69 R. ರಾಮಸ್ವಾಯರು

CC-0. Jangamwadi Math Collection. Digitized by eGangotri

ಕ್ರೀ. ಶ. 1154-ರಲ್ಲಿ ಸರಿಯಾದ ಪ್ರಭವ ಸಂವತ್ಸರದಲ್ಲಿ ಸತ್ತಿರುವನೆಂದು ಬರೆದಿರುವರು.70 ಬೆಂಗಳೂರಿನ ಮಹಂತಯ್ಯನು ರಾಕ್ಷಸಸಂವತ್ಸರ ಫಾಲ್ಗುಣ ಶು|| ೯ ಮಂಗಳವಾರ ರಾತ್ರಿಯಲ್ಲಿ ಸತ್ತನೆಂದು ಬರೆದಿರುವನು. 71 ನಿಡುಗಲ್ ಚನ್ನಪ್ಪನ ಕಲಿಶಕವರ್ಷಗಳು ಸಹಾ ಚರಿತ್ರೈವಿರೋಧವಾಗಿರುವುದರಿಂದ ಅಸಿದ್ಧವಾಗಿ ಯಾವೂ ನಂಬಲರ್ಹವಾಗುವದಿಲ್ಲ. 72 ಆದರೆ ಜೈನಧರಣಿಪಂಡಿತನು ಕ್ರೀ. ಶ. 1173-ನೇ ಸಂವತ್ಸರಕ್ಕೆ ಸರಿಯಾಗುವ ವಿಜಯ ಸಂ|| ಕಾರ್ತೀಕ ಶು||೧೦ ಆದಿವಾರದಲ್ಲಿ ಮರಣಹೊಂದಿದನೆಂದು ಬರೆದಿರುವುದು ನ್ಯಾಯ ವಿದ್ದಂತೆ ತಿಳಿಯುತ್ತಿದೆ. 73 ಇವನು ತಾನೇ ಮಗನಿಗೆ ರಾಜ್ಯಾಭಿಷೇಕಮಾಡಿ ಶ್ರೀ ಬಸವೇಶ್ವರರು ಮರಣಹೊಂದಿದ ಒಂದು ವರುಷದ ತರುವಾಯ ಸತ್ತನೆಂದು ಹಿಂದಿನ ಕಥಾಂಶದಿಂದ ಪಾಠಕರಿಗೆ ತಿಳಿದೇಯಿದೆ. ಈ ಬಿಜ್ಜಳನಿಗೆ ಬುದ್ಧಿಸಾಗರ, ಸುಮತಿ (ಸುಬುದ್ಧಿ) ಸುಪ್ರಭೆ, ಅರಿಂಜಯ, ಕುಲಧರ್ಮ, ಸತ್ಯಮಣಿ. ದಾಮೋದರ, ರಾಘವ, ಅಪ್ಸರಸ, ಖಚರ ಜೀಮೂತವಾಹನ ವಂಶಿಕನಾಪ ಕ್ರೀ. ಶ. 1167-ರಲ್ಲಿ ಮಹಾ ಸಾಮಂತನಾಗಿದ್ದ ಶಾಸನಿಕ ಕಾಳೀಯಸುರಸ, (ಪೌರಾಣಿಕ ಕಾಳಿಮ) ಕವಿಯಮಾಧವ (ಕೇಶವ) ಪೋತ ರಸರೆಂಬ 18 ಜನ ಮಂತ್ರಿಗಳಿದ್ದರು. 74 ಈ ಮಂತ್ರಿಗಳಮೇಲೆ ಶ್ರೀ ಬಸವೇಶ್ವರರು ಮುಖ್ಯ ಮಂತ್ರಿಯಾಗಿ ಹೇಗೆ ಪ್ರಸಿದ್ಧನಾದನೆಂಬುವದು ತಿಳಿದೇಯಿದೆ.

CC-0. Jangamwadi Math Collection. Digitized by eGangotri

ಆರನೆಯ ಪ್ರಕರಣ.

1. ಬಾಗೇವಾಡಿ ಗ್ರಾಮವು.

ವಿಜಾಪುರಜಿಲ್ಲೆಯಲ್ಲಿ ಬಾಗೇವಾಡಿತಾಲೂಕಿನ ಮುಖ್ಯಪಟ್ಟಣವು. ಇದು ಗದಗು ಹುಬ್ಬಿಗಿ, ರೈಲುಮಾರ್ಗದ ತೆಲಿಗಿನಿಲ್ದಾಣದಿಂದ ಸುಮಾರು 15 ಮೈಲುಗಳ ದೂರದಲ್ಲಿದೆ. ಮತ್ತು ವಿಜಾಪುರದ ಆಗ್ನೇಯಕ್ಕೆ 25 ಮೈಲುಗಳ ದೂರದಲ್ಲಿದೆ. ಜನಸಂಖ್ಯೆಯು ಸುಮಾರು 5-6 ಸಾವಿರವಿದೆ. ಈ ಪ್ರಾಂತವು ಗಿಡ ಕಂಟಿಗಳಿಲ್ಲದ ಬೈಲುಸೀಮೆಯಾಗಿದೆ. ಮಳೆಯು ವರ್ಷದಲ್ಲಿ ಸುಮಾರು 25 ಅಂಗುಲಗಳು ಬೀಳುತ್ತಿದೆ. ಈ ಪ್ರಾಂತದಲ್ಲಿ ನೀರಿನಕೊರತೆಯಿಂದ ಕೆರೆಗಳು ಬಹಳ ಕಡಿಮೆಯಾಗಿವೆ. ವಾತಾವರಣವ್ರಮಾತ್ರ ಆರೋಗ್ಯವಿರುತ್ತದೆ. ಚಳಿಗಾಲದಲ್ಲಿ ಚಳಿಯೂ ಬೇಸಗೆಯಲ್ಲಿ ಸೆಕೆಯೂ ಸಮವಾಗಿರುತ್ತವೆ. ಈ ಗ್ರಾಮದಲ್ಲಿ ಸಂತೆಯಾಗುತ್ತದೆ. ಅಕ್ಕಿ, ಬೆಲ್ಲ, ವಸ್ತ್ರ, ಕಿರಾಣಪದಾರ್ಥಗಳೇ ಆಮದು ಪದಾರ್ಥಗಳು. ಅರಳೆಧಾನ್ಯಗಳೇ ರಫ್ತು ಪದಾರ್ಥಗಳು. ಇಲ್ಲಿ ತಂತಿ, ಆಂಜೆಯ ಆಫೀಸುಗಳಲ್ಲದೆ ವೈದ್ಯಶಾಲೆಯೂ ಒಂದುಂಟು. ಮಾತನಾಡುವ ಭಾಷೆಯು ಕನ್ನಡವು. ತಾಲೂಕಿನ ಮುಖ್ಯಗ್ರಾಮವಾದುದರಿಂದ ರೈಲಿನಿಂದ ಇಲ್ಲಿಗೆ ಬರಲು ಮೋಟಾರು ಮತ್ತು ಟಾಂಗಗಳ ಅನುಕೂಲವುಂಟು. ಈಗ್ರಾಮವು ಅತಿ ಪ್ರಾಚೀನಕಾಲದಲ್ಲಿ ಭೋಗವತಿಯೆಂಬ ಹೆಸರಿನಿಂದ ಕರೆಯಲ್ಪಡುತ್ತಿತ್ತು. ಇಲ್ಲಿ ಚಳುಕ್ಯರ ಮಾಂಡಲಿಕನೊಬ್ಬನು ಇರುತ್ತಿದ್ದನು: ಇವನು ಸಿಂಗಿರಾಜಪುರಾಣದ ಜನಾರ್ದನಪ್ರಭುವೆಂದು ಭಾಸವಾಗುತ್ತಿದೆ. ಇವನೇ ಶಾಸನಿಕದ್ಯಾವನಾಯಕನಿರಬಹುದು.1 ಈಗ್ರಾಮವು ಅತಿಪ್ರಾಚೀನಕಾಲದ್ದೆನ್ನುವುದಕ್ಕೆ ಈಗಲೂ ಅಕ್ಕಪಕ್ಕದಲ್ಲಿರುವ ಸುರಂಗಗಳೇ ಸಾಕ್ಷಿಭೂತಗಳಾಗಿವೆ. ಮತ್ತು ವಿಶಾಲವಾಗಿ ಭೋಗಭಾಗ್ಯನಿಧಿಯಾಗಿತ್ತೆನ್ನುವುದಕ್ಕೆ ಕರಿಬಂಟನಾಳು, ನಾಗೋಡಗ್ರಾಮಗಳನ್ನೊಳಕೊಂಡು ಪ್ರಾಚೀನಶಿಲ್ಪಕಲಾವಶೇಷಗಳುಳ್ಳದ್ದಾಗಿ ಹಾಳುಬಿದ್ದಂತಿರುವುದು. ಪೂರ್ವಬ್ರಾಹ್ಮಣ ಮೈಸೂರಿನ ವಿಶ್ವೇಶ್ವರಶಾಸ್ತ್ರಿಗಳೆಂಬುವರು ಸ್ಕಾಂದಪುರಾಣದಲ್ಲಿ ಈ ಗ್ರಾಮಕ್ಕೆ ನಂದ್ಯಾಗಮ(ನಂದಿಹಾಳು)ವೆಂಬ ಹೆಸರಿತ್ತೆಂದು ಹೇಳಿದರೆಂದು, ಇದೇಗ್ರಾಮದ ಬಾಪುದೀಕ್ಷಿತ ರಾಮದೀಕ್ಷಿತರೆಂಬುವರು ಹೇಳಿದರು.

CC-0. Jangamwadi Math Collection. Digitized by eGangotri

ಇಲ್ಲಿ ಕರೇಕಲ್ಲುಗುಡ್ಡಗಳಿಲ್ಲದಿದ್ದರೂ ಅಲ್ಲಲ್ಲಿ ಕಪ್ಪುಕಲ್ಲುಗಳೂ, ಗುಂಡುಗಳೂ ಇರುವುದರಿಂದ ಇದನ್ನು ಕೊಡೆಕಲ್ಲು ವೀರಸಂಗಯ್ಯನು ನೀಲಗಿರಿಯಂದು ಉಲ್ಲೇಖಿಸಿರುವಂತೆ ಕಾಣುತ್ತಿದೆ. ಒಂದುಕಾಲದಲ್ಲಿ ಈ ಗ್ರಾಮದ ಮೇರೆಯು ಡೊಣೆಹಳ್ಳಪವರೆಗೂ ವ್ಯಾಪಿಸಿದುದರಿಂದ ಈ ಡೊಣೆಹಳ್ಳದ ಸಾಲುಭೂಮಿಗಳು ವಿಶೇಷಫಲದಾಯಕವಾದುದಕ್ಕೆ, ನವೀನಭಾಗೀರಥಿ ಎಂಬ ಹೆಸರನ್ನು ಪಡೆದಿದ್ದಂತೆ ವರ್ಣಿಸಿದ್ದಾರೆ.

ಗಣಪತಿಗುಡಿಯಲ್ಲಿಯೂ ಸಾರಂಗಬಾವಿಯ ಸವಿಾಪದಲ್ಲಿಯೂ ಕೆಲ ಲಿಪಿಗಳಿವೆ. ಗುಡಿಗಳಲ್ಲಿ ಶೀ ವೃಷಭೇಶ್ವರನದೇ ದೊಡ್ಡದು. ಅದರಿಂದಲೂ, ಶೀ ಬಸವೇಶ್ವರನು ಹುಟ್ಟಿದುದರ ಪ್ರಸಿದ್ಧಿಗೂ ಈ ಗ್ರಾಮವನ್ನು ಬಸವನಬಾಗೇವಾಡಿ ಎಂದು ಜನರು ಕರೆಯುತ್ತಾರೆ. ಇದು ಅಲ್ಲದೆ ನಂದ್ಯಾಗೆಮದಲ್ಲಿ ಹೇಳಿದಂತೆ ಬೇರೆಒಂದು ಸಣ್ಣಬಸವನ ಗುಡಿಯೂ ಉಂಟು. ಇದರ ಸಂಬಂಧಿ ಒಂದು ಹೋರಿಮಟ್ಟಿಯೂ ಇದೆ. ಇದರ ವಿಷಯವಾಗಿ ಗ್ರಾಮಕ್ಕೆ ಅತ್ಥವನ್ನು ವಿಚಿತ್ರವಾಗಿ ಕಲ್ಪಿಸಿದ್ದಾರೆ. ಶೀ ಬಸವನ ಪಲ್ಲಕ್ಕಿಯುತ್ಸವವು ಪ್ರತಿವರ್ಷವೂ ಶ್ರಾವಣಮಾಸದಲ್ಲಿ ಕೊನೆಯ ಸೋಮವಾರಕ್ಕೆ ಹಿಂದಿನಸೋಮವಾರದಲ್ಲಿ ನಡೆಯುತ್ತದೆ. ಶೀಬಸವೇಶ್ವರನಗುಡಿಯು ಹಳೇದಾಗಿ ಬಹುಭವ್ಯವಾಗಿ ಜಕಣಾಚಾರ್ಯನ ಕಟ್ಟಡಗಳಂತೆ ನೋಡತಕ್ಕಂಥಾದ್ದಿರುತ್ತದೆ. ಸುತ್ತಲೂ ಮಂಟಪಗಳಿವೆ. ಗುಡಿಯಲ್ಲಿ ಶೀಬಸವನಮೂರ್ತಿಯಲ್ಲದೆ, ಪೂರ್ವಾಭಿಮುಖದ ಸಂಗಮನಾಥ ಮೂರ್ತಿಯೂ (ಬಸವನಮೂರ್ತಿಗಿಂತಲೂಸಣ್ಣದು)ದಕ್ಷಿಣಾಭಿಮುಖದ ನಂದೀಶ್ವರನಿಲ್ಲದ(ಕಾರಣವುತಿಳಿಯದು) ಮಲ್ಲಿಕಾರ್ಜುನ ಮೂರ್ತಿಯೂ ಇರುತ್ತವೆ. ಗುಡಿಯಲ್ಲಿಯೇ ಒಂದು ಮಂಟಪವು, ಅದರ ಕೆಳಿಗೆ ಮುಚ್ಚಲ್ಪಟ್ಟ ಬಾವಿಯು, ಇರುವುದನ್ನು ನೋಡಿದರೆ ಗುಡಿಯು ಬಹಳವಾಗಿ ಹೂತು ಬಹುಪುರಾತನಕಾಲದ್ದೆಂದು ತೋರುತ್ತದೆ. ಕಾಳಿಂಗರಾಯ, ಚನ್ನವ್ವ, ಚಿಗಳಿ ಬಸವಗಳ ಮೂರ್ತಿಗಳು ಕೇವಲ ಆಧುನಿಕ ಕಲ್ಪನಾವಿಗ್ರಹಗಳಾಗಿವೆ. ಶೀ ಬಸವೇಶ್ವನಿರುವ ಪ್ರದೇಶವು ಅತಿಪ್ರಾಚೀನವಾದುದು. ಮೂರ್ತಿಯು ದೊಡ್ಡದಾಗಿ ಸುಂದರವಾಗಿದೆ. ಗುಡಿಯ ಗೋಡೆಯು ಬಹಳದಪ್ಪವಾಗಿದೆ. ಅದರೊಳಗೆ ಎರಡು ಮಾಡಗಳಲ್ಲಿ ನಿಕ್ಷೇಪವಿರುವುದೆಂದುನಂಬಿ ಕೀಳಿಸಲಾಗಿ ಏನೂದೊರೆಯದುದಕ್ಕೆ ಪುನಹಮುಚ್ಚಿಹಾಕಿರುವರು. ಶೀಬಸವೇಶ್ವರನಿಗೆ 1 ಕಾಲಗಗ್ಗರಿ 2 ಕರ್ಣಕುಂಡಲ 3 ಹುಲಿಗೆಜ್ಜೆ 4 ಕೊರಳಪಟ್ಟೆ (ರೇಸಿಮೆಯಮ್ಮ,) 5 ಲಿಂಗದಕಾಯಿ, 6 ಸರ

CC-0. Jangamwadi Math Collection. Digitized by eGangotri

ಪಳಿ 7 ಮುತ್ತಿನಬಾಸಿಂಗ 8 ಕೋಡಣಸು 9 ಹಣಿಪಟ್ಟಿ 10 ಮಾಗಡ 11 ಕೋರೆವಿಾಸೆ 12 ಕಣಬೊಟ್ಟು 13 ಗೋಡಂಬಿಗೆಜ್ಜಿ ಮುಂತಾದ ಅತಿಪುರಾತನವೆಳ್ಳಿಬಂಗಾರದ ಆಭರಣಗಳು ಶ್ರೀ ಮಾದರಸನಿಂದಮಾಡಿಸಲ್ಪಟ್ಟವು, 15 ಮೇಲೆಯೇಇವೆ. ಪೂಜಾರಿಯು ಅವಿದ್ಯಾಭಕ್ತನಿರುವನು. ಗುಡಿಯಲ್ಲಿ ಧ್ವಜವು (ಮೂಲಕಂಬವು) ಪಡುವಲದಿಕ್ಕಿನಲ್ಲಿದೆ, ಈಗಿನ ಉತ್ಸವಕಟ್ಟಿಯಮೇಲೆಯೇ ಮಾದರಸ ಮಾದಲಾಂಬೆಯರ ದಹನಸಂಸ್ಕಾರವಾಯಿತೆಂದು ಹೇಳುತ್ತಾರೆ. ಪೂರ್ವದಿಕ್ಕಿನಲ್ಲಿ ಹೊರಗೆ ಒಂದುದೊಡ್ಡ ಹಳೇಭಾವಿಯು ಅಲ್ಲಲ್ಲಿ ಬಿದ್ದದ್ದು ಇರುತ್ತದೆ. ಇದರಲ್ಲೇಯೇ ಮುಳುಗಿದ ಕೃಷ್ಣನೆಂಬ ಸಂಗಡಿಗನನ್ನು ಬಾಲ್ಯದಲ್ಲಿ ಶ್ರೀಬಸವೇಶ್ವರನು ಮೇಲಕ್ಕೆ ತೆಗೆದದ್ದು. ಶ್ರೀ ಬಸವನ ತಲೆಯಮೇಲೆ ಒಂದಪೂರ್ವ ಚಿನ್ಹೆಯು ಇರುವುದು. ಇದರದೆಶೆಯಿಂದ ಬ್ರಾಹ್ಮಣಾದಿಗಳೆಲ್ಲರೂ ಭಯಭಕ್ತಿಯುತರಾಗಿ ನಡೆದುಕೊಳ್ಳುತ್ತಾರೆ. ಗುಡಿಯಲ್ಲಿ ಪೂಜಾದಿಗಳಲ್ಲಿ ಅಕ್ರಮುಗಳೇನಾದರೂ ಜರುಗಿದಲ್ಲಿ ಯಾವದಾದರೂ ಪೀಡಾದಿಗಳಿಂದ ಜನರು ನರಳುವರೆಂದು ಭಾವಿಸುವರು. ಶ್ರೀ ಬಸವೇಶ್ವರನ ವಂಶದವರೆಂದು ಕರೆದುಕೊಳ್ಳುವ ಒಂದು ವಂಶದವರು ಇರುತ್ತಾರೆ. ಈ ವಂಶದಲ್ಲಿ ಪೂರ್ವದಲ್ಲಿ ಮಹಾರುದ್ರಪ್ಪನೆಂಬುವರು ಪರಮ ಭಕ್ತರಾಗಿ ಆಗಿಹೋದರು. ಅವರ ಸಮಾಧಿಯು ಭಾವಿಯ ಹತ್ತರದಲ್ಲಿದೆ. ಆಕುಟುಂಬದಲ್ಲಿ ಈಗಲೂ ಮಾದಪ್ಪನೆಂಬ ಹೆಸರಿಂದ ಒಬ್ಬರು ಇದ್ದಾರೆ. ಇವರ ಮಕ್ಕಳೇ ಗ್ರಾಮದ ಕುಲಕರ್ಣಿಗಳು. ಇವರ ಮನೆಯಲ್ಲಿ ನಂದಿಪ್ರತಿಮೆಗಳ ಮಲ್ಲಿಕಾರ್ಜುನ ಕಂಬಿಯನ್ನು ಪುರಾತನ ಕಾಲದಿಂದಲೂ ಪೂಜಿಸುತ್ತಾರೆ. ಈ ಮಲ್ಲಯ್ಯನ ಕಂಬಿಯನ್ನು ಒಬ್ಬ ಜಂಗಮರ ಸಂಗಡ ಶ್ರೀಶೈಲಕ್ಕೆ ಕಳುಹಿಸುತ್ತಾರೆ. ಆಗ ಅವರಿಗೆ ಒಂದು ಹೊಸ ಹಚ್ಚಡ ಅಂಗಿ ಮತ್ತು ಒಂದು ಜೊತೆ ಪಾದರಕ್ಷೆಗಳನ್ನು ಕೊಡುತ್ತಾರೆ. ಇವು ಅಲ್ಲದೆ 16 ಎಕರೆ ಭೂಮಿಯನ್ನು ಸಹಾ ಪೂರ್ವದಲ್ಲಿಯೇ ಕೊಟ್ಟಿದ್ದಾರೆ. ಎಲ್ಲ ಕಂಬಿಗಳಿಗೆ ಕಾವಿಬಟ್ಟೆಯು ಇರುತ್ತದೆ. ಈ ಕಂಬಿಗೆಮಾತ್ರ ಬಿಳಿಯಬಟ್ಟೆಯು ಇರುತ್ತದೆ. ಇದಕ್ಕೆ ಎಲ್ಲಿಯೂ ಸುಂಕವನ್ನು ಕೊಡುವಪದ್ಧತಿಯುಇಲ್ಲ. ಶ್ರೀಶೈಲದ ಜಾತ್ರೆಯಲ್ಲಿ ಎಲ್ಲಕಂಬಿಗಳಿಗಿಂತಲು ಈ ಕಂಬಿಯನ್ನೇ ಮೊದಲು ಬರಮಾಡಿಕೊಂಡು ಜಾತ್ರೆಯು ಪೂರೈಸಿದನಂತರ ತಿರುಗಿ ಬಂದಾಗ ಈ ವಂಶಜರು ಆಕಂಬಿಯ ಮಾಹೇಶ್ವರರನ್ನು ವಾದ್ಯವೈಭವಗಳೊಡನೆ ಕರೆತಂದು ಆದಿನದಲ್ಲಿ ಪಂಚಗಣಾರಾಧನೆಗೋಸುಗ ಸಕಲಸಾಹಿತ್ಯಗಳನ್ನುಕೊಟ್ಟು ಕಂಬಿಯನ್ನು ಮನೆಯಲ್ಲಿಳಿಸಿಕೊಂಡು ನಿತ್ಯವೂ ಪೂಜಿಸುತ್ತಾರೆ.

CC-0. Jangamwadi Math Collection. Digitized by eGangotri



2. ಕಲ್ಯಾಣ ಪಟ್ಟಣವು.

ಈಗ್ರಾಮವು ಹೈದರಾಬಾದಿನ ನಿಜಾಮು ಸಂಸ್ಥಾನದಲ್ಲಿ ಬಿದರು ಜಿಲ್ಲೆಯೊಳಗೆ ಜಹಗೀರುಗ್ರಾಮವಾಗಿದೆ. ರಾಯಚೂರು ಮುಂಬಯಿ ರೈಲ್ವೆಯ, ಕಲಬುರ್ಗಿ (ಗುಲ್ಬರ್ಗಾ) ನಿಲ್ದಾಣದಿಂದ ಬೆಣ್ಣೆತೋರೆಯನ್ನು (ಒಂದು ಸಣ್ಣ ನದಿ) ದಾಟಿ ಉಮನಾಬಾದಿನಮೇಲೆ ಹಾಯ್ದು ಹೋದರೆ ಸುಮಾರು 55 ಮೈಲುಗಳ ದೂರದಲ್ಲಿದೆ. ಜನಸಂಖ್ಯೆಯು ಸುಮಾರು 12,000 ವಿದೆ. ವೀರಶೈವರು 10-12 ನೂರು ಜನರಿರುವರು. ಮುಸಲ್ಮಾನರೇ ಹಚ್ಚು. ಪಟ್ಟಣದಲ್ಲಿ 1, ಬುಧವಾರಪೇಟೆ 2, ಷಹಪುರಪೇಟೆ 3, ಖಾಜಾಪುರಪೇಟೆ 4, ಪಾಚ್ಛಾಪುರಪೇಟೆ 5, ಅಲ್ಲಾನಗರ 6, ಕಸಬೆ 7, ಕಾಳಿ 8, ಹೊಸಪೇಟೆ 9, ಸೋಮವಾರಪೇಟೆ 10, ಕೋಟೆ ಮುಂತಾದ ಈಗಿನ ಭಾಗಗಳಿರುವವು. ಭಾಷೆಯು ಕೇವಲ ಕನ್ನಡವಾದರೂ ಮರಾಠಿ, ಉಡದು ಸಮ್ಮಿಶ್ರಣದಿಂದ ಬಹಳ ಕೆಟ್ಟುಹೋಗಿದೆ. ಪೂರ್ವದಲ್ಲಿ ಈ ಪಟ್ಟಣವು ಸುಮಾರು 10 ಮೈಲು ಉದ್ದವೂ 4 ಮೈಲು ಅಗಲವೂ ಇದ್ದಂತೆ ತಿಳಿಯಬರುತ್ತಿದೆ. ಬೆಟ್ಟಗಳಲ್ಲಿ ಈಶಾನ್ಯಕ್ಕೆ 2 ಮೈಲುಗಳ ದೂರದಲ್ಲಿರುವ ಪೂರ್ವಬಲ್ಲಾಳಪುರಭಾಗದ ಬಾಲಕುಂದಿಬೆಟ್ಟವೇ ಮುಖ್ಯವಾದುದು. ಇಲ್ಲಿಯೇ ಶ್ರೀಬಸವೇಶ್ವರನು ಕಲ್ಲನಂದಿಗೆ ಕಾಣವನ್ನು ಮೇಯಿಸಿ ಪವಾಡವನ್ನುಂಟುಮಾಡಿ ಮೆರೆದನು. ಆನೆಗುಡ್ಡ (ಹತ್ತಿಭೇಟ್) ವೆಂಬುವುದು ಉತ್ತರಕ್ಕೆ ಸುಮಾರು ೨೦ ಮೈಲೊಳಗಿನ ದೂರದಲ್ಲಿದೆ. ಇಲ್ಲಿಯೇ ರಾಜನ ಗಜಯೋಧರ ಸೇನಾಶಿಬಿರವಾಗಿತ್ತು. ಈಶಿಬಿರವೇ ಮೊಟ್ಟಮೊದಲು ಯುದ್ಧಪ್ರಸಂಗದಲ್ಲಿ ಎಲ್ಲಕಾರ್ಯಗಳಲ್ಲಿ ಭಾಗಿಯಾಗಿ ಮೇಲೆನಿಸುತ್ತಿತ್ತು. ಮತ್ತು ಕುದುರೆಗಳ ಸೇನಾಶಿಬಿರವು ಪೂರ್ವದಿಕ್ಕಿನಲ್ಲಿ ಸುಮಾರು 16 ಮೈಲುಗಳ ದೂರದಲ್ಲಿರುವ ಭಲಕಿಗ್ರಾಮದಲ್ಲಿತ್ತೆಂದು ಜನರು ಹೇಳುತ್ತಾರೆ. ಈ ಭಲಕಿಯಿರುವ ಭಾಗವನ್ನೇ ಪೂರ್ವಕವಿಗಳು ಬಲ್ಲಹಪುರವೆಂದು ಪ್ರಯೋಗಿಸಿದಂತೆ ಕಾಣುತ್ತಿದೆ. ಇವೆರಡೂ ಈಗಿನ ಆಂಗ್ಲೇಯರ ಕಂಟೋನಮೆಂಟುಗಳಂತೆ ಪೂರ್ವದಲ್ಲಿದ್ದು ಪ್ರಸಿದ್ಧವಾಗಿದ್ದುವು.

ಕೆರೆಗಳು—1 ತ್ರಿಪುರಾಂತಕ, 2 ಆನೆಕೆರೆ, 3 ಗಂಜಿಕೆರೆ, 4 ಮಡಿವಳವಾಚಯ್ಯನಗುಂಡ, 5 ಬಾಂದರವಾಡಿಕೆರೆ, 6 ಕುಂಡಲೇಶ್ವರಕೆರೆ, 7

CC-0. Jangamwadi Math Collection. Digitized by eGangotri

ಕೊಡಂಗೇರಿಕೆರೆ, 8 ವ್ಯಾಣಕೆರೆ. ಕೆರೆಗಳಲ್ಲಿ ನಾನು ನೋಡಿದಮಟ್ಟಿಗೆ ತ್ರಿಪುರಾಂತಕವೇ ದೊಡ್ಡದು. ಇದರ ಮಧ್ಯದಲ್ಲಿ ಇದ್ದ ತ್ರಿಪುರಾಂತಕೇಶ್ವರಾಲಯವು ಹೂತುಹೋಗಿದೆಯಂತೆ. ಇಂಥಾ ಗುಡಿಯು ಹೂಳಬೇಕಾದರೆ ಈ 800 ವರ್ಷಗಳಲ್ಲಿ ಎಷ್ಟುಮಟ್ಟಿಗೆ ಪರಮತೀಯರಾಜರುಗಳಿಂದ ನಾಶವಾಗಿ ಭೂಗತ ಮಾಡಲ್ಪಟ್ಟದ್ದು ವಾಚಕರೇ ಊಹಿಸತಕ್ಕದ್ದಾಗಿದೆ. ಈ ಕೆರೆಯು ಆಳವಾಗಿರದೆ ಅಂಗೈಯೋಪಾದಿಯಲ್ಲಿದೆ. ಆನೆಕೆರೆ ಎಂಬುವಲ್ಲಿಯೇ ಆನೆಗುಡ್ಡದಿಂದಲೂ ಛಲಕಿಯಿಂದಲೂ ಗಜಾಶ್ವಗಳು ಬಂದು ನೀರ್ಕುಡಿಯುತ್ತಿದ್ದವಂತೆ. ಗಂಜಿಕೆರೆಯೆಂಬುವುದು ಬಸವನ ಆರಮನೆಯಿಂದ ಅನ್ನಪಗಂಜಿಯು ಬಂದು ನಿಂತಸ್ಥಳವೆಂದು ಹೇಳುತ್ತಾರೆ ಬಾಂದರವಾಡಿಕೆರೆಯ ಏರಿಯಮೇಲಿಯೇ ಶರಣರು ಕಲ್ಯಾಣವನ್ನು ಬಿಟ್ಟುಬಂದು, ಮೊದಲು ತಂಗಿ, ಆಮೇಲೆ ಶಿವಾರ್ಚನೆ ಪ್ರಸಾದಗಳನ್ನು ತೀರಿಸಿ ಮುಂದಕ್ಕೆ ಹೋದುದು. ಈಹೆಸರಿನ ಗ್ರಾಮವನ್ನು ಈಗಲೂ ಬಂದರು, ಓಡಿಸೆಂಬ ಎರಡು ಪದಗಳ ಆರ್ಕ್ಕದಿಂದ ಸೂಚಿಸುತ್ತಾರೆ. ಆದೇ ಬಾಂದರವಾಡಿಯಾಗಿ ಬದಲಾಯಿಸಿದೆ.

ಲಿಪಿಗಳು:—ಬಸವೇಶ್ವರನ ಗುಡಿಯಲ್ಲಿ 1, ಆಲ್ಲಾನಗರ ಚಾವಡಿ ಸಮೀಪದಲ್ಲಿ 1, ಗುಂಡದಮಠದಲ್ಲಿ 1, ಬಂಗಲೆಯಲ್ಲಿ 1, ತ್ರಿಪುರಾಂತಕ ಅಗಸೆಯಲ್ಲಿ 1, ತ್ರಿಪುರಾಂತಕ ಹನುಮನಗುಡಿಯಲ್ಲಿ 1, ತ್ರಿಪುರಾಂತಕ ಗ್ರಾಮಮಧ್ಯದಲ್ಲಿ 1, ಗಂಜಿಕೆರೆಯಲ್ಲಿ 1, ನವಚೌಡರ ಗವಿಯಲ್ಲಿ 1, (ಇದು ಎರಡು ತುಂಡಾಗಿದೆ,) ಖಾನಾಪುರದಲ್ಲಿ 1, ಮುಂತಾಗಿ 10 ಮೇಲೆಯೇ ಇವೆ. ಇವು ಕನ್ನಡದಲ್ಲಿಯೂ ಸಂಸ್ಕೃತಾಕ್ಷರಗಳಲ್ಲಿಯೂ ಬರೆಯಲ್ಪಟ್ಟವೆ. **ಶಾಖಾನಗರಗಳು:**—1 ತ್ರಿಪುರಾಂತಕ, 2 ಬಾಂದರವಾಡಿ, 3 ಬಲಿಪುರ, 4 ಶಿವಪುರ, 5 ನೀಲಕಂಠ, 6 ಗೋಕುಳ, 7 ರಾಯವಾಡಿ ಇವೆಲ್ಲವೂ ಪೂರ್ವದಲ್ಲಿ ಕಲ್ಯಾಣಕ್ಕೆ ಸೇರಿದ್ದರೂ ಈಗ ಬೇರೆಯಾಗಿವೆ. ಬಾಂದರವಾಡಿಯ ಆಡವಿಯಲ್ಲಿ ಸುಮಾರು 10 ವರ್ಷಗಳ ಕೆಳಗೆ, ಮರಮ್ಮತು ಶಾಖಾಧಿಕಾರಿಗಳು (P. W. D.) ಭೂಮಿಯನ್ನು ಆಗಿಸಲಾಗಿ ಪೂರ್ವದಲ್ಲಿ ಭದ್ರವಾಗಿ ಕಟ್ಟಲ್ಪಟ್ಟ ಕಾಲುವೆಗಳಿದ್ದ ಕುರುಹುಗಳುಕಂಡು ಬಂದಿವೆ. ಗ್ರಾಮಮಧ್ಯದಲ್ಲಿಯೂ ಕಾಲುವೆಗಳಿದ್ದು ಆರಾಮುಗಳಿದ್ದು ವಿರಾಮಕಾಲಗಳಲ್ಲಿ ವಿರಾಜಿಸುವ ಸ್ಥಾನವಾಗಿದ್ದುದಕ್ಕೆ ಕಾಳಿಪೇಟೆಯೊಳಗಿನ ಕುರುಹುಗಳೇ ಸಾಕ್ಷಿಭೂತವಾಗಿ ಬಲಪಡಿಸುತ್ತಿವೆ. ಈ ಗ್ರಾಮವೇ ಕಲ್ಯಾಣಪಟ್ಟಣದ ಎಲ್ಲೆಯಗಡಿಯಾಗಿತ್ತೆಂದು

CC-0. Jangamwadi Math Collection. Digitized by eGangotri

ಭಾವಿಸತಕ್ಕದ್ದಾಗಿದೆ. ಕೆಲವರು ಮೋಳಿಗೆ ಮಾರಯ್ಯನ ವಾಸಸ್ಥಾನವಾದ ಮೋಳಗೇರಿ ವರೆಗೂ ವ್ಯಾಪಿಸಿತ್ತೆಂದು ತರ್ಕಿಸುತ್ತಾರೆ. ಇದು ಅಸಂಭವವೆಂದು ನಾನು ಚನ್ನಬಸವಾಲ್ಲಮಾದಿಗಳ ಚರಿತ್ರೆಯಲ್ಲಿ ಮುಂದೆ ವಿಶದೀಕರಿಸುವೆನು. ಬಲಿಪುರವು ಕೋಟೆಗೆ ಸಮೀಪದಲ್ಲಿ ಅಂದರೆ 1 ಮೈಲು ದೂರದಲ್ಲಿದೆ. ಅಲ್ಲಿ ಒಂದು ದೊಡ್ಡ ಗುಟೆಯು ಇತ್ತೆಂದು ಹೇಳುತ್ತಾರೆ. ಈ ಗುಟೆಯು ಹೊಡೆದ ಉತ್ತರಕ್ಷಣದಲ್ಲಿಯೇ ಜಂಗಮರು ಬಸವೇಶ್ವರನ ಆರಮನೆಗೆ ದಾ ಸೋಹಸಂಗಣ್ಣನಯಾಜಮಾನ್ಯದಲ್ಲಿ ಊಟಕ್ಕೆ ಹೋಗುವ ಪದ್ಧತಿಯನ್ನು ಇಟ್ಟು ಕೊಂಡಿದ್ದರೆಂದು ಹೇಳುತ್ತಾರೆ. ಇಲ್ಲಿಯೇ ಮುರಾರಿಯ ಸರದಾರರು ತಪ್ಪು ಮಾಡಿದವರಿಗೆ ಶಿಕ್ಷಿಸಿ ಗಲ್ಲಿಗೆ ಹಾಕುತ್ತಿದ್ದರು. ಆದುದರಿಂದಲೇ ಇದಕ್ಕೆ ಮುರಾರಿಯವರು ಮುಂಡಪಾಳಿಯೆಂಬ ಹೆಸರನ್ನು ಕೊಟ್ಟಂತೆ ಭಾವಿಸಬೇಕಾಗಿದೆ. ಶಿವಪುರದಲ್ಲಿಯೇ ಕೊಂಡಗುಳಿ ಕೇಶಿರಾಜನಿದ್ದು ಮಹದಾನಿರೆಂಬ ಹೆಸರಾಂತನು. ಇಲ್ಲಿಯ ಕುಂಡಳೇಶ್ವರ, ಸಿದ್ಧೇಶ್ವರಾಲಯಗಳು ಪ್ರಸಿದ್ಧವಾಗಿವೆ. ಗೋಕುಲ ಗ್ರಾಮದಲ್ಲಿ ಶ್ರೀ ವೀರಭದ್ರದೇವಾಲಯವು ಸುಪ್ರಸಿದ್ಧವಾಗಿರುವುದು. ಈ ಪ್ರಾಂತದಲ್ಲಿಯೇ ಗೋಭೂಮಿಗಳು ವಿಶೇಷವಾಗಿದ್ದು ಈಗಿನ ಗೋರಕ್ಷಣಶಾಲೆಯಂತಿತ್ತು. (ಪಿಂಜ್ರಾಪೋಲು.) ರಾಯವಾಡಿ ಗ್ರಾಮವು ಕಲ್ಯಾಣಕ್ಕೆ ನೈರುತ್ಯ ದಿಕ್ಕಿನಲ್ಲಿ ಸುಮಾರು 7-8 ಮೈಲುಗಳ ದೂರದಲ್ಲಿದೆ, ಇದು ಬಿಜ್ಜಳನ ವಿಹಾರನಿವಾಸಸ್ಥಾನವಾಗಿತ್ತೆಂದು ತಿಳಿಯುತ್ತಿದೆ. ಇಲ್ಲಿ ಹಜಾರ ಹೊನ್ನಮ್ಮನ ಜಾವಡಿಯು ಹತ್ತರ ಬಿಜ್ಜಳನು ಸತ್ತನೆಂದು ಹೇಳುತ್ತಾರೆ.

